… ಕನ್ನಡಿಗರ ಗ್ರಂಥ ಭಾಂಡಾರಗಳನ್ನು ಅಲಂಕರಿಸಬೇಕೆಂಬುದು ಅವರ ಅಭಿಲಾಷೆ. ಸ್ತುತ್ಯ ಪ್ರಯತ್ನ.

ಶ್ರೀಮಾನ್ ಟೇಂಗ್ಸೆ ಗೋವಿಂದರಾಯರ ಕಥಾರಚನೆಯ ಕೌಶಲ್ಯವು ಈಗಾಗಲೇ ಓದುಗರ ಮೆಚ್ಚುಗೆಯನ್ನು ಪಡೆದು, ಸೇವೆಗೆ ಸಿದ್ಧವಾಗಿರುವ ವಸ್ತು. ಈ ಚಿಕ್ಕಪುಸ್ತಕದಲ್ಲಿರುವ ಒಂದೊಂದು ಕಥೆಯೂ, ಅವರ ಲೇಖನ ಕಲೆಯ ಜಾಣ್ಮೆಯನ್ನು ಪ್ರದರ್ಶಿಸುತ್ತಿದೆ. ಶ್ರೀ. ಬೇಂದ್ರೆಯವರು ತಮ್ಮ ಮುನ್ನುಡಿಯಲ್ಲಿ ಹೇಳಿರುವಂತೆ ಟೇಂಗ್ಸೆಯವರ ಕಥನ ಚಮತ್ಕೃತಿ, ಅವರ ದೃಷ್ಟಿಯ ವಿವಿಧ ದಿಶೆ, ಅವರ ವಿದ್ಯಾಪ್ರೀತಿ, ರಸಿಕತೆ, ಮಾರ್ಮಿಕತೆ, ನಾವೀನ್ಯ ಬುದ್ಧಿಯ ಪ್ರಗತಿಶೀಲ ದೃಷ್ಟಿ ಇವೆಲ್ಲವೂ ಅವರ ಒಂದೊಂದು ಕಥೆಯಲ್ಲೂ ಒಂದೊಂದು ಬಗೆಯಾಗಿ ರಂಜಿಸುತ್ತಿವೆ. ಕಥೆಗಳಲ್ಲಿ ನಾವೀನ್ಯತೆ ಪ್ರಗತಿಶೀಲ ದೃಷ್ಟಿಯಿದ್ದರೂ, ಅಪ್ರಾಸಂಗಿಕ ವಿಚಾರವಿಲ್ಲದೆ, ಅಶ್ಲೀಲಪದ ಪ್ರಯೋಗವಿಲ್ಲದೆ, ಕಥೆಗಳು ಸ್ವಾರಸ್ಯವಾಗಿವೆ. ಶ್ರೀ ರಾಯರಿಂದ ಇನ್ನೂ ಈ ಬಗೆಯ ಹಲವು ಗ್ರಂಥರಚನಾ ಕಾರ್ಯವು ನಡೆದು ಭಾಷಾಸೇವೆಯು ಸಾಗಲೆಂದು ಆಶಿಸುತ್ತೇವೆ. — ಸಂಪಾದಕ '**ಸುಭೋಧ**' **ಬೆಂಗಳೂರು.**

ಕರ್ನಾಟಕದ ಸುಪ್ತ ಲೇಖಕರಲ್ಲೊಬ್ಬರಾದ ಶ್ರೀ. ಟೇಂಗ್ಸೆ ಗೋವಿಂದರಾಯರು ಹಿಂದೊಮ್ಮೆ ಬರೆದ ಕತೆಗಳ ಸಂಗ್ರಹವಿದು. ಉತ್ತಮ ಕತೆಗಳನ್ನು ನೀಡಬಲ್ಲ ಶಕ್ತಿ ಇವರಲ್ಲಿದೆ ಎಂಬುದು ಈ ಪುಸ್ತಕವನ್ನೋದಿದ ಎಲ್ಲ

(೩ನೆಯ ಪುಟ ನೋಡಿರಿ.)

ಇದು ಬೆಳಗಾಂವಿ ಡಿಸ್ಟ್ರಿಕ್ಟ ಹೆಡ್‌ಮಾಸ್ತರ ಬೋರ್ಡಿನವರಿಂದ ಹೈಸ್ಕೂಲುಗಳ ೪ನೇ ತರಗತಿಗೆ ಪಠ್ಯಪುಸ್ತಕವಾಗಿ ಮಂಜೂರಾಗಿದೆ.

ವಿಜಯ ಗ್ರಂಥಮಾಲೆಯ ೧ನೆಯ ಕುಡಿ

ದಾಸರ ಹುಡುಗೆ

ಮತ್ತು

ಕೆಲವು ಕತೆಗಳು.

ಶ್ರೀ. ಬೇಂದ್ರೆಯವರ ಮುನ್ನುಡಿಯೊಡನೆ

ಕತೆಗಾರರು

ಶ್ರೀ. ಟೇಂಗ್ಸೆ ಗೋವಿಂದರಾಯರು.
ಬಿ. ಎ., ಎಲ್‌ಎಲ್. ಬಿ., ಬಿ. ಟಿ.
ಟೀಚರ ಠಳಕವಾಡಿ ಹೈಸ್ಕೂಲು, ಬೆಳಗಾವಿ.

ಸಂಪಾದಕರು
ಪ್ಯಾಟಿ ಶಾಮರಾಯರು

ವಿಜಯ ಗ್ರಂಥಮಾಲೆ ಬೆಳಗಾವಿ

ಬೆಲೆ ೧-೮-೦]   ೨ನೆಯ ಸರತಿ.   [ಜುಲೈ ೧೯೪೭

ಮುದ್ರಕರು
ಬಿ. ಡಿ. ಚೌಗುಲೆ,
ಮಹಾವೀರ ಮುದ್ರಣಾಲಯ
ಬೆಳಗಾವಿ.

ಪ್ರಕಾಶಕರು
ನಾರಾಯಣ ಶಾಮರಾವ ಪ್ಯಾಟಿ,
ಕಥಾಕುಂಜ ಗ್ರಂಥಭಾಂಡಾರ
ಬೆಳಗಾವಿ.

ಸಂಪಾದಕರ ಅರಿಕೆ

೧೯೧೭ ಸ್ವತ್ವದ ಅರ್ಥ ಬೆಳಗದಿದ್ದ ಕಾಲ! ಬೆಳಗಾಂವಿ ಸ್ಥಳ! ಕನ್ನಡದ ಮಾನ! ಇಂಥ ವಿಪರೀತ ಪರಿಸ್ಥಿತಿಯಲ್ಲಿ ಕನ್ನಡ ನುಡಿಯ ಸೇವೆ ಮಾಡುವ ಹಂಬಲ; ಹವ್ಯಾಸ. ಇದಕ್ಕಾಗಿ ಹೆಣಗಾಡಿದುದರ ಫಲ-ಎಲ್ಲವೂ ಮೈಮೇಲೆ. ಹಿಡಿದ ಕೆಲಸ ಬಿಡದ ಛಲ ಇದ್ದುದರಿಂದ ಸಾಹಿತ್ಯಸೇವೆಯೇ ಜೀವನದ ಗುರಿಯೆಂದು ಆರಂಭಿಸಿದ ಕಾರ್ಯವನ್ನು ಮುಂದುವರಿಸಿದೆವು. ಒಂದಾಣೆ ಮಾಲೆಯನ್ನು ಪ್ರಕಟಿಸಿ ೩ ವರುಷ ಸೇವೆ ಸಲ್ಲಿಸಿ ಆ ಮುಂದೆ ೧೯೩೪-೧೯೩೯ರ ವರೆಗೆ ಸಣ್ಣ ಕತೆಗಳಿಗೆ ಮೀಸಲಾದ "ಕಥಾಕುಂಜ" ಮಾಸಪತ್ರಿಕೆಯನ್ನು ನಡೆಸಿದ್ದಾಯಿತು. ಆದರೂ ಕಾಲ, ಮಾನ, ಪರಿಸ್ಥಿತಿ ಮೊದಲಿನ ಹಾಗೆಯೇ, ಎಲ್ಲವೂ ಅನಾನುಕೂಲವೇ. ಆದ್ದರಿಂದ ಕಥಾಕುಂಜ ಮಾಸಪತ್ರಿಕೆಯನ್ನೇ ಕಥಾಕುಂಜ ಗ್ರಂಥಮಾಲೆಯನ್ನಾಗಿ ಪರಿವರ್ತಿಸಿ, ಪುಸ್ತಕಪ್ರಕಟಣೆಗೆ ತೊಡಗಿದೆವು. ಈ ಕಥಾಕುಂಜ ಗ್ರಂಥಮಾಲೆಯಲ್ಲಿ "ಕಿರುಕಥೆ" ಗಳು ಮತ್ತು ಕಥಾಗುಚ್ಛ ಎಂಬ ಪುಸ್ತಕಗಳು ಪ್ರಕಟವಾದುವು. ಆದರೂ ಕಾಲ, ಮಾನ, ಪರಿಸ್ಥಿತಿ ಅನುಕೂಲವಾಗಿ ಪರಿಣಮಿಸಲಿಲ್ಲ. ಈ ನುಡಿ ಸೇವೆ ತಡೆಯಿಲ್ಲದೆ ಸಾಗುವಂಥ ಆರ್ಥಿಕ ಸ್ಥಿತಿ ಇಲ್ಲದ್ದರಿಂದ ಕೆಲ ದಿನ ಸುಮ್ಮನಿರಲೇ ಬೇಕಾಗಿ ಬಂತು-ಅನಿವಾರ್ಯವಾಗಿ. ಆದರೂ ಜೀವನಾರಂಭದಲ್ಲಿ ಕೈಕೊಂಡ ಕಾರ್ಯವನ್ನು ಕೊನೆಯವರೆಗೂ ನಡೆಯಿಸುವ ದೃಢ ನಿಶ್ಚಯವೇ ಇದೀಗ ಹೊಸ ಸಾಹಸಕ್ಕೆ ಪ್ರೇರೇಪಿಸಿದೆ. ಅದರ ಫಲವೇ ಈ 'ವಿಜಯ ಗ್ರಂಥಮಾಲೆ' ಯ ಜನನವೆಂದು ಬೇರೆ ಹೇಳಬೇಕಾಗಿಲ್ಲ.

... ಈ ವರುಷ ಮೂರು ಹೊತ್ತಿಗೆ
ಪ್ರ... ಮೊದಲನೆಯ ಪುಸ್ತಕವೇ 'ದಾಸರ
ಹು... ಈ ಕತೆಗಳನ್ನು ಬರೆದವರು ಶ್ರೀ
ಗೊ... ರ್. ಬಿ. ಅವರು. 'ಗಂಗೆಯ
ಗು... ಒಳ್ಳೆಯ ಕತೆಗಾರರು ಎಂಬ

ಪ್ರಸಿದ್ಧಿಯನ್ನೂ ಹಿರಿಯ ಸಾಹಿತಿಗಳಿಂದ ಮನ್ನಣೆಯನ್ನೂ ತಂದುಕೊಟ್ಟಿದೆ ಯೆಂಬದನ್ನು ನೆನೆಸಿಕೊಂಡರೆ ಸಾಕು. ಅವರ ಕತೆಗಳ ಬಗ್ಗೆ ವಿಶೇಷ ಬಣ್ಣನೆ ಅನವಶ್ಯಕವೆಂದು ತೋರುವದು. ಇಷ್ಟು ಹೆಸರು ಪಡೆದ ಶ್ರೀ. ಟೇಂಗ್ಸೆಯವರು ತಮ್ಮ ಈ ಕತೆಗಳನ್ನು ನಮ್ಮ ವಿಜಯ ಗ್ರಂಥಮಾಲೆ ಯಲ್ಲಿ ಪ್ರಕಟಿಸಲು ಅನುಮತಿಯನ್ನಿತ್ತುದಕ್ಕಾಗಿ ಅವರಿಗೂ ಹಾಗೂ ಸಾಹಿತ್ಯಸಮ್ಮೇಲನಾಧ್ಯಕ್ಷರಾದ ಶ್ರೀ. ಬೇಂದ್ರೆ ದತ್ತರಾಯರು ಬೇಗನೆ ಸುಂದರವಾದ ಮುನ್ನುಡಿ ಬರೆದುಕೊಟ್ಟುದಕ್ಕಾಗಿ ಅವರಿಗೂ ನಾವು ತುಂಬಾ ಉಪಕೃತರಾಗಿರುವೆವು.

ಈ ನಮ್ಮ ಹೊಸ ಸಾಹಸವು ಫಲಕಾರಿಯಾಗಿ ಪರಿಣಮಿಸಲು ಈ ವರೆಗೆ ಸಹಾಯ ಸಹಾನುಭೂತಿಯನ್ನು ತೋರಿದ ಭಾಷಾಭಿಮಾನಿಗಳೆಲ್ಲರೂ ಇನ್ನು ಮುಂದೆಯೂ ತಮ್ಮ ನೆರವನ್ನು ನೀಡಬೇಕೆಂದು ಬಿನ್ನವಿಸಿ ಕೊಳ್ಳುವೆವು.

—ಸಂಪಾದಕರು

೨ನೆಯ ಆವೃತ್ತಿ ಪ್ರಸ್ತಾವನೆ

ಇದನ್ನು ಬೆಳಗಾವಿ ಜಿಲ್ಹಾ ಹೆಡ್‌ಮಾಸ್ತರ ಬೋರ್ಡಿನವರು ಹೈಸ್ಕೂಲುಗಳ ಳನೆಯತ್ತೆಗೆ ಪಠ್ಯ ಪುಸ್ತಕವಾಗಿ ಮಾಡದಿದ್ದರೆ ಇಂದು ದ್ವಿತೀಯಾವೃತ್ತಿ ಹೊರಡುವ ಸುಯೋಗವು ಬರುತ್ತಿರಲಿಲ್ಲ. ಈ ಸುಯೋಗವನ್ನು ತಂದು ಕೊಟ್ಟುದಕ್ಕಾಗಿ ನಮ್ಮ ಹೆಡ್‌ಮಾಸ್ತರ ಬೋರ್ಡಿನವರಿಗೆ ನಾನು ಋಣಿಯಗಿದ್ದೇನೆ. ನಮ್ಮ ಹೆಡ್‌ಮಾಸ್ತರ ಬೋರ್ಡಿನವರ ಅನುಕರಣವನ್ನು ಕನ್ನಡನಾಡಿನ ಉಳಿದ ಜಿಲ್ಹೆಗಳ ಬೋರ್ಡಿನವರೂ ಮಾಡಿ ಕನ್ನಡ ವಾಙ್ಮಯ ಪ್ರಚಾರಕ್ಕೆ ಸಹಾಯ ಸಹಕಾರಗಳನ್ನೀಯುವರಾಗಿ ಆಶಿಸಿರುವೆ. ಮೊದಲನೆಯ ಆವೃತ್ತಿಯಲ್ಲಾದ ಮುದ್ರಣದೋಷಗಳನ್ನೆಲ್ಲ ಈ ಆವೃತ್ತಿಯಲ್ಲಿ ಸರಿ ಪಡಿಸಲಾಗಿದೆ.

ವಿಜಯ ಗ್ರಂಥಮಾಲೆ
ಬೆಳಗಾವಿ

ಪ್ಯಾಟಿಶಾಮರಾಯರು
ಸಂಪಾದಕರು

ಮುನ್ನುಡಿ.

ಈ ಕಥಾಸಂಗ್ರಹದ ಲೇಖಕರಾದ ಶ್ರೀಮಾನ್ ಟೇಂಗ್ಸೆ ಗೋವಿಂದ ರಾಯರು ಕನ್ನಡ ಸಾಹಿತ್ಯಲೋಕಕ್ಕೆ ಅಪರಿಚಿತರಲ್ಲ. ಅವರ 'ಗಂಗೆಯ ಗುತ್ತಿಗೆ' ಎಂಬ ಪ್ರಸಿದ್ಧವಾದ ಮೊದಲ ಕತೆಯೇ ಅವರಿಗೆ ಪ್ರಸಿದ್ಧಿಯನ್ನು ತಂದಿತು. ಶ್ರೀನಿವಾಸರ ಮೆಚ್ಚಿಕೆಯನ್ನು ಅದು ಪ್ರಥಮ ದರ್ಶನಕ್ಕೇ ಪಡೆಯಿತು. ತದನಂತರದಲ್ಲಿ ಅವರು 'ಜಯಕರ್ನಾಟಕ'ದ ಸಂಪಾದಕರೆಂದೂ, ಮಾರ್ಮಿಕ ನಾಟಕಕಾರರೆಂದೂ ತಮ್ಮ ಕೃತಿಗಳಿಂದ ವಿಮರ್ಶಕರ ದೃಷ್ಟಿಯನ್ನು ಸೆಳೆದಿದ್ದಾರೆ. ಅವರ 'ಭಸ್ಸರ ಬಂದ' ವಿದ್ಯಾರ್ಥಿಗಳ ವಿಮರ್ಶೆಗೆ ಒಳಗಾಗಿ ಅವರಿಗೆ ಖ್ಯಾತಿಯನ್ನು ತಂದಿದ್ದಾನೆ. ಈ ಕೆಲವೊಂದು ಕೃತಿಗಳಲ್ಲಿ ಕಂಡುಬಂದ ಗುಣಗಣವು ಈ ಕಥಾಸಂಗ್ರಹದಲ್ಲಿ ಸಾಕಾರ ಸೌಂದರ್ಯದಿಂದ ಘನವಾಗಿ ನಿಂತಿದೆ. 'ದಾಸರ ಹುಡಿಗೆ' ಯು ಕಥೆಯಲ್ಲಿ ಕೀರ್ತಿವಂತಳಾದಂತೆ ಈ ಸಂಗ್ರಹದ ಹೆಸರಾಗಿ ಲೇಖಕರಿಗೂ ಒಳ್ಳೆ ಹೆಸರು ತರುವಳೆಂದು ನಾನು ನಂಬಿದ್ದೇನೆ.

ಈ ಕಥಾ-ಸಂಗ್ರಹದ ದೋಷವನ್ನು ಮೊದಲೇ ಹೇಳಿಬಿಡುವುದು ಬಹಳೇ ಒಳ್ಳೆಯದು. ಏಕೆಂದರೆ ದೋಷ ಬಹಳಿಲ್ಲ. ಗುಣಗಳು ಬಹಳ ಇವೆ. ಅವುಗಳ ವಿಸ್ತಾರ ಆ ಮೇಲೆ ಮಾಡಬಹುದು. ಟೇಂಗ್ಸೆ ಗೋವಿಂದರಾಯರು ಕಥೆಯನ್ನು ಬರೆಯುವುದು ಸಾವಕಾಶ. ಬರೆಯಲು ಕೈಕೊಂಡರೆ ಮುಗಿಸಿಬಿಡುವ ಅವಸರವೂ ಸ್ವಲ್ಪ ಉಂಟು. ಅದಲ್ಲದೆ ಒಂದು ಜೀವಿತದುದ್ದದ ಮರ್ಮವನ್ನು ಒಂದು ಬಟ್ಟಿನ ಜೀವಾಳದಲ್ಲಿ ತೋರಿಸೇನು ಎಂಬ ಕಿರಿದರ ಹಿರಿಮೆಯ ಕೌತುಕ ಬೇರೆ ಅವರ ಕತೆಗಾರಿಕೆಗೇ ಇದೆ. ಇಷ್ಟಲ್ಲದೆ ದೂರಾನ್ವಯದ ಕರ್ತೃತ್ವ ಅವರ ವಾಕ್ಯರಚನೆಯಲ್ಲಿ ಒಮ್ಮೊಮ್ಮೆ ತೊಡಕಿಗೆ ಕಾರಣವಾಗುವುದು. ಇಂಥ ಈ ಸಂದರ್ಭದಲ್ಲಿ ಈ ತೊಡಕು ಸಾಲದೆಂಬಂತೆ ವಿರಾಮಾದಿ ಚಿನ್ಹಗಳ ಅಸ್ತವೂ ಮುದ್ರಾರಾಕ್ಷಸಗಳ ಉದಯವೂ ವಾಕ್ಯಾಂಶಗಳ ಲೋಪವೂ ಕೂಡಿತೆಂದರೆ ಉತ್ತಮ ಪಕ್ವಾನ್ನದಲ್ಲಿ ಹರಳು ಭತ್ತ ಬಂದಂತೆ ಆಗಿ ಎಂಥ ರುಚಿಯಲ್ಲಿಯೂ ವೈರಸವುಂಟಾಗುವುದು. ತಿದ್ದುಪಡಿ ಇಲ್ಲ

ದಿದ್ದರೆ ಈ ಗ್ರಂಥ ಅಪೂರ್ಣ ಎಂದೇ ಹೇಳಬೇಕು. ಈ ದೋಷಬಿಟ್ಟರೆ ಇಲ್ಲಿಯ ಕೃತಿಯ ಕಲೆಯನ್ನು ಹೊಗಳತಕ್ಕ ಅಂಶ ಬಹಳವಿದೆ.

ಟೇಂಗ್ಸೆಯವರು ತಮ್ಮ ಕಥೆಗಳನ್ನು ಒಟ್ಟಿಗೆ ತಂದು ಕಥಾಸಾಹಿತ್ಯಕ್ಕೆ ಒಂದು ಒಳ್ಳೆಯ ಕಾಣಿಕೆಯನ್ನು ನೀಡಿದ್ದಾರೆ. ಪ್ರಕಾಶಕರು ವಾಚಕರ ಉಪಕೃತಿಗೆ ಪಾತ್ರರಾಗಿದ್ದಾರೆ. ಟೇಂಗ್ಸೆಯವರ ಕಥನಚಮತ್ಕೃತಿ ಅವರ ದೃಷ್ಟಿಯ ವಿವಿಧ ದಿಶೆ, ಅವರ ವಿದ್ಯಾಪ್ರೀತಿ, ರಸಿಕತೆ, ಮಾರ್ಮಿಕತೆ, ನಾವೀನ್ಯ, ಬುದ್ಧಿಯ ಪ್ರಗತಿಶೀಲದೃಷ್ಟಿ ಇವೆಲ್ಲವೂ ಅವರ ಒಂದೊಂದು ಕಥೆಯಲ್ಲಿಯೂ ಒಂದೊಂದು ಬಗೆಯಾಗಿ ರಂಜಿಸುವವು. ಅವರ ನಾಯಿಕೆಯರು ಆಗಸರ ಗಂಗೆ, ದಾಸರ ಸಾಬಿ, ಇವರೇ ಇರಲಿ, ಅಥವಾ ಬಿ. ಎ., ಎಂ. ಬಿ. ಬಿ. ಎಸ್. ಆದ ಮಧುಮತಿ ಮಾಲತಿಯರೇ ಇರಲಿ, ಎಲ್ಲರಲ್ಲಿಯೂ ಸಮಾನವಾದ ಕುತೂಹಲವನ್ನುಂಟುಮಾಡುವ ಜೀವನದೃಷ್ಟಿ ಅವರದಾಗಿದೆ. ಅವರದು ರಸಿಕನಾದ ಸಂಸಾರಿಕನ ದೃಷ್ಟಿ, ಸಾಹಿತಿಯ ನಿಷ್ಪಾಪ ದೃಷ್ಟಿ, ಇದರೊಂದಿಗೆ ಈ ದೃಷ್ಟಿಯ ಔಚಿತ್ಯವೂ ಮನಗಾಣುವಂತೆ ಬುದ್ಧಿವಾದ ಬೆಳೆಸುವ ಚಾತುರ್ಯವೂ ಅವರ ತಟಸ್ಥವಾದ ನಾಟಕೀಯತೆಯಲ್ಲಿದೆ. ಅವರ ನವದೃಷ್ಟಿಯಲ್ಲಿ ಅವಿವೇಕದ ಸಮರ್ಥನೆ ಇಲ್ಲ. ಅವರ ವಿದ್ವತ್ತಿನ ವಿಲಾಸದಲ್ಲಿ ಅಪ್ರಾಸಂಗಿಕತೆ ಇಲ್ಲ. ಮಾತು ಇದಿರು ಮಾತುಗಳ ಚಮತ್ಕೃತಿ, ವಿಸ್ಮಯಕರವಾಗಿ ಕಥಾಪ್ರವಾಹವನ್ನು ಹೊರಳಿಸುವ ಜಾಣ್ಮೆ, ಅನಪೇಕ್ಷಿತವಾದ ಸಂಧಿಯಲ್ಲಿ ತೊಡಕು ತೋರಿಸುವ ಚದುರು ಅವರದಾಗಿದೆ. ಯಾವ ಕಥೆಯನ್ನೇ ಓದಲಿ ಅವರ ಬುದ್ಧಿಯ ನಾವೀನ್ಯ ಅವರ ರಸಿಕತೆಯ ಚಮತ್ಕಾರ ಅನುಭವಕ್ಕೆ ಬರದೆ ಹೋಗುವದಿಲ್ಲ. ವಾಚಕರಿಗೆ ಪಾಠ ಕಲಿಸುವ ಹವ್ಯಾಸ ಅವರಿಗಿಲ್ಲ. ಆದರೂ ಹೊಸ ದೃಷ್ಟಿಯನ್ನುಂಟುಮಾಡಬೇಕೆಂಬ ಹವ್ಯಾಸ ಇದೆ. ಮಾನವ ಮನೋಧರ್ಮದ ದೌರ್ಬಲ್ಯದಲ್ಲಿರುವ ವಿವಿಧ ವಿಲಾಸಗಳನ್ನು ಅವರು ಹೊಸ ಹೊಸ ಆಕೃತಿಗಳನ್ನಾಗಿ ತೋರಿಸಬಲ್ಲರು. ದೊಡ್ಡಸ್ತಿಕೆಯೊಳಗಿನ ಛಿದ್ರಗಳನ್ನೂ ಕ್ಷುಲ್ಲಕತೆಗೂ ಇರುವ ಊರ್ಧ್ವಮುಖತೆಯನ್ನೂ ಅವರು ತಮ್ಮ ಬುದ್ಧಿಯ ಪ್ರಕಾಶದಲ್ಲಿ ಎತ್ತಿ ತೋರಿಸಬಲ್ಲರು. ಇದು ಸಣ್ಣ ಮಾತಲ್ಲ.

ಇಂಥ ಕತೆಗಾರರು ತಮ್ಮ ಸಾಹಿತ್ಯೋಪಾಸನೆಯನ್ನು ನಿರಲಸವಾಗಿ ನಡಿಸಿದರೆ ಕಾದಂಬರಿಗಳನ್ನೆ ಕಥೆಯ ಹದಕ್ಕೆ ಇಳಿಸುವ ಚೋದ್ಯವನ್ನು ಬಿಟ್ಟು ರಸಪೂರ್ಣವಾಗಿ, ಸಾಂಗಮೂರ್ತಿಯಾಗಿ ತಮ್ಮ ಕಥಾವಸ್ತುವನ್ನು ಹಬ್ಬಿಸುವ ಉದ್ಯಮ ಪ್ರಿಯತೆಯನ್ನು ತೋರಿಸಿದ್ದಾದರೆ ಅವರಿಗೆ ಧನ್ಯವಾದವನ್ನು ಅರ್ಪಿಸೀತಲ್ಲದೆ, ಲೇಖಕರಿಗೂ ತಮ್ಮ ಜೀವಿತದ ಒಂದು ಮುಖದ ಸಫಲತೆಯೂ ಕಂಡೀತು ಎಂದು ತಿಳಿದು ಅವರ ಕತೆಗಾರಿಕೆಯ ಗುಣಗಳನ್ನು ನಾನು ಮನ ಬಿಚ್ಚಿ ಬರೆದಿದ್ದೇನೆ. ವಾಚಕರಾದರೂ ಈ ಕತೆಗಳನ್ನೋದಿ ಆನಂದಪಟ್ಟು ತಮ್ಮ ಮೆಚ್ಚಿಕೆಯಿಂದ ಲೇಖಕರ ನಿರ್ಮಾಣ ಶಕ್ತಿಗೆ ಸಾತ್ವಿಕೋದ್ದೀಪನವನ್ನುಂಟು ಮಾಡುವರೆಂದು ನಾನು ಆಶಿಸುತ್ತೇನೆ. ನಾಳೆ ಆಗುವುದಾಗಲಿ ಬಿಡಲಿ· ನನ್ನಿಂದ ಮುನ್ನುಡಿಯನ್ನಪೇಕ್ಷಿಸಿದ ಟೇಂಗ್ಸೆಯವರು ನನ್ನ ರಸ ವಿಮರ್ಶೋದ್ಗಾರಗಳನ್ನೋದಿ ನಾನು ಅವರಿಂದ ಕಾದಂಬರಿಗಳನ್ನಪೇಕ್ಷಿಸುವುದು ಅನುಚಿತವಲ್ಲ ಎಂಬದನ್ನು ತಮ್ಮ ನವೀನ ಕೃತಿಗಳಿಂದ ಸಾರ್ಥಕಗೊಳಿಸುವರೆಂದು ನಾನು ನಂಬಿದ್ದೇನೆ.

ಸಾಧನಕೇರಿ
೧೬-೭-೪೪. } ದ. ರಾ. ಬೇಂದ್ರೆ.

ಪ ರಿ ವಿ ಡಿ.

ದಾಸರ ಹುಡುಗೆ

ವರ್ತಕರ ರಂಗನೂ ದಾಸರ ಸಾಬಿಯೂ ಕೂಡಿ ಆಡಿದವರು. ಹುಡಿಗೆಯರ ಕೂಡ ಆಡುವ ವಯಸ್ಸು ಮೀರುವ ವರೆಗೂ ಆ ತರದ ಗೊಂಬೆ ಯಾಟ ಮನೆಯಾಟಗಳನ್ನು ಆಡಿದವರು. ಒಂದು ದಿನ ಅಂಬಲೀ ಕೋಳಂಬರಿಯ ಆಟವನ್ನು ಆಡುತ್ತಿದ್ದರು. ಸಾಬಿಯು ಆಗ ೮ ವರ್ಷದ ಪರಕರದ ಹುಡಿಗೆ. ರಂಗನ ಕೈ ಬಿಡಿದು ಓಡಿದಳು. ರಂಗನು ಬೆನ್ನು ಹತ್ತಿದನು. ಇನ್ನು ಸಿಕ್ಕೇ ಸಿಗುವವಳು; ಕಳ್ಳಿಯಾಗುವವಳು. ಅಷ್ಟರಲ್ಲಿ ಥೂಸಿಗೋ (*Not* ready) ಎಂದವಳೇ ಸಾಬಿಯು ಸುಳ್ಳುಸುಳ್ಳೇ ಪರಕರದ ಲಾಡಿಯನ್ನು ಬಿಚ್ಚಿ ಮತ್ತೆ ಕಟ್ಟಿಕೊಂಡು ಓಡಿ ಹೋದಳು. ಅವಳ ಈ ಹಂಚಿಕೆಯು ತಿಳಿಯದಷ್ಟೇನು ರಂಗನು ಮದಡನಲ್ಲ. ಆದರೂ ಆಟದ ಆತುರತೆಯಲ್ಲಿ ಮತ್ತೆ ಆಡತೊಡಗಿದನು. ಇದಾದ ಕೆಲ ದಿನಗಳಲ್ಲಿಯೇ ರಂಗನ ಮುಂಜಿಯಾಯಿತು. ೩-೪ ದಿನ ಅವನು ಆಡಲಿಕ್ಕೆ ಬರಲಿಲ್ಲವೆಂದು ಸಾಬಿಯು ಚಡಪಡಿಸಿದಳು. ಶಾಲೆ ಬಿಟ್ಟು ಬಂದ ಮೇಲೆ ಗೋಲಿಯಾಡಲಿಕ್ಕೆಂದು ರಂಗನು ಹೊರಟಾಗ ಸಾಬಿಯು ‘ಆಡೂಣ ಬಾ’ ಎಂದು ಕರೆದಳು. ‘ಸಿಕ್ಕಸಿಕ್ಕವರ ಕೂಡ ಆಡಬ್ಯಾಡಂತ್ಹೇಳ್ಯಾರಾಚಾರ್ರು; ಮುಂಜಾಗೇದ ನಂದು’ ಎಂದು ರಂಗನಂದನು. ‘ಎಲ್ಲೆ ?’ ಎಂದು ಸಾಬಿಯು ಕೇಳಿದಳು. ‘ಇದ ನೋಽಽಡು’ ಎಂದು ಅಭಿಮಾನದಿಂದ ಹೊಸದಾಗಿ ಧರಿಸಿದ ಯಜ್ಞೋಪವೀತವನ್ನು ತೋರಿಸಿದನು. ಮೊದಲನೇ ಸಾರೆ ಗೊಂಬೆಯ ಪುಸ್ತಕವನ್ನು ತೋರಿಸಿದಾಗ ‘ಉಂ, ನಂಗ ಕೊಡೋ’ ಎಂದು ಬೇಡಿದಂತೆ ಈಗಾದರೂ ಬೇಡುವಳೆಂದು ಅವನು ತಿಳಿದಿದ್ದನು. ಆದರೆ ಸಾಬಿಯು ಹಾಗೇನೂ ಮಾಡದೆ ಕೃಷ್ಣಾಜಿನದ ತುಂಡನ್ನು ನೋಡಿ ಚಪ್ಪಳಿ ಹೊಡೆಯುತ್ತ ‘ಅಯ್, ನಾಯಿ ಕಿವಿ ! ನಾಯೀಕಿವಿ ಹಾಕ್ಕ್ಯೊಂಡೈತ್ಯೋಽಹೊ’ ಅಂದು ಗಟ್ಟಿಯಾಗಿ ನಗಹತ್ತಿದಳು. ಇವನಿಗೆ ಅದು ಅಸಹ್ಯವೆನಿಸಿ ಜನಿವಾರವನ್ನು ತೆಗೆದೊಗೆದು, ಅವಳೆದುರಿಗೆ ಚೇಷ್ಟೆಗೆ ಗುರಿಯಾಗಲಾರದೆ ಓಡಿಹೋದನು. ಅಂದು ಅವನಿಗೆ ಮನೆಯಲ್ಲೆರಡು ಲತ್ತೆಗಳು ಬಿದ್ದವು.

ಇವೇ ಮೊದಲಾದ ಕಾರಣಗಳಿಂದಲೂ ಹುಡಿಗೆಯರ ಕೂಡ ಆಡುವ ವಯಸ್ಸು ಮೀರಿದ್ದರಿಂದಲೂ ರಂಗನು ಗಂಡು ಹುಡುಗರಲ್ಲಿ ಆಡಹತ್ತಿದನು. ಒಂದು ದಿನ ಓಣಿಯಲ್ಲಿಯ ಹುಡುಗರು ಹೊಡೆಚಂಡು ಆಡುತ್ತಿದ್ದರು. ರಂಗನು ನಡುವೆ ಸಿಕ್ಕು ಬಹಳೇ ಹೊಡೆತ ತಿಂದಿದ್ದನು. ಒಮ್ಮೆ ಇವನ ಕೈಗೆ ಚಂಡು ಸಿಕ್ಕಿತು. ಹೊಡೆಯುವದರಲ್ಲಿದ್ದನು. ಅಷ್ಟರಲ್ಲಿ ಸಂದಿಯೊಳಗಿನ ತನ್ನ ಮನೆಯಿಂದ ಹೊರಬಿದ್ದು ಸಾಬಿಯು ಓಣಿಗೆ ಬಂದಳು. 'ಇಲ್ಯಾಕ ಬಂದಿ! ನಡೀ ಹೋಗೊಳಗ! ಇಲ್ಲಿದ್ರ ಬಿಗೀತೇನ ನೋಡು ನಿನಗs' ಎಂದು ಚಂಡಿನ ಕೈ ಮೇಲಕ್ಕೆತ್ತಿ ಬೆದರಿಸಹೋದನು. ಇವಳೂ ಕಡಿಮೆಯವಳಲ್ಲ. ಅಣಕಿಸಿ 'ಹೊಡೀ ನೋಡೋಣ' ಎಂದವಳೇ ಬಾಗಿ ಅವನ ಟೊಂಕಕ್ಕೆ ಒಮ್ಮೆಲೆ ಮುಗಿಬಿದ್ದಳು. ಜೋಲಿ ಹೋಗಿ ರಂಗನು ನೆಲಕ್ಕುರುಳಿದನು. ಕೈಯಲ್ಲಿಯ ಚಂಡು ಬಿತ್ತು. ಈ ಸಂಧಿಯನ್ನು ಸಾಧಿಸಿ ಹತ್ತರ ಇದ್ದ ಹುಡುಗನು ಅದನ್ನು ತಕ್ಕೊಂಡು ರಂಗನಿಗೇ ಬಿಗಿದನು. ಸಾಬಿಯು 'ಹ್ಯಾಂಗಾತು! ಹ್ಯಾಂಗಾತು!' ಎಂದು ಹಂಗಿಸುತ್ತ ಓಡಿಹೋದಳು.

ಇತ್ತೀಚೆಗೆ ಆಟದ ಸಂಬಂಧವು ತಪ್ಪಿದರೂ ಈಸುವ ಬಾವಿಯಲ್ಲ ವರು ಕೂಡುತ್ತಿದ್ದರು. ಎಷ್ಟೋ ಸಾರೆ ರಂಗನು ಸಾಬಿಯನ್ನು ತಪ್ಪಿಸಿ ಬಾವಿಗೆ ಹೋಗಬೇಕೆಂದು ಯತ್ನಿಸಿದರೂ ಸಾಧ್ಯವಾಗಿದ್ದಿಲ್ಲ. ಒಂದು ದಿನ ಒಬ್ಬನೇ ಹೋಗಿ ಮನದಣಿ ಈಸಬೇಕೆಂದು ಮಧ್ಯಾಹ್ನದ ಶಾಲೆ ತಪ್ಪಿಸಿ ಬಾವಿಗೆ ಹೋದನು. ಮುಂಜಾನೆ ಕೊಟ್ಟಿದ್ದ ಅವಲಕ್ಕಿಯನ್ನೂ ಕೊಬ್ಬರಿ ಚೂರುಗಳನ್ನೂ ಈಸಿದ ಮೇಲೆ ತಿನ್ನಬೇಕೆಂದು ಕಾದಿಟ್ಟಿದ್ದನು. ಬಂದು ಯಾರೂ ಇಲ್ಲದ್ದನ್ನು ನೋಡಿ, ಮನದಂತಾಯಿತೆಂದು ಹಿಗ್ಗಿ, ಅರಿವೆಗಳನ್ನು ತೆಗೆದಿಟ್ಟು ದಂಡೆಯ ಮೇಲೆ ನಿಂತಕೊಂಡು ನೋಡಿದನು. ಎದುರಿಗೆ ಇಟ್ಟಂಗಿಯಿಂದ ಕಟ್ಟಿದ ಕಪ್ಪಲಿಯ ಕಟ್ಟೆ. ನೀರಿನ ಸುಮಾರು ಅರ್ಧ ಭಾಗದ ಮೇಲೆ ಬಿಸಿಲು ಬಿದ್ದಿತ್ತು. ಕಿರಣಗಳ ವಕ್ರೀಭವನದಿಂದ ಕಪ್ಪಲಿ ಗೋಡೆಗೆ ಹೊಂದಿ ೨-೩ ಮೊಳ ನೀರು ಪಾರದರ್ಶಕವಾಗಿತ್ತು. ಕಟ್ಟೆಯ ಮೇಲೆ ಹತ್ತಿ ಬಾವಿಯಲ್ಲಿ ಜಿಗಿದನು. ಇವನ ಬೆನ್ನ ಮೇಲೆಯೇ ಯಾರೋ ಹಾರಿದ ಸಪ್ಪಳ ಕೇಳಬಂತು. ಹಾರಿದವರನ್ನು ತಕ್ಕಿಸಬೇಕೆಂದು ನೀರೊಳಗೆ ಸುರಂಗ ಹೊಡೆದು ಬಾವಿಯ ಆಚೆಯ ಬದಿಗೆ ಹೋದನು. ನೀರೊಳಗಿಂದ ತಲೆಯೆತ್ತಿ ನೋಡಿದನು. ಕಪ್ಪಲಿಯ ಹತ್ತರ ಬಿಸಿಲುಬಿದ್ದ ನೀರಲ್ಲೊಬ್ಬ ನಾಗಕನ್ಯೆ. ತುಸು ಮಗ್ಗಲಾಗಿ ಮೇಲ್ಬದಿಗೆ

ಬರುತ್ತಲಿದ್ದಳು. ಎಡಗೈ ದೇಹದಗುಂಟ ಹಾಗೇ ಇಳಿಬಿದ್ದಿತ್ತು. ಮೋರೆಯು ಒಂದು ಮಗ್ಗಲು ಮಾತ್ರ ಕಾಣುತ್ತಿತ್ತು. ಅದೂ ಶೈವಾಲಜಾಲದಲ್ಲಿ ಅಡಿಗಿಕೊಂಡ ಕಮಲದಂತೆ ಅಸ್ಪಷ್ಟವಾಗಿ. ಒಂದು ಕ್ಷಣದಲ್ಲಿ ಸಾಬಿಯು ನೀರ ಮೇಲೆ ಬಂದು ಕರಪುಟದಿಂದ ನೀರನ್ನು ಡುಬುಕ್ ಡುಬುಕ್ ಎಂದು ನುಡಿಸಹತ್ತಿದಳು. ಈಸುವವನು ನೀರಿನಲ್ಲಿ ಬಿದ್ದರೆ ಸರಿ ಬಿಚ್ಚಿದ ಹಾವಾಗುವನು. ದಂಡೆಯ ಮೇಲಿನ ನಡೆನುಡಿಯ ಹಿಡಿತಡಿಗಳನ್ನು ಆವನು ಆಗ ಲೆಕ್ಕಿಸುವುದಿಲ್ಲ. ಎಂಥ ಗಂಭೀರವೃತ್ತಿಯವನಾದರೂ ಹಿಗ್ಗಿನಿಂದ ಕೇಕೆ ಹಾಕುವನು. ಪಂಚಯುವಿಲ್ಲದವರು ಕೂಡ ಮೋರೆಗೆ ನೀರು ಹೊಡೆಯಬಹುದು. ಹುಡುಗತನದಲ್ಲಂತೂ ಮಂಗಾಟದ ಹುರುಪು ಉಕ್ಕೇರುವದು. ರಂಗನು ಎರಡೇ ಮಾರುಗೈ ಹೊಡೆತಗಳಿಂದ ಸಾಬಿಯ ಸಮೀಪಕ್ಕೆ ಬಂದು ನೀರು ಉಗ್ಗಹತ್ತಿದನು. ಅವಳೂ ಅದಕ್ಕೂ ಹೆಚ್ಚಿ ರಭಸದಿಂದ ಉತ್ತರಗೊಟ್ಟಳು. ಅವಳ ನೀರಿನ ಹೊಡೆತವನ್ನು ಎದುರಾಗಿ ಮೋರೆಯ ಮೇಲೆ ತಾಳಲಾರದೆ ಮೋರೆಯನ್ನು ಎಡಗಡೆಗೆ ತಿರುವಿ, ಮೊದಲಿನ ದಿಕ್ಕಿನಲ್ಲಿಯೇ ಒಂದೇ ಕೈಯಿಂದ ನೀರು ಹೊಡೆಯುತ್ತ ನಿಂತನು. ಇದೇ ಕ್ಷಣವನ್ನು ಸಾಧಿಸಿ ಸಾಬಿಯು ಸುರಂಗ ಹೊಡೆದು ಬಂದು ಇವನೆದೆಗೆ ಒದ್ದಳು. ಈ ಆಟದ ಮುಖ್ಯಾಂಶವೆಂದರೆ ಪ್ರತಿಪಕ್ಷಯನ್ನು ಹತ್ತಿರ ಬರಗೊಡದಿರುವದು. ಹೀಗಾದ ಮೇಲಂತೂ ಪೂರ್ಣ ಪರಾಜಯವೇ ಸೈ.

ಬಾವಿಯ ಸುತ್ತು ಹಾಕುವದಾಯಿತು. ನೆಲೆ ತರುವದಾಯಿತು. ೧-೧|| ತಾಸು ಈಸಿದ ಮೇಲೆ ಇಬ್ಬರೂ ದಂಡೆಗೆ ಬಂದು ಒಣ ಅರಿವೆಗಳನ್ನು ಉಟ್ಟುಕೊಂಡರು. ತೋಟದ ಮೂಲೆಯಲ್ಲಿಯ ಒಂದು ಗಿಡದಡಿಯಲ್ಲಿ ಕುಳಿತುಕೊಂಡು ಅವಲಕ್ಕಿಯ ಗಂಟನ್ನು ಬಿಚ್ಚಿ ಇಬ್ಬರೂ ತಿನ್ನಹತ್ತಿದರು. ರಂಗನು ಕಿಸೆಯೊಳಗಿನದೊಂದು ಕೊಬ್ಬರಿಯ ಚೂರನ್ನು ತೆಗೆದು ಕಡಕೊಳ್ಳಹತ್ತಿದನು. ಸಾಬಿಯ ಬಾಯಲ್ಲಿ ನೀರೊಡೆದವು 'ಮತ್ತ ನಂಗೋss' ಎಂದಳು. ಕೈಯಲ್ಲಿದ್ದ ಚೂರನ್ನೇ ಕೊಟ್ಟನು. ಸಾಬಿಯು ಕಡಕೊಂಡಳು. ಇದೇ ಸಮಯ ಕಾಯುತ್ತಿದ್ದವನಂತೆ ಒಮ್ಮೆಲೆ ರಂಗನು ಚಪ್ಪಾಳೆ ಹೊಡೆದು 'ಓಹೋ! ನನ್ನೆಂಜಲಾ ತಿಂದಿss! ಹೇssಣತ್ಯಾದಿ! ಹೋ! ಹೇಣತೀ! ಹೇಣತೀ!' ಎನ್ನಹತ್ತಿದನು. ಹಾಗೆಂದರೆ

ಏನೋ ಸುಮಾರಾದಂತೆ, ಆಟದಲ್ಲಿ ಕಳ್ಳಿಯಾದಂತೆ ಎಂದು ಬಾಯೊಳಗಿನದೆಲ್ಲ ಉಗುಳಿದಳು. 'ನಿನ್ನ ಅವಲಕ್ಕೀನss ಬ್ಯಾಡ ಹೋಗು! ನಿನ್ನ ಪಾಲಾ ಪೂ !!' ಎಂದು ಸೆಟಕೊಂಡು ಅತ್ತ ದೂರ ಹೋಗಿ ಒಂದು ಕಂಟಿಯ ಕಡೆಗೆ ಮೋರೆಮಾಡಿ ನಿಂತು ಅಳಹತ್ತಿದಳು ಬಾಲ್ಯದ ಬಡಿದಾಟಗಳು ಸಂಸ್ಕೃತ ನಾಟಕಗಳಂತೆ ಯಾವಾಗಲೂ ಆನಂದಪರ್ಯವಸಾಯಿ. ಇವನು ಹೋಗಿ 'ತಪ್ಪಾಯಿತೆಂದು ಬೇಡಿಕೊಂಡೊಡನೆಯೇ ಪುನಃ ರಾಜೀ. ಫಲಾಹಾರ-ಫಲಾಹಾರನೆಲ್ಲಿಯದು ? ಶುದ್ಧ ಅಶ್ನಖಾದ್ಯ. ಓಹೊ, ಅಲ್ಲವೆನ್ನಲಿಕ್ಕೆ ಇದೆಯಲ್ಲ ಇಷ್ಟೆಲ್ಲ ಗೊಂದಲವೆಬ್ಬಿಸಿದ ಕೊಬ್ಬರಿ, ನಾರಿಕೇಲ ಫಲ; ಫಲಾಹಾರ ತೀರಿಸಿಕೊಂಡು ಎಂದಿನಂತೆ ಇಬ್ಬರೂ ಮನೆಗೆ ಬಂದರು. ಬರುವಾಗ ಹಾದಿಯಲ್ಲಿ ಸಾಬಿಯು ಎಡವಿದಳು. ರಂಗನು ಅಮರಕೋಶದಲ್ಲಿಯ ಒಂದು ಶ್ಲೋಕವನ್ನು ಅಂದು ಮಂತ್ರ ಹಾಕಿ ನೋವನ್ನು ಕಳೆದನು.

ದಾಸರಲ್ಲಿ ಸಹಜವಾಗಿ ಬಯಸಬಹುದಾದರೂ ಬಹುಶಃ ಕೇಳಬರದಂಥ ಸುಸ್ವರಕಂಠ ಸಾಬಿಯದಾಗಿತ್ತು. ಸಾಧಾರಣವಾಗಿ ವಿಚಾರಿಸಿದರೆ ಹಿಮ್ಮೇಳದವರ ದನಿಗೆ ಹೋಲಿಸಿ ನೋಡಿದಾಗ ಮಾತ್ರ ದಾಸರ ದನಿಯು ಇಂಪೆನಬೇಕಿಷ್ಟೇ. ಅವರು 'ಧರಿಯೊಳು ನರಗುಂದ ದೊರೆ ಬಾಬಾಸಾಬಾ ಬರಲಿಲ್ಲವೊ ಮಾಡಿದ ಪುಣ್ಣೇsss' ಎಂದು ಕಿರಚಿದ ಮೇಲೆ ಇವರನ್ನುವದೇ ಇಂಪು ಎನಬೇಕು. ಸಾಪೇಕ್ಷವಾದದ (Relativity) ತತ್ವವನ್ನು ಶೋಧಿಸಿದ ಶ್ರೇಯವು ಐನ್‌ಸ್ಟಿನ್‌ನಿಗೆ ಅನ್ಯಾಯವಾಗಿ ಸಲ್ಲುತ್ತಿದ್ದು ನಮ್ಮ ದಾಸರು ಈ ಮೊದಲೇ ಅದನ್ನು ತಮ್ಮ ಉದ್ಯೋಗದ ಅಭಿವೃದ್ಧಿಗಾಗಿ ಜೀವನದಲ್ಲಿ ಉಪಯೋಗಿಸಿಕೊಂಡಿರುವರೆಂಬುದು ಸಿದ್ಧವಾಗುವದು.

ಅವಳ ರೂಪವು ಮನೋಹರ. ಅದಕ್ಕನುರೂಪವಾದ ಬುದ್ಧಿ ಕೌಶಲ್ಯವೂ ಅವಳದಾಗಿತ್ತು. ಆಟಪಾಟಗಳಲ್ಲಿಯ ಅವಳ ಚಾಪಲ್ಯವು ಆಕರ್ಷಕವಿತ್ತು. ಸಾಬಿಯು ಬೊಗಾಟಬುಗರಿ ಆಡುವಾಗ ತನ್ನ ಒಡನಾಡಿಯನ್ನು ತಿರುಗಣಿ ಮಡುವಿನಲ್ಲಿ ಸಿಕ್ಕ ತೊಪ್ಪಲದಂತೆ ತಿರುವುವದನ್ನು ಅವಳ ತಾಯಿಯು ಅಭಿಮಾನದ ನಗೆಮೊಗದಿಂದ ನೋಡುತ್ತಿದ್ದಳು. ಅವಳ ಮನಶ್ಚುಂಬಕದ ಆಕರ್ಷಣ ಕ್ಷೇತ್ರದಲ್ಲಿ ಸಿಗುವ ತರುಣರ ಅವಸ್ಥೆಯು ದ್ಯೋತಕವಾಗಿ ಕಂಡು ಬಂತೇನೋ ಅವಳಿಗೆ! ಒಂದೇ ಹಾರಿಕೆ

ಯಲ್ಲಿ ಹಗ್ಗವನ್ನು ೨ ಸಾರೆ ಕಾಲ ಕೆಳಗಿಂದ ಹಾಯಿಸುವಳು. ಪೂರ್ಣವಾಗುತ್ತ ಬಂದ ಮುಂಜೋಲಿಯ ಹಗ್ಗದ ಸುತ್ತನ್ನು ಒಮ್ಮೆಲೆ ಹೊರಳಿಸಿ ಹಿಮ್ಮಗ್ಗಲಿಂದ ಪೂರ್ಣ ಮಾಡುವಳು. ಮುಂಚೆಯ ಬಾಗಿಲಿಗೆ ರಾಯರು ಬೆದರಿಸಿ ಕಳಿಸಿದರೆ ಹಿತ್ತಲ ಬದಿಗೆ ಹೋಗಿ ಬಾಯಿಯವರ ಹತ್ತರ ವ್ಯಾಪಾರ ಮಾಡುವ ಚಿಲ್ಲರ ಉದ್ದಿಮೆದಾರರು ತಮ್ಮ ಕಸಬನ್ನು ಇದನ್ನು ನೋಡಿಯೇ ಕಲಿತಿರಬೇಕು. ಅವಳ ಅಂಗಸೌಷ್ಠವಕ್ಕೂ ದೇಹದ ಪ್ರಮಾಣ ಬದ್ಧ ಬೆಳವಣಿಗೆಗೂ ಬಹಳ ಮಟ್ಟಿಗೆ ಇದೇ ಕಾರಣವು. ಅವಳಿಗೀಗ ೧೨-೧೩ ವರುಷ. ಊರೊಳಗಿನ ರಸಿಕ ವರ್ಗದ ಸ್ಥಿತಿಯು ಪಾಕಶಾಲೆಯ ಲ್ಲಿಯ ಪಕ್ವಾನ್ನದ ವಾಸನೆ ಬಡಿದ ಭೋಕ್ತೃವೃಂದದಂತಾಗಿತ್ತು.

ರಂಗನೂ ಅವನೊಬ್ಬ ಸಹಪಾಠಿಯೂ ಶಾಸ್ತ್ರಿಗಳಲ್ಲಿ ಸಂಸ್ಕೃತ ಹೇಳಿಸಿಕೊಳ್ಳುತಿದ್ದರು. ಕಾವ್ಯ ಕಲಿಯಬೇಕು ಶಾಸ್ತ್ರಿಗಳಲ್ಲಿಯೇ. ಸಂಧಿ ಪ್ರಕಾಶದಲ್ಲಿ ಸಮಾಸಚಕ್ರದ ಕಾಟ ಮಾತ್ರ ತಪ್ಪಿಸಿಕೊಳ್ಳಬೇಕು. ಅದರ ರುಚಿಯೇ ಬೇರೆ. ವಿಟಪಾಲವಾಲಃ ಎಂಬದರ ವಿಗ್ರಹವನ್ನು 'ವಿಗತಃ ಟಪಾಲವಾಲಾಯಸ್ಮಾತ್' ಎಂದು ಹೇಳಿ ಪತ್ರದ ಡಬ್ಬಿ ತೂಗಹಾಕಿದ ಗಿಡದ ನೆನಪುಕೊಟ್ಟು ನಗಿಸುವ ಕಲೆಯು ಅವರದು ಅವರಿಗೇ ಸೈ. 'ಮಾಘಾ ಓದಿ ಮಗಾ ಕೆಟ್ಟಾ' ಎಂಬ ನಾಣ್ಣುಡಿಯ ಪ್ರಚಾರಕ್ಕೆ ಬಹಳ ಮಟ್ಟಿಗೆ ಶಾಸ್ತ್ರಿಗಳ ಕಾವ್ಯ ಕಲಿಸುವ ಪದ್ಧತಿಯೇ ಕಾರಣ. ಕಾವ್ಯವೆಂದ ಮೇಲೆ ಶೃಂಗಾರವಿರುವದೇ. ಅದರಲ್ಲಿ ಸಂಕೋಚವೇತರದು? ಮರ್ಮ ವನ್ನು ತಿಳಕೊಂಡು ಪೂರ್ಣ ಸವಿಯುಣಬೇಕಾದರೆ ಹಿಡಿತಡೆಯು ತರವಲ್ಲ. ಇಲ್ಲವಾದರೆ ಈಗಿನ ಕಾವ್ಯ ಕಲಿಸುವ ಪದ್ಧತಿ, ಛೇ. ಎರಡೂ ಭಾಷೆಗಳ ಕೊಲೆಮಾಡಿದಂಥ ಇಂಗ್ಲಿಷ್ ಭಾಷಾಂತರವೊಂದನ್ನು ಹೇಳಿದರೆ ತೀರಿತು. ಆದರಲ್ಲಿ ಕಾಲೇಜದ ಪ್ರೌಢ ವಿದ್ಯಾರ್ಥಿಗಳಿಗೆ ಹಚ್ಚಿದ ಭಾಗದಲ್ಲಿ 'ಪ್ರಿಯಾ ನಿತಂಬೋಚಿತ ಸಂನಿವೇಶೈರ್ವಿಪಾಟಯಾಮಾಸ ಯುವಾ ನಖಾಗ್ರೈಃ' ಎಂದಿದ್ದಲ್ಲಿ ಮೊದಲಿನ ಅರ್ಧಸಾಲು ಲುಪ್ತವಾಗಿ ಆ ಸ್ಥಳದಲ್ಲಿ ಚಿಕ್ಕೆಗಳು. ಈಗಿನ ಇಂಥ ಸಂಪಾದಕರು ಜಾಣರೋ ಅಥವಾ ವಿಶ್ವಜಿತ್ ಯಾಗದಲ್ಲಿ ಸರ್ವಸ್ವವನ್ನು ದಾನಮಾಡಿದ ರಘುವಿನ ವರ್ಣನೆಯ ಸೊಬಗನ್ನು ಮನದಟ್ಟಾಗಿ ಮಾಡಲು 'ಕಲಾಶೇಷಶ್ಚಂದ್ರಃ ಸುರತಮೃದಿತಾ ಬಾಲವನಿತಾ। ತನಿಮ್ನಾ ಶೋಭಂತೆ ಗಲಿತ

ವಿಭವಾಶ್ಚಾರ್ಥಿಷು ನೃಪಾಃ' ಎಂಬ ಶ್ಲೋಕವನ್ನು ಉದಹರಿಸುವ ಮಲ್ಲಿನಾಥನು ಮೂರ್ಖನೋ ತಿಳಿಯದು. ಅದೇ ಓಣಿಯಲ್ಲಿ ಶಾಸ್ತ್ರಿಗಳ ಮನೆಯು ಹತ್ತಿರವೇ ಇದ್ದುದರಿಂದ ಸಾಬಿಯೂ ಸಂಜೆಯ ಮುಂದೆ ಹೋಗಿ ಕೇಳುತ್ತ ಕೂಡುವಳು. ಅವಳ ಈ ಎಲ್ಲ ಸಂಸ್ಕಾರಗಳು ಅವಳ ರಸಜ್ಞತೆಯನ್ನು ಹೆಚ್ಚಿಸಿದ್ದವು 'ನಿಜಗಾದ ಸಾ ಯದುನಂದನೇ ಕ್ರೀಡತಿ ಹೃದಯಾನಂದನೆ' ಈ ಪದವನ್ನು ಅವಳು ಹಾಡುವದನ್ನು ಕೇಳಿದವರೆಲ್ಲರೂ ಸಂತೋಷದಿಂದ ತಲೆದೂಗುವರು. ಸುತ್ತಲಿನ ಪಂಚಕ್ರೋಶಿಯಲ್ಲಿ ಹೆಸರಾಗುವವಳೆಂಬ ಅವಳ ತಾಯಿಯ ಆಶೆಯು ಸಾಧಾರವಾಗಿತ್ತು.

ಈ ಸುಮಾರಿಗೆ ಗುರುರಾಯರ ನಟರಾಜ ಪ್ರಾಸಾದಿಕ ನಾಟಕ ಸಂಘವು ಆ ಊರಿಗೆ ಬಂದಿತ್ತು. ಹಳ್ಳಿಗರಿಗೆ ಹೊಸವಾದ ವಿದ್ಯುದ್ದೀಪಗಳಿಂದಲೂ ಸೀನಸೀನರಿಗಳಿಂದಲೂ ಜನರನ್ನು ಮೆಚ್ಚಿಸುತ್ತ ಸಾಗಿತ್ತು. ಪಟ್ಟಣವಾಸದ ವೆಚ್ಚವಿಲ್ಲದ್ದರಿಂದ ಆದಾಯವು ಎಷ್ಟಾದರೂ ಉಳಿತಾಯವು ಸಾಧಾರಣವಾಗಿ ಆಗುತ್ತಿತು. ಜನಜೀವನದ ಕಂಠಾಭರಣವಾದ ನಾಟಕಾಲಂಕಾರವು ಕೆಳಗಿಳಿದು ಕಾಲಿನ್ತ್ರಾಡಕಾಗಹತ್ತಿತ್ತು. ಸರಿಜೋಡಿಯ ಒಂದೆರಡು ಕಂಪನಿಗಳು ಹೆಣ್ಣನ್ನು ರಂಗಸ್ಥಳದ ಮೇಲೆ ತಂದು ಕುಣಿಸಿ, ಆ ನೂತನ ಮೋಹದ ಬಲೆ ಬೀಸಿ ಕೆಲಮಟ್ಟಿಗೆ ರೊಕ್ಕ ಸೆಳೆಯುತ್ತಿದ್ದವು. ಈ ಅವನತಿಯನ್ನು ಕಂಡು ಗುರುರಾಯರ ಮನವು ಕಳವಳಿಸುತ್ತಿತ್ತು. ರಂಗಭೂಮಿಯ ಪುನರುಜ್ಜೀವನಕ್ಕಾಗಿ ಅತುಲಮತ್ತ, ಅಮಿತ ಸ್ವಾರ್ಥತ್ಯಾಗಗಳನ್ನು ಮಾಡಲು ಅವರು ಹವಣಿಸುತ್ತಿದ್ದರು. ರೋಗಿಗೆ ರುಚಿಸುವ ಅನ್ನದಲ್ಲಿಯೇ ಔಷಧ ಕೊಡಬೇಕೆಂದು ನಿಶ್ಚಯಿಸಿದ್ದರು. ಅವರ ನಾಟಕಗಳಿಗೆ ಯುಕ್ತರೆನಿಸುವಂಥ ಒಬ್ಬ ಕನ್ಯೆಯ ಶೋಧದಲ್ಲಿ ಕೂಡ ಇದ್ದರು. ಆದರೆ ಉಳಿದವರಂತೆ ಒಮ್ಮೆಲೆ ಬಣ್ಣ ಬಳಿದು ರಂಗದೀಪದ ಮುಂದೆ ನಿಲ್ಲಿಸಬಾರದೆಂದು ಅವರ ನಿರ್ಧಾರ. ಅವಳಿಗೆ ಚೆನ್ನಾಗಿ ಅಭಿನಯದ ಸಶಾಸ್ತ್ರ ಶಿಕ್ಷಣ ಕೊಟ್ಟು ಆಮೇಲೆ ಜನರ ಮುಂದೆ ತರಬೇಕೆಂದು ಅವರ ಸಂಕಲ್ಪ. ಕಂಪನಿಯ ಮುಕ್ಕಾಮಿನ ಉಪಯೋಗವನ್ನು ಊರೊಳಗಿನ ಗಣೇಶೋತ್ಸವ ಮಂಡಲದವರು ಚೆನ್ನಾಗಿ ಮಾಡಿಕೊಂಡರು. ದಾಕ್ಷಿಣ್ಯಕ್ಕೆ ನಾಟಕ ಮನಸ್ಸು ಕಂಪನಿಯವರ ರಂಗಮಂಟಪದಲ್ಲಿಯೇ ಅವರ ಸಮಾರಂಭ

ಅಭಿನಯಿಸಿದರು. ಅದರಲ್ಲಿ ದಾಕ್ಷಾಯಿಣಿಯ ಭೂಮಿಕೆಯನ್ನು ಸಾಬಿ ವಹಿಸಿದ್ದಳು. ಆ ಪ್ರಸಂಗದಲ್ಲಿಯು ಅವಳ ಅಭಿನಯಕೌಶಲ್ಯಕ್ಕೂ ಕಂಠ ಮಾಧುರ್ಯಕ್ಕೂ ಗುರುರಾಯರು ಮನಸೋತರು. ತಮ್ಮ ಜೀವಿತಾ ಕಾಂಕ್ಷೆಯು ಸಫಲವಾದರೆ ಇವಳಿಂದಲೆ ಎಂದೆಂದುಕೊಂಡರು. ಸಾಬಿಯ ತಾಯಿಯನ್ನು ಕಂಡುಕೊಂಡು ಒಡಂಬಡಿಸಿ ತಿಂಗಳೊಂದಕ್ಕೆ ೭೫ ರೂ. ಕೊಡುವ ಕರಾರ ಮಾಡಿ ೬ ವರ್ಷದ ಬಾಂಡು ಬರೆಯಿಸಿಕೊಂಡರು. ಊರು ಬಿಡುವಾಗ ಇಬ್ಬರನ್ನೂ ಕರೆದುಕೊಂಡು ಹೋದರು. ದುಡಿಸಿ ಕೊಳ್ಳದೆ ಇವಳಿಗೆ ಪಗಾರ ಕೊಡುವದನ್ನು ನೋಡಿ ಕಂಪನಿಯ ಜನರಲ್ಲಿ ಕೆಲವರು 'ಇದು ಮುಮುತಾಜ ಪ್ರಕರಣದ ಪುನರಾವೃತ್ತಿ' ಎಂದು ಕೊಂಡರು ಇನ್ನು ಕೆಲವರು ಕೇಸರಿಯು ಮಲೆನಾಡಿನ ಕಾಡು ಹೊಕ್ಕು ಒಂದು ಹರಿಣಿಯನ್ನು ಹಿಡಿದು ತಂದಿರುವದೆಂದು ಆಡಿಕೊಳ್ಳಹತ್ತಿದರು. ಅವರವರ ಭಾವ, ಅವರವರ ಕಿಚ್ಚು ಅವರಿಗೆ. ಗಂಭೀರವೃತ್ತಿಯ ಸಮಾಜ ಸೇವಕನು ಜನರ ಸ್ತುತಿನಿಂದೆಗಳನ್ನು ಲೆಕ್ಕಿಸದೆ ತಾನು ಕೈಕೊಂಡ ಕಾರ್ಯ ವನ್ನು ಕೊನೆಗಾಣಿಸುವನು. ಆಗ ಜನರು ಬೆರಗಾಗುವರು. ಈ ವಿಷಯ ದಲ್ಲಿಯೂ ಹಾಗೆ ಆಯಿತು.

* * * *

ಸಾಬಿಯು ಊರು ಬಿಟ್ಟು ಹೋದ ಮಾತಿಗೆ ಈಗ ೪-೫ ವರ್ಷಗಳಾ ದವು. ಕಳೆದ ವರ್ಷ ಒಂಬತ್ತನೆ ವರ್ಷದಿಂದಲೂ ಮೋಹಿನಿಯ (ಸಾಬಿಯ ರಂಗನಾಮ) ನಾಟ್ಯಕೌಶಲ್ಯದ ಯಶೋದುಂದುಭಿಯು ದೇಶದಲ್ಲೆಲ್ಲ ಮೊಳಗಹತ್ತಿದೆ. ಗುರುರಾಯರು ಅವಳಿಗೆ ಸಲ್ಲತಕ್ಕ ಗೌರವದ ಅಂಶವೆಂದು ತಮ್ಮ ಕಂಪನಿಯ ಹೆಸರನ್ನು ಮೋಹಿನೀ ಸಂಗೀತ ನಾಟಕಮಂಡಲವೆಂದು ಬದಲಿಸಿ ಇಟ್ಟಿದ್ದರು.

ರಂಗನ ಶಿಕ್ಷಣವು ಮುಲ್ಕೀ ಪರೀಕ್ಷೆಯ ವರೆಗಾಯಿತು. ಆದ ಒಂದು ವರ್ಷದಲ್ಲಿಯೇ ಆವನ ತಂದೆಯು ತೀರಿಕೊಂಡದ್ದರಿಂದ ಅರಿವೆಯ ಅಂಗಡಿ ಯನ್ನು ನಾಗಿಸಿಕೊಂಡು ಊರಲ್ಲಿಯೇ ಇದ್ದನು. ಖರೀದಿಗಾಗಿ ಹುಬ್ಬಳ್ಳಿ, ಗದಗು; ಕೋರ್ಟಿನ ಕೆಲಸವಿದ್ದರೆ ಧಾರವಾಡ ಇಷ್ಟೇ ಓಡಾಡಬೇಕಾಗು ತ್ತಿತ್ತು. ಶಹರಕ್ಕೆ ಬಂದಾಗ ತಾನು ಷೋಕ್ ಮಾಡಬೇಕೆನ್ನುವ ಹಳ್ಳಿಗರಲ್ಲಿ ಆವನೊಬ್ಬ. ಕೆಲಸ ತೀರಿದ ಮೇಲೆ ಮೋಹಿನೀ ಸಂಗೀತ ಮಂಡಲದ

ಖ್ಯಾತಿಯನ್ನು ಕೇಳಿ ಅಂದು ನಾಟಕ ನೋಡಲಿಕ್ಕೆ ಹೋದನು. ನಾಟಕವು ಸುರುವಾಯಿತು. ಸಭಿಕರ ಕರತಾಡನೆಯ ಪ್ರಚಂಡ ಶಬ್ದದೊಡನೆ ನಾಯಿಕೆಯ ಪ್ರವೇಶವಾಯಿತು. ಒಂದೆರಡು ಮಾತಾದೊಡನೆಯೇ ಹಾಡಹತ್ತಿದಳು. ಪಲ್ಲವಿಯ ಗುಂಗುಕಿನಲ್ಲಿಯೇ ತನ್ನ ಸ್ವರಸುಧೆಯಿಂದ ಸಭಿಕರ ಮನ ತಣಿಸಿದಳು; ಹಾಡಲಿಕ್ಕೆಂದು ಮುಂದೆ ಬಂದು ನಿಂತಳು. ರಂಗನಿಗೆ ಆಗ ಪೂರ್ಣ ಗುರುತು ಸಿಕ್ಕಿತು. ಸಭಾಮಂದಿರದಲ್ಲಿರುವ ಎಲ್ಲರಿಗಿಂತಲೂ ಹೆಚ್ಚು ಆನಂದ ಅವನಿಗೆ. ಎಡಬಲದವರಿಗೆ ನಡುನಡುವೆ ಅವಳು ತಮ್ಮೂರವಳೆಂದು ಹೇಳಿ ಅವಳ ಪರ್ಯಾಯದಿಂದ ತನ್ನ ಬಾಲ್ಯದ ಇತಿಹಾಸವನ್ನು ಹೇಳತೊಡಗಿದನು. ಗುರುತಿಲ್ಲದೆ ಮಾತಾಡುವವರು ಪಟ್ಟಣಿಗರಿಗೆ ಸೇರರೆಂಬ ಅರಿವು ಅವನಿಗಿದ್ದಿಲ್ಲ. ಅವನ ಕಡೆಗೆ ಲಕ್ಷ್ಯಕೊಡದೆ ಒಬ್ಬನು ಹಾಗೇ ಕುಳಿತನು. ಮತ್ತೊಬ್ಬನು 'ಚ್, ಚ್' ಎಂದು ಶಾಂತತಾ ಪ್ರಸ್ಥಾಪಕ ಕೈಸನ್ನೆಯನ್ನು ಮಾಡಿದನು. ಸರಿಯೇ. ರೊಕ್ಕ ಕೊಟ್ಟು ಬಂದದ್ದು ನಾಟಕ ನೋಡಲಿಕ್ಕೆಂದು; ರಂಗನ ಇತಿಹಾಸ ಕೇಳಲಿಕ್ಕಲ್ಲ. ನಾಟಕಮುಗಿದ ಮೇಲೆ ಯತ್ನಪೂರ್ವಕವಾಗಿ ಮೋಹಿನಿಯು ಇಳಿದುಕೊಂಡಿರುವ ಮನೆಯ ಪತ್ತೆ ತಿಳಕೊಂಡನು. ಅವಳನ್ನು ಕಾಣಬೇಕೆಂಬ ಕುತೂಹಲವಿತ್ತು. ನಿರ್ಧಾರವಿನ್ನೂ ಆಗಿದ್ದಿಲ್ಲ. ಪ್ರಸಂಗದಲ್ಲಿ ಇರಲೆಂದು ಬರಕೊಂಡನಷ್ಟೇ. ಅವಳಂಥ ಪ್ರಸಿದ್ಧ ನಟಿಯನ್ನು ತಾನು ಹೇಗೆ ಕಾಣಲು ಹೋಗಬೇಕೆಂಬ ಪ್ರಶ್ನೆಯವನಿಗೆ. ಮರುದಿನ ಮಧ್ಯಾಹ್ನದ ೪ ಗಂಟೆಯ ವರೆಗೂ ಹೊಯ್ದಾಡಿ ಅವಳ ಬಿಟ್ಟಗೆ ಹೋದನು, ವರ್ತಕರ ರಂಗನೆಂದು ಹೇಳಿಕಳಿಸಿದನು. ಪ್ರವೇಶ ದೊರೆಯಿತು. ಅವನ ಅಪೇಕ್ಷೆ ಮೀರಿ ಆತಿಥ್ಯ ಆದರೋಪಚಾರಗಳಾದವು. ಆ ದಿನ ಮತ್ತಾರಿಗೂ ಮೋಹಿನಿಯು ಬೆಟ್ಟಿಯಾಗಲಿಲ್ಲ. ಅಗಲಿಕೆಯಾದ ನಂತರದ ವೃತ್ತಾಂತವನ್ನು ಪರಸ್ಪರರಿಗೆ ಹೇಳುವದಾಯಿತು. ರಂಗನದೇನು? ತಂದೆ ತೀರಿಕೊಂಡದ್ದು; ಅಂಗಡೀ ಹಿಡಿದದ್ದು; ಎರಡೇ ವಾಕ್ಯಗಳಲ್ಲಿ ಮುಗಿಯಿತು. ನಾಬಿಯ ಇತಿಹಾಸವು ಹಾಗಿರಲಿಲ್ಲ. ಜನ್ಮಾಂತರದ ವೃತ್ತಾಂತದಂತಿತ್ತು. ಅವಳು ಪಡೆದ ಶಿಕ್ಷಣ, ಅವಳು ಓದಿದ ಪುಸ್ತಕ, ಅವಳಿಗೆ ಬೆಟ್ಟಿಯಾದ ಜನ, ಅವಳು ನೋಡಿದ ಊರು–ಎಲ್ಲವನ್ನೂ ಒಂದು ಬಗೆಯ ಆತ್ಮೀಯತೆಯಿಂದ, ಅಭಿಮಾನದಿಂದ ಸಾದ್ಯಂತವಾಗಿ ಹೇಳಿದಳು. ಕೀರ್ತಿ

ಮಂದಿರದಲ್ಲಿ ಸ್ಥಾಪಿತವಾಗಿದ್ದ ಮೋಹಿನೀಮೂರ್ತಿಯು ಮುಂದೆ ಬಣ್ಣ ಬಣ್ಣದ ಸಂಜುಗಳನ್ನು ಹಿಡಿದಂತಾಯಿತು. ರಂಗನು ಬೆರಗಾಗಿ ಬೆಪ್ಪನೆ ಕುಳಿತನು. ಸಾಬಿಯು ಊರ ಸಂಗತಿಯನ್ನು ಕೇಳತೊಡಗಿದಳು. ರಂಗನು ರಿಪೋರ್ಟಿನಂತೆ ಉತ್ತರ ಕೊಡುತ್ತ ನಡೆದನು.

ಸಾಬಿ:—ಓಣೀ ತುದೀಗಿದ್ದ ಮಳಿಗೀ, ಅದನs ಇನ್ನ?

ರಂಗ:—ಹೂಂ ದುಮ್ಮಜಲಾಗೇದ. ತೆಳಗ ಮೋಟಾರಖಾನಿ, ಮ್ಯಾಲೆ ಸರ್ವಿಸ ಕಂಪನಿಯ ಆಫೀಸ್.

ಸಾಬಿ:—ಮತ್ತ-ಕಣ್ಣಮುಚ್ಚಣಕೀ ಆಡತಿದ್ದೆವೆಲ್ಲಾ ಆ ಹಣಮಂತ ದೇವರ ಗುಡಿ! ಕಟ್ಟಿಸ್ಯಾರೇನದನ್ನ!

ರಂಗ:—ಇಲ್ಲ.

ಸಾಬಿ:—ಬೆಳವಲಕಾಯಿ ತಿಲ್ಲಿಕ್ಕೆ ಹೋಗತಿದ್ದೆವಲ್ಲಾ ಬೆಲ್ಲಾ ಕದಕೊಂಡು ಆ ತ್ವಾಟಾ?

ರಂಗ:—ಅಕ್ಕೀ ಗಿರಣಿ ಆಗೇದಲ್ಲೆ. ಹುಬ್ಬಳ್ಳಿಯವರದು.

ನೆನೆಸಿ ಆನಂದಪಡಬೇಕೆಂದಿದ್ದ ಒಂದೊಂದು ಸ್ಥಾನವೂ ವಿಕೃತವಾದದ್ದನ್ನು ಕೇಳಿ ಕಕ್ಕಾವಿಕ್ಕಿಯಾದಳು. ಒಂದು ಬಗೆಯ ವಿಷಾದ ತ್ವೇಷ ಆತುರತೆಗಳಿಂದ ಮತ್ತೊಮ್ಮೆ ಕೇಳಿದಳು.

ಸಾಬಿ:—ನಾವು ಈಸೋ ಭಾಂವಿ?

ರಂಗ:—ಓಹೋ ಯಾವಾಗೋ ನೀರಿನ ಬರದಾಗ ಬತ್ತಿಹೋತು. ಬೋರಿಂಗ್‌ಮಶಿನ್ ಹಚ್ಚಿಸಿದ್ದರ ಶೆಲಿಯೊಡೀತಿದ್ವು. ನೀರು ಪೂರೈಸತಿತ್ತು. ಅದನ್ಯಾರು ಮಾಡಬೇಕು. ಗಿರಣಿಯವರು ಗೊಳಲಿ ಹಾಕಲಿಕ್ಹತ್ಯಾರ.

ಹತಾಶಳಾಗಿ ಪರಿಚಿತ ವ್ಯಕ್ತಿಗಳನ್ನು ಕೇಳಿದಳು.

ಸಾಬಿ:—ಶಾಸ್ತ್ರಿಗಳು ನೆಟ್ಟಗಿದ್ದಾರ? ಹೇಳಿಸಿಗೋಳ್ಳಿಕ್ಕೆ ಹೋಗತೀಯಾ ಇನ್ನೂ?

ರಂಗ:—ನಾ ಎಂದೋ ಬಿಟ್ಟಬಿಟ್ಟೆ. ಕಲಿಸಲಿಕ್ಕೆ ಕಳಸಂದರ ಬೇಕಾರ ಹೋಗಿ ಹೇಳತೇನಿ ಅವರಿಗೆ.

ಸಾಬಿಯ ಹೃದಯದ ದ್ವಾರವು ಕಿಲಿಕಿಲಿಯಾಗಿತ್ತು. ಒಳಗಿನಿಂದ ಇಣಿಕಿಯೂ ನೋಡುತ್ತಿದ್ದಳು. ರಂಗನು ಬೊಟ್ಟು ತಾಗಿಸಿದ್ದರೆ ಬಾಗಿಲ

ತೆರೆದು ಬರುತ್ತಿದ್ದಳು. ಆದರೆ ಆ ಯೋಗವಿರಲಿಲ್ಲ. ಅವಳ ಭಾವದಲ್ಲಿ ಬೆರೆಯುವದು ರಂಗನಿಂದಾಗಲಿಲ್ಲ. ಹುಡುಗಾಟಿಕೆಯ ಸಲಿಗೆಯಿಂದ 'ಸಾಬಿ' ಎಂದು ಕೈಕೊಡವಿ ಕರೆಯಬೇಕೆಂದು ಅವನ ಮನದಾಶೆ. ಆದರೆ ಸುಪ್ರಸಿದ್ಧ ನಟಿ, ಹಳ್ಳಿಯ ವ್ಯಾಪಾರಸ್ಥ ಈರ್ವರಲ್ಲಿ ಅವನಿಟ್ಟುಕೊಂಡಿದ್ದ ಅಕ್ರಮ್ಯ ಅಂತರವು ಅದನ್ನು ಪೂರೈಸಗೊಡಲಿಲ್ಲ. ೧೦ ವರ್ಷಗಳಿಂದಲೂ ಒಂದು ರೀತಿಯಿಂದ ಸಂಬಂಧ ತಪ್ಪಿದರೆ ಮತ್ತೆ ಬೇರೆ ಬಗೆಯಲ್ಲಿ ಕೂಡುತ್ತ ನಡೆದಿದ್ದರು. ಆದ್ದರಿಂದ ಬೆಳೆಯುವ ಮನದ ತಂತುಗಳನ್ನು ಎತ್ತಿಹಿಡಿದು ಸ್ನೇಹಪಟವನ್ನು ನೇಯುತ್ತ ಬಂದಿದ್ದನು. ಈಗ ಮಾತ್ರ ೪-೫ ವರ್ಷ ಸರ್ವವಿಧದಲ್ಲೂ ಸಂಬಂಧ ತಪ್ಪಿದ್ದರಿಂದಲೂ ಜೀವನ, ಮಾರ್ಗ, ಸಂಸ್ಕಾರಗಳೇ ಬೇರೆಯಾದ್ದರಿಂದಲೂ ಈ ಸಾರೆ ಎಳೆ ಹಿಡಿಯಲು ರಂಗನು ಅಸಮರ್ಥನಾದನು. ಮೋಹಿನಿಯು, ನಟಿ-ಮೋಹಿನಿಯಾಗಿ ಹಾಗೇ ಉಳಿದಳು. ಇತ್ತ ಹಳ್ಳಿಯ ವ್ಯಾಪಾರಸ್ಥನಾಗಿ ರಂಗನುಳಿದನು.

* * * * *

ವೆಂಕಟರಾಯರು ಕಾಲೇಜಿನಲ್ಲಿ ವೇದಾಂತ ವಿಷಯದ ಅಧ್ಯಾಪಕರು. ಮಾನಸಶಾಸ್ತ್ರವು ಅವರ ಪ್ರೀತಿಯ ವಿಷಯ. ರಂಗಭೂಮಿಯ ಬಗ್ಗೆ ಅವರ ಆಸ್ಥೆ ಬಹಳ. ಅಭಿನಯಕಲಾನಿಪುಣರೆಂದು ಅವರ ಪ್ರಸಿದ್ಧಿ. Merchant of Venice—ಸುರತನಗರದ ಶ್ರೇಷ್ಠಿಯಲ್ಲಿ ಅಂಟೋನಿಯೋನು ಶಾಯಲಾಕ್‌ನ ಅಮಾನುಷ ಕರಾರುಗಳಿಗೆ ಒಪ್ಪಿಕೊಂಡು ಸಾಲ ತೆಗೆಯುವದು ಅಸ್ವಾಭಾವಿಕವೆಂದು ಚರ್ಚೆ ನಡೆಯಿತು. ವೆಂಕಟರಾಯರು ಅಭಿನಯಿಸಿ ತೋರಿಸಿದಾಗ, ಶಾಯಲಾಕ್‌ನಾಗಿ 'In merry jest we shall put a forfeiture on the bond' ಎಂಬುದನ್ನು ಕೇಳಿದ ಪೂರ್ವಗ್ರಹವುಳ್ಳ ಪ್ರತಿಪಕ್ಷಿಗಳೇ ಆ ಕರಾರಗಳಿಗೊಪ್ಪಿ ಸಹ ಆಗ ಸಹಿ ಮಾಡಬಹುದಾಗಿತ್ತು; ಇನ್ನು Antonio ನು ಅದಾವ ಗಿಡದ ತೊಪ್ಪಲು! ರಾಯರಿಗೆ ನಾಟಕದ ನಾದ ಬಹಳ. ಉಡಾಳ ಹುಡುಗರನ್ನು ಕೂಡಿಹಾಕಿಕೊಂಡು ಗೊಂದಲವೆಬ್ಬಿಸಿ, ತನ್ನ ಗೌರವವನ್ನು ಕಳೆದುಕೊಳ್ಳುವನೆಂದು ಜನರು ಹಳಿದರೂ ಅವನ್ನು ಲೆಕ್ಕಿಸದೆ ಊರಲ್ಲೊಂದು ಅಮೆಚೂರ ನಾಟಕ ಸಂಘವನ್ನು ಸ್ಥಾಪಿಸಿ ಅದರ ಸೂತ್ರಚಾಲಕರಾಗಿದ್ದರು. ಆ ಸಂಘದ ಪರವಾಗಿ ಒಂದು ಸಭೆ ನೆರೆಯಿಸಿ ಮೋಹಿನಿಯನ್ನಾಮಂತ್ರಿಸಿ, ಸನ್ಮಾನಿಸಿ

ಹೊಗಳಿದ್ದರು. ಕರ್ನಾಟಕಕ್ಕೆ ಅಲಂಕಾರವಾದ ಒಂದು ರತ್ನವನ್ನು ಶೋಧಿಸಿ ಸಾಣೆ ಹಿಡಿದು, ನಾಮರೂಪಕ್ಕೆ ತಂದದ್ದಕ್ಕಾಗಿ ಗುರುರಾಯರನ್ನು ಅಭಿನಂದಿಸಿದರು. ಗುರುರಾಯರೂ ತಮ್ಮ ಭಾಷಣದಲ್ಲಿ ಅಂದರು: 'ಪರೀಕ್ಷಕರು ಇಷ್ಟು ಸ್ತುತಿಸಿದರೂ ಇನ್ನೂ ಕಲಿಯಬೇಕು, ದುಡಿಯಬೇಕೆಂಬದನ್ನು ನಾವು ಚನ್ನಾಗಿ ಬಲ್ಲೆವು. ಈ ಮಟ್ಟೆಗಾದರೂ ತಂದು ಮುಟ್ಟಿಸುವದು ಪಾಮರನಾದ ನನ್ನೊಬ್ಬನ ಯೋಗ್ಯತೆಯಲ್ಲ. ಕಾಲಕಾಲಕ್ಕೆ ವೆಂಕಟರಾಯರಂಥ ವಿದ್ವಜ್ಜನರ ಸಲಹೆ ಸಹಾಯಗಳಿಂದಲೇ ಈ ಮಾತು ಸಾಧ್ಯವಾಯಿತು. ಇನ್ನು ಮುಂದಾದರೂ ಹಾಗೆಯೇ ಸಹಾಯ, ಸಹಾನುಭೂತಿಗಳನ್ನಿತ್ತು ಶ್ರೇಯೋಭಾಗಿಗಳಾಗಬೇಕು!'

ಗುರುರಾಯರಿಗೂ ವೆಂಕಟರಾಯರಿಗೂ ಬಹುದಿನದಿಂದಲೂ ಸ್ನೇಹ. ಕಂಪನಿಯ ಮುಕ್ಕಾಮು ಆದಾಗಿನಿಂದ ಅವರಲ್ಲಿ ಹೋಗಿಬರುತ್ತಲೇ ಇದ್ದರು. ಮೋಹಿನಿಯ ಅಭಿನಯದ ಹೆಚ್ಚಿನ ಅಭ್ಯಾಸವು ಇವರಿಂದ ಮುಂದೆ ಸಾಗಿತ್ತು. ಇಂಗ್ಲಿಷ್ ಸಂಸ್ಕೃತ ನಾಟಕಗಳಲ್ಲಿಯ ಉತ್ತಮೋತ್ತಮ ಸನ್ನಿವೇಶಗಳ ಭಾವವನ್ನು ತಿಳಿಸಿ ಹೇಳಿ ಮರ್ಮಜ್ಞಾನವಾಗುವಂತೆ ಓದಿ ತೋರಿಸುವರು. ೪-೫ ಸಿನೇಮಾ ಟಾಕಿ (Talkies) ಗಳಿಗೂ ಜೊತೆಯಲ್ಲಿಯೇ ಹೋಗಿ ನೋಡಿ ಬಂದು ಅವುಗಳಲ್ಲಿಯ ನಟ-ನಟಿಯರ ಅಭಿನಯವನ್ನು ಚರ್ಚಿಸುವರು. ಒಟ್ಟಿಗೆ ಎಲ್ಲರ ಪ್ರಯತ್ನವೂ ಅವಳನ್ನೊಬ್ಬ ಆದರ್ಶಪ್ರಾಯಳಾದ ನಟಿಯನ್ನಾಗಿ ಮಾಡಬೇಕೆಂದು ನಡೆದಿತ್ತು.

ವೆಂಕಟರಾಯರ ಒಂದು ಸಾಮಾಜಿಕ ನಾಟಕವನ್ನು ಗುರುರಾಯರು ತಕ್ಕೊಂಡಿದ್ದರು. ಒಂದು ತಿಂಗಳಿಂದ ತಾಲೀಮೂ ನಡೆದಿತ್ತು. ಉಳಿದೆಲ್ಲ ಕಡೆಯಲ್ಲಿ ಅವರ ಮನಸಿನಂತೆ ಅಭಿನಯವಾದರೂ ಒಂದು ಸ್ಥಳದಲ್ಲಿ ಮಾತ್ರ ಮೋಹಿನಿಯ ಅಭಿನಯವು ಸಮಾಧಾನಕರವೆನಿಸಲೊಲ್ಲದು. ಆ ಪ್ರವೇಶದಲ್ಲಿ ಪ್ರಾಪ್ತವಯಸ್ಕಳಾದ ಒಬ್ಬ ಬಾಲವಿಧವೆಯು, ಜನರ ದೃಷ್ಟಿಯಿಂದಲೂ ಸ್ವಾಮಿನಿಯನ್ನಾಗಿ ಮಾಡುವೆನೆಂದು ೨ ತಿಂಗಳುಗಳಿಂದಲೂ ಹೇಳುತ್ತ ಬಂದ ನಾಯಕನನ್ನು ಜರಿದು ಮುನಿಸಿನಿಂದ ಹೊರಡುವಳು. ಆಗ ನಾಯಕನು ಅವಳ ಸೆರಗು ಹಿಡಿದು ನಿಲ್ಲಿಸುವನು. ಅದಕ್ಕೆ ಅವಳು 'ಅಕಟಾ, ಬಿಡು! ಬಿಡು ನನ್ನ ಸೆರಗು' ಎಂದು ಕೊಸರಿಕೊಂಡು ಹೋಗಲೆಸಗುವಳು.

ನಾಯಕನು 'ಇತ್ತ ನೋಡು. ನನ್ನ ಕಡೆಗೊಮ್ಮೆ ದಿಟ್ಟಿಸಿ ನೋಡು. ನಾನು ಮೋಸಗಾರನೇ! ಮಾತು ತಪ್ಪುವ ನಾಲಿಗೆಯನ್ನು ನನ್ನ ಹೃದಯ ವೆಂದೂ ನುಡಿಸಿಲ್ಲ. ಈ ಎರಡು ತಿಂಗಳಲ್ಲಿ ನನ್ನ ಹೃದಯಲ್ಲಾವ ಸ್ಥಿತ್ಯಂತರ ವನ್ನು ನೀನು ಕಂಡೆ? ನನ್ನ ವರ್ತನದಲ್ಲೇನು ವ್ಯತ್ಯಾಸವಾಗಿದೆ! ನಿನ್ನ ತಾತ್ಸಾರ ಮಾಡಿರುವೆನೆ? ಅನಾದರಿಸಿರುವೆನೆ? ಅಂದ ಮೇಲೆ ನನ್ನ ನಿನ್ನ ದಷ್ಟಿಯಲ್ಲಿ ಈ ಎರಡು ತಿಂಗಳ ಗಣನೆಯೇಕಿರಬೇಕು! ಮೊದಲದಿನ ನನಗ ನೀನಾಧಾರ, ನಿನಗೆ ನಾನೆಂಬ ವಿಶ್ವಾಸದ ಅಪ್ಪಿಗೆಯಲ್ಲಿ ನನ್ನೆದೆಯ ಮೇಲೆ ವಿಶ್ರಮಿಸಿದವಳು ಇದೇ ನೀನಲ್ಲವೇ? ನನಗಂತೂ ಆ ದಿನದ ಅದೇ ನಿನ್ನ ಕರುಣಾಮೂರ್ತಿ ನಿಂತಿದೆ. ಆಸರಕ್ಕಾಗಿ ಕೈ ನೀಡುತಿದೆ!'

ಭೂಬಾಲೆಯು ತನ್ನ ಜೀವಿತಸಾರವನ್ನು ಕಳೆದುಕೊಂಡು ಮೃದು ನಿಃಶ್ವಾಸಗಳನುಸುರುತ್ತ ನಿಯತ ಮಾರ್ಗದಲ್ಲಿ ಅನಂತಾಕಾಶದಲ್ಲಿ ಸಾಗಿದ್ದಾಳೆ. ಸುತ್ತಲೂ ಪ್ರಕಾಶವಂತಿಯರಾದ ಅನೇಕ ತಾರಕೆಯರು ನಗುತ್ತ ಕಲೆಯುತ್ತಿದ್ದಾರೆ. ವಿಷಾದದಿಂದ ತಲೆ ಬಗ್ಗಿಸಿಕೊಂಡು ಬಾಲೆಯು ನಡೆದಳು. ಕೆಲ ದಿನಗಳಲ್ಲಿ ಚಂದ್ರನು ದೃಷ್ಟಿಗೆ ಬಿದ್ದನು. ಸಹಾನುಭವದ ಅಮೃತಕರ ಸ್ಪರ್ಶವಾದ ಕೂಡಲೆ ಪುಲಕಿತಳಾದಳು. ಉಳಿದೆಲ್ಲರಕ್ಕಿಂತ ಅವನ ಬಂಧನವು ಬೇರೆ ತರದ್ದಾಯಿತು. ನಿಕಟತರವಾಯಿತು. ಪೂರ್ವಸ್ಥಿತಿಯ ಅವಶೇಷವಿದ್ದುದರಿಂದ ಇವನ ಹೃದಯವು ಶುದ್ಧವಾಗಿದ್ದರೂ ಕಣ್ಣಿಗೆ ಕಲಂಕಿತನಾಗಿ ಕಾಣುವನು. ಗತಿಯ ವಿಧಿನಿಯಮವೋ ವಿಚಿತ್ರ. ಇಂದು ಇದ್ದಷ್ಟು ಹೊತ್ತು ನಾಳೆ ಇವನಿರಲಾರ. ಇಂದು ಕಂಡಷ್ಟು ಮೋರೆ ನಾಳೆ ಕಾಣದು. ದೂರ ದೂರವೆನಿಸುತ್ತ ಒಂದು ದಿನ ದರ್ಶನವೇ ಆಗಲಿಲ್ಲ. ಬಾಲೆಯು ತ್ರಸ್ತಳಾದಳು. ಮಾರನೆಯ ದಿನ ಬಂದಾಗ ತನ್ನ ಕರ್ಮದ ವೃತ್ತಾಂತ ತಿಳಿಸಿದನು. 'ಇನ್ನು ಹೆಚ್ಚು ಹೆಚ್ಚು ಹೊತ್ತು ನಿನ್ನ ಕೂಡ ಇರುವೆನೆಂ'ದು ಸಮಾಧಾನ ಹೇಳಿದನು. ಪರರ ಮೇಲೆ ಅವಲಂಬಿಸಿದ್ದರಿಂದ ಅವನ ಬೆಟ್ಟಿಯದೀ ಅವಸ್ಥೆಯೆಂದು ತಿಳಿಯಬಂತು. ಆಗ ಪ್ರಥಮದರ್ಶನದ ಪೂರ್ವ ಭಾವದಲ್ಲಿ ಬೆರೆತಳು.

ಭೂಬಾಲೆಯ ಹೃದಯವು ಸ್ಪಂದಿಸಹತ್ತಿತು. ಇನಿಯನ ಸವಿನಗೆಯ ಹೊಳೆಯಲ್ಲಿ ಅವಳು ಮಿಂದಳು; ತೇಲಿ ಹೋದಳು; ಮೈ ಮರೆತಳು. ಅವನ

ಕಣ್ಣುಗಳಲ್ಲಿಯ ಸಾಹಚರ್ಯದ ಕರೆಯಿಂದ ಆಕರ್ಷಿತಳಾಗಿ ಹತ್ತಿರ ಬಂದಳು. ವಕ್ಷಸ್ಥಳದ ಮೇಲೆ ಮಸ್ತಕವನ್ನಿಟ್ಟಳು. ಸಂಶಯದ ಸಂಧ್ಯೆಯ ಮುಬ್ಬುಗತ್ತಲು ಎತ್ತೋ ಮಾಯವಾಯಿತು.

ಸೆರಗು ಹಿಡಿದಾಗ ಹೊರಳಿ ನಿಲ್ಲುವದು, ನಾಯಕನು ತನ್ನ ಎಡಗೈಯಿಂದ ಇವಳ ಎಡಗೈ, ಬಲಗೈಯಿಂದ ಬಲಗೈ ಹಿಡಿದಾಗ ತುಸು ಹಿಂದಕ್ಕೆ ಒಲಿಯುವದು. ಮುಂದೆ ಬಲಗೈ ಕೆಳಗೆಳೆದಾಗ ಸ್ವಲ್ಪ ತಲೆಬಾಗಿಸಿ ಎದೆಯ ಮೇಲಿಡುವದು, ಆಗ ಎಡಗೈಯನ್ನು ಮಡಿಚುವದು, ಅವನ ತೋಳು ಇವಳ ಹೆಗಲ ಮೇಲಿಡಗೊಡುವದು, ಕೊನೆಗೆ ಅದೇ ಲಯದಲ್ಲಿ ಅವನ ಸಂಗಡ ಹೆಜ್ಜೆಯಿಡುತ್ತ ರಂಗಸ್ಥಲದಿಂದ ಹೋಗುವದು–ಇವೆಲ್ಲ ಆಯಾ ಕಾಲಕ್ಕೆ ಮಾಡುವ ಅಂಗಭಂಗಿಗಳು. ಅಭ್ಯಾಸದಿಂದ ಬೇಗನೆ ಸಾಧಿಸಿದವು. ಭಾವ ಬದಲಾದದ್ದನ್ನು ಮಾತ್ರ ಮೋರೆಯ ಮೇಲೆ ಅಷ್ಟು ಸೂಕ್ಷ್ಮವಾಗಿ ವ್ಯಕ್ತಪಡಿಸುವದು ಮೋಹಿನಿಯಿಂದಾಗಲೊಲ್ಲದು.

ಮೋಹಿನಿಯು ನುರಿತ ನಟಿಯೇನೋ ನಿಜ. ಜನರ ಮನದುಯ್ಯಾಲೆಯಾಡಿಸುವಂಥ ಶೃಂಗಾರ ಕರುಣ ರಸಗಳ ಆವಿಷ್ಕರಣದಲ್ಲಿ ಪಾರಂಗತಳು. ಆದರೆ ಈವರೆಗಿನ ಸನ್ನಿವೇಶಗಳು ಈ ಬಗೆಯವಿರಲಿಲ್ಲ. ಇಷ್ಟು ಕಠಿನವಿರಲಿಲ್ಲ. ಕೃತಕ ಕೋಪವನ್ನಾಗಲಿ ತದನಂತರದ ವಿಲಾಸದ ಝುಳುಕನ್ನಾಗಲಿ ಅವಳು ಚೆನ್ನಾಗಿ ಚಿತ್ರಿಸಬಲ್ಲಳು. ಸೀತಾ ದ್ರೌಪದಿಯರಂಥವರ ಧೀರ ಉದಾತ್ತತೆಯನ್ನು ಅಭಿನಯಿಸುವದು ಅವಳಿಗೆ ಸುಲಭ. ಈ ವರೆಗಾದ ಅವಳ ಅಭ್ಯಾಸ, ಶಿಕ್ಷಣ, ಜೀವನದಲ್ಲಿಯ ಮಹಾಜನರ ಸಮಾಗಮ ಇವೆಲ್ಲ ಅವಳನ್ನು ಆ ಕಾರ್ಯಕ್ಕೆ ಯೋಗ್ಯಳನ್ನಾಗಿ ಮಾಡಿದ್ದವು. ಅವಳು ಓದಿದ, ಓದುವ, ಆಡಿತೋರಿಸುವ ನಾಟಕಗಳಲ್ಲಿಯ ಪ್ರಸಂಗಗಳೆಲ್ಲ ಅವರ ದೃಷ್ಟಿಗೆ ಅಭಿನೇಯ ವಸ್ತುಮಾತ್ರಗಳಾಗಿದ್ದವು. ಅವಳ ಸಂಸ್ಕಾರವೇ ಆ ಬಗೆಯದಾಗಿತ್ತು. ಅವೆಲ್ಲ ರೂಪ ರೇಖಾಚಿತ್ರಗಳು. ಅವುಗಳಲ್ಲಿ ಬಣ್ಣ ತುಂಬುವ ಚಿತ್ರಕಾರಳಿವಳು. ಎಷ್ಟೆಷ್ಟು ನೈಜಾಭಾಸ ಮಾಡುವಳೋ ಅಷ್ಟಷ್ಟು ಇವಳ ಕೌಶಲ್ಯವು ಉಚ್ಚಪ್ರತಿಯದು. ಆ ಶಾಸ್ತ್ರದ ಸಂಕೇತಗಳ ಪ್ರಕಾರ ಆಯಾ ಬಣ್ಣದ ತಿಳಿದಟ್ಟದ ಕುಂಚವನ್ನೆಳೆಯುವಳು. ಆದರೆ ಈ ಚಿತ್ರ ಬೇರೆ.

ಈ ಪ್ರವೇಶವು ಮಾತ್ರ ಬೇರೆ ತರದ್ದಾಗಿತ್ತು. ಇದರಲ್ಲಿದ್ದುದು ಪ್ರಣಯ ಕೋಪವಲ್ಲ. ತಿರಸ್ಕಾರದ ಮೆಟ್ಟಲಿನ ವರೆಗೆ ಹೋದ ಕೋಪ. ಆ ಕೋಪದ ಭರದಿಂದ ಐದು ನಿಮಿಷಗಳಲ್ಲಿ ಎದೆಯ ಮೇಲೆ ತಲೆಯಿಟ್ಟು ಅವನ ಹೆಜ್ಜೆ ಗುಂಟ ಹೆಜ್ಜೆಯಿಡುತ್ತ ತೆರಳುವವರೆಗಿನ, ಇಂದ್ರಧನುಸ್ಸಿನ ಸಪ್ತವರ್ಣ ವನ್ನು ಚಿತ್ರಿಸಬೇಕಾಗಿತ್ತು. ಅವೂ ಏಳು ಪಟ್ಟಿ ಎಳೆದ ಹಾಗಲ್ಲ. ಒಂದರ ಲ್ಲೊಂದು ಅಭಿನ್ನವಾಗಿ ಕೂಡಿರುವಂತೆ ಮಾಡಬೇಕು. ಅದೇನು ಮಾಡಿ ದರೂ ಈ ವರೆಗೂ ಸಾಧ್ಯವಾಗಿರಲಿಲ್ಲ. ನಿಷ್ಕ್ರಮಣವು ಬಹಳೇ ಸಪ್ಪಗಾಗು ತ್ತಿತ್ತು. ವೆಂಕಟರಾಯರಂದರು. ' ನೀನು ಹೋಗುವದು ಕಟುಕನ ಬೆನ್ನು ಹತ್ತಿದ ಮೂಕ ಪಶುವಿನಂತಾಗುತ್ತದೆ. ಜಗಳವಾಡಿ ಬೇರೆ ಹೊರಟು ಹೋಗಬಹುದಾಗಿತ್ತು, ಅವಳು. ಅದು ಬದಲಾಗಿ, ನನ್ನ ಕಥಾನಕದ ಅನು ಕೂಲಕ್ಕೆಂದು ನಾನು ಬರೆದಿರುವೆನೆಂದು ಹಾಗೆ ಅವಳು ಹೋಗಬೇಕಾಗಿಲ್ಲ. ಅವರೀರ್ವರ ಪ್ರಥಮ ಸಮಾಗಮದ ಸುಖದ ಸ್ಮೃತಿಯಿಂದ ಕಂಪಿತವಾಗುವ ಅವಳ ದೇಹಮನಗಳೆರಡೂ ಅವನು ಕೈ ಕುಲುಕಿದೊಡನೆಯೇ ಆ ಲಯದಲ್ಲಿ ಹೆಜ್ಜೆಯಿಡಹಚ್ಚುವವು. ಮತ್ತೆ ತಾನು (ಗಿರಡಿ) ಎತ್ತುವ ಗಾಯಕನ ಸಮ ಸ್ಥಾನವದು, ಆ ಈರ್ವರ ಜೀವನ ಸ್ವರಗಳ ವಿವಿಧ ಸಂಯೋಗವೇ ನಾಟಕ ದಲ್ಲಿಯ ಸಂಗೀತ, ಬಂತೇ ಲಕ್ಷ್ಯದಲ್ಲಿ. ಇದು ನೋಡು. ನೋಡನೋಡುತ್ತ ತಾತ್ಸಾರವೇ, ಅನಾದರವೇ, ಸ್ಥಿತ್ಯಂತರವೆಲ್ಲಿ; ಕಾಲಗಣನೆಯೇಕೆ ? ಅದೇ ನಾನು ಅದೇ ನೀನು, ಈ ಶಬ್ದಗಳನ್ನು ನುಡಿದಾಗ ಅವಳ ತರಲವಾದ ಮನಃ ಪಟಲದ ಮೇಲೆ ಸುಖಾನುಭವಸ್ಮೃತಿಯು ತರಂಗಗಳನ್ನೆಬ್ಬಿಸುವದು. ಅದರ ಗತಿಯೇ ಅವಳನ್ನು ಅವನ ಕೂಡ ಒಯ್ಯುವದು. ಆ ತರಂಗಗಳನ್ನು ಮನದಲ್ಲಿ ಹೊರಡಿಸಬೇಕು. ಅದೊಂದು ಅವಳಿಗೊದಗಿದ ಸಂಗತಿ. ಅಂಥದೇ ಯಾವದಾದರೂ ಒಂದು ಪ್ರಸಂಗವನ್ನು ನೆನಪಿಗೆ ತಂದುಕೋ ಆಗ. ಅಂದರೆ ಹೆಚ್ಚು ಸಹಾಯವಾಗುವದು ?' ಏನು ಮಾಡಿದರೂ ಊಂಹುಂ ಅಂಗ ಭಂಗಿಗಳ ವಿಧಾನವು ಪರಿಪೂರ್ಣವಾದರೂ ಕೋಪದ ಚಿನ್ಹಗಳು ಮುಖದ ಮೇಲಿಂದ ಬೇಗನೆ ಅಳಿಸಲೊಲ್ಲವು. ಪ್ರವೇಶ ಮುಗಿಯುವ ಹೊತ್ತಿಗೆಂದರೆ ಮತ್ತೂ ವಿಮನಸ್ಕಳೇ, ಮೊದಲಗಿತ್ತಿಯು ಅತ್ತೆಯ ಮನೆಗೆ ಹೊರಡುವಂತೆ.

ವೆಂಕಟರಾಯರಿಗೂ ಗೂಢಬಿತ್ತು. ಇದನ್ನು ಸುಧಾರಿಸಬೇಕಾದರೂ ಹೇಗೆ ಎಂದು ವಿಚಾರಮಾಡಿದರು. ' ಆಗದೆ ಇದ್ದದ್ದನ್ನು ಅವಳಿಲ್ಲಿಂದ ನೆನಪುಮಾಡಿಕೊಳ್ಳಬೇಕು ' She is not yet a woman. That's why she fails ಅವಳಿನ್ನೂ ಸ್ತ್ರೀಯಲ್ಲ ಎಂದೇ ಅವಳು ತಪ್ಪುವಳು ' ಎಂದು ನಿರ್ಧರಿಸಿದರು. ' ಕಾಮನ ಬಿಲ್ಲು ಮೂಡಬೇಕಾದರೆ ಮೇಘದ ವಿಶಿಷ್ಟ ತರಲತೆಯೂ ಬೇಕು. ರವಿಕಿರಣಸ್ಪರ್ಶವೂ ಬೇಕು. ನಾಟಕವು ಯಶಸ್ವಿಯಾಗಬೇಕಾದರೆ, ಅವಳ ಕಲೆಯು ಉತ್ಕರ್ಷವಾಗಬೇಕಾದರೆ ಅದಾಗಬೇಕು.'

ಮರುದಿನ ಮೋಹಿನಿಯ ಮನೆಗೆ ಹೋದರು. ಆ ಮಾತು ಈ ಮಾತಾಡುತ್ತ ಕೈಯ್ಯಲ್ಲಿ ತಕ್ಕೊಂಡ ನಾಟಕದ ಕಡೆಗೆ ಹೊರಳಿತು ಮಾತಿನ ಓಘ. ವೆಂಕಟರಾಯರು ನಾಯಕಿಯ ಪಾತ್ರ ವಿವೇಚಿಸತೊಡಗಿದರು. ' ಸಮಾಜದಲ್ಲಿ ಸಹಾನುಭೂತಿಶೂನ್ಯವಾದ ರುಕ್ಷ ಆಯುಷ್ಯವನ್ನೆಳೆಯುತಿದ್ದ ವಿಧವೆ. ನಾಯಕನು ನಿರುದ್ಯೋಗಿ, ಉಪದ್ವ್ಯಾಪಿಯೆಂದು ತಿರಸ್ಕೃತನಾದ ದೇಶಭಕ್ತ ಅವರ ಮನಃಸಂಗಮಗಳಿಗೆ ಕಾರಣವಾದ ಪರಿಸ್ಥಿತಿಯೊಂದೇ. ಇಬ್ಬರೂ ಶಾಂತಿ ಸಮಾಧಾನ ಹೊಂದುವದು ಪರಸ್ಪರರಲ್ಲಿಯೇ. ಉಳಿದೆಲ್ಲ ಕಡೆಗೆ ನಿಂದೆಯ ತಪ್ತವಾಲುಕಾ ಪ್ರದೇಶ. ಇನ್ನೂ ಅರಳಲಿರುವಾಗಲೇ ಅರ್ಧ ಮುರಿದು ನೇತಾಡುತ್ತಿರುವ ಗೊನೆಯಲ್ಲಿಯ ನೀರಸವಾದ ಮೊಗ್ಗೆ. ಮುಂಜಾವಿನ ಮಂಜಿನ ಹನಿಗಳ ಶೀತಲ ಸೇಚನದಿಂದ ಗಾಯದ ನೋವು ಕಡಿಮೆಯೆನಿಸಿತು. ಕೆಲಹೊತ್ತಿನ ಮೇಲೆ ಪ್ರಖರವಾದ ಬಿಸಿಲಿನ ತಾಪ ಹೆಚ್ಚಿತು. ಮಂಜು ಇಲ್ಲದಂತಾದುದೇಕೇ ? ಪುನಃ ಬಂದು ತುಸು ಚೇತರಿಸಿಕೊಳ್ಳಲು ಅನುವಾಗಬಹುದೇ ಎಂಬ ಚಿಂತೆ. ಕೆಲಮಟ್ಟಿಗಾದರೂ ಪುನಃ ಆ ಉತ್ಸಾಹದ ಭರವನ್ನು ತಂದುಕೊಡುವದೆಂಬ ವಿಶ್ವಾಸ, ಹಾರೈಕೆ ನೆಲೆಸುವಷ್ಟರಲ್ಲಿಯೇ ಹೊರಟು ಹೋಗಿ ಪ್ರಹರಗಳವರೆಗೂ ಹೇಳಹೆಸರಿಲ್ಲದೆ, ಸುದ್ದಿ ಸುಳಿವಿಲ್ಲದೆ ಮಾಯವಾದದ್ದಕ್ಕೆ ಅವಿಶ್ವಾಸ, ಕೋಪ. ಅದರ ಚಿಹ್ನವೇನೋ ಎಂಬಂತೆ, ದಲದ ಕೊನೆಯಲ್ಲಿ ಬಾಡಿಕೆಯ ಕೆಂಪು. ಮೊಗ್ಗೆಯು ಕೆಳಗೆ ಮೋರೆ ಹಾಕಿದೆ, ನೆಲೆಸಲುಬಂದ ಮಂಜಿಗೆ ಮೊಗ್ಗೆಯು ತನ್ನನ್ನು ಪ್ರಯತ್ನಪೂರ್ವಕ ತಪ್ಪಿಸುತ್ತದೆಂದೆನಿಸಿತು. ಸುತ್ತಲು ಸುಳಿದಾಡಿ, ರಮಿಸಿ ಕೊನೆಗೊಮ್ಮೆ ವಿರಹತರಲ

ವಾದ ಮಂಜಿನ ಹೃತ್ಕಣಗಳ ಸ್ಪರ್ಶವು ದಲಕ್ಕಾಯಿತು. ಆದರಿಂದ ಕೋಪ, ಅವಿಶ್ವಾಸಗಳೆಲ್ಲ ಹಾರಿಹೋಗಿ ಮೊಗ್ಗೆಯು ಪುನಃ ನಗಹತ್ತಿತು. 'ಈ ರೂಪಕವನ್ನು ಅನುಸರಿಸು. ಆ ಮೊಗ್ಗೆಯ ಭಾವವನ್ನು ತಾಳು. ಇದು ನೋಡು. 'ಆಕರುಣ, ಬಿಡು ನನ್ನ ಸೆರಗು' ಎಂದು ನೀನು ಹೊರಟಿರುವಿ' ಪ್ರವೇಶದ ಕಚ್ಚಾ ತಾಲೀಮು ಅಲ್ಲೇ ಸುರುವಾಯಿತು.

× × × ×

ಸೆರಗು ಹಿಡಿದು ನಿಲ್ಲಿಸಿ ನಾಯಕನ ಮಾತಿನ ಮೊದಲಿನ 'ಇತ್ತ ನೋಡು, ನನ್ನ ಕಡೆಗೊಮ್ಮೆ ದಿಟ್ಟಿಸಿ ನೋಡು.' ಎಂಬ ಶಬ್ದಗಳನ್ನು ಲಕ್ಷ್ಯವೇಧಕ ಆಘಾತದಿಂದ ಉಚ್ಚರಿಸಿದರು. ರಂಗಸ್ಥಲದ ಆವೇಶವು ಇವಳಲ್ಲೂ ತುಂಬಿತು. 'ನಾನು ನಿರ್ದಯನೇ ಮೋಸಗಾರನೇ' ಎಂಬುದನ್ನು ಅನುನಯಯುಕ್ತ ಆತ್ಮವಿಶ್ವಾಸದ ದನಿಯಿಂದ ಅಂದರು. ಮುಂದಿನ ಮಾತುಗಳನ್ನಾಡುವಾಗ ಅವರ ಕಣ್ಣುಗಳಲ್ಲಿಯೇ ಇವಳ ದೃಷ್ಟಿ. ಆ ಕಣ್ಣುಗಳಲ್ಲಿ ಒಂದು ಮೋಹಕ ತೇಜವನ್ನು ಕಂಡಳು. ಮೆಲ್ಲಮೆಲ್ಲನೆ ಆಯಾ ಸ್ಥಳದಲ್ಲಿ ವಿರಾಮ ಕೊಡುತ್ತ ಭಾಷಣ ಮುಗಿಸಿ ಕೊನೆಯ 'ಆಸರಕ್ಕಾಗಿ ಕೈ ನೀಡುತಿದೆ' ಎಂದು ಅವರು ಕೈ ಮುಂದೆ ಮಾಡಿದಾಗ ತನ್ನ ಎರಡೂ ಕೈಗಳನ್ನು ಮೋಹಿನಿಯು ನೀಡಿದಳು. ಹತ್ತಿರ ಬಂದು ಎದೆಯ ಮೇಲೆ ತಲೆಯನ್ನಿಟ್ಟಳು. ಆ ಇಡೋಣದಲ್ಲಿ ಒಂದು ಬಗೆಯ ವೈಮರವು ಕಾಣಬಂತು. ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತ ನಿಷ್ಕ್ರಮಿಸಿದರು. ವೆಂಕಟರಾಯರಲ್ಲಿನ್ನೂ ಆ ಭಾವಮಾನಸಿಕ ಸಂವೇಗ (Psychological continuity) ವಿತ್ತು. ಆದರೆ ಮೋಹಿನಿಯು ಮಾತ್ರ ರೂಢಿಯಂತೆ ವಿಂಗ್ಸಿನ (wings) ಗೆರೆ ದಾಟಿದ ಕೂಡಲೇ ನಟಿಯಾದ ಮೋಹಿನಿಯಾದಳು. ವೇಷಮಂದಿರದ (green-room) ವಾತಾವರಣ ಛಾಯೆಯನ್ನು ಅವಳ ಮನವು ಧರಿಸಿತು. ವೆಂಕಟರಾಯರ ಮನವನ್ನು ಮಾತ್ರ ಪ್ರತ್ಯಕ್ಷವಾಗಿದ್ದ ಕತ್ತಲೆಕೋಣೆಯ ವಾತಾವರಣವು ಆವರಿಸಿತು. ಬಲಗೈಯಿಂದವಳ ಗದ್ದವನ್ನು ಮೇಲಕ್ಕೆತ್ತಿ ಚುಂಬಿಸಿದರು. ಮೋಹಿನಿಯು ಒಮ್ಮೆಲೆ ದೂರ ಸರಿದು 'ಇದೇನಿದು? ವೆಂಕಟರಾವ್?' ಎಂದು ತೀವ್ರಸ್ವರದಿಂದ ಕೇಳಿದಳು. ವೆಂಕಟರಾಯರ 'ಛೇ! ಕ್ಲೋರೋ ಫಾರ್ಮ್' ಬಹಳ ಬೇಗನೆ ಇಳಿಯಿತು. ಉಪಾಯವಿಲ್ಲ.

ನಾನು ನಿನ್ನನ್ನು ಬಯಸಿದ ಕಾಮುಕನಲ್ಲ, ಚಿಕಿತ್ಸಕನು. ನಟಿಯಾದ ನಿನ್ನ ಮನೋವೃತ್ತಿಯ ಅಂತರರಚನೆಯು ಪೂರ್ಣವಾಗಬೇಕೆಂದು ಉಪಾಯವನ್ನು ಯೋಜಿಸಿದ ಶಸ್ತ್ರವೈದ್ಯ. ನಿನ್ನ ಮನೋರಚನೆಗೆ ಸಂಸ್ಕಾರಗಳಿಗನುಸರಿಸಿ ನಿನ್ನ ಆದರ-ವಿಶ್ವಾಸಗಳಿಗೆ ಪಾತ್ರನಾದರೆ ನಾನೇ ಎಂದೆಣಿಸಿದ್ದೆ. ಮಾನಸಶಾಸ್ತ್ರದಲ್ಲಿಯ ಒಂದು ಪ್ರಯೋಗವು ಅಯಶಸ್ವಿಯಾಯಿತು ನನ್ನ ವಿಧಾನ ತಪ್ಪಿತು. ನಿದಾನವು ಮಾತ್ರ ತಪ್ಪಿಲ್ಲ. ನಾರ್ಮಾ ಶೇರರ್, ಜೋನ್ ಕ್ರಾಫರ್ಡರಂತೆ ಉತ್ತಮ ನಟಿಯಾಗಬೇಕಾದರೆ ಅವಶ್ಯವಾಗಿ ನಿನಗೆ ಆ ಅನುಭವವು ಬೇಕು. ಆ ರೀತಿಯಿಂದ ನಿನ್ನ ಜೀವನದಲ್ಲಿ ಸೇರುವ ಪುರುಷನೊಬ್ಬನು ಬರಬಹುದು. ಆ ಮೇಲೆ ನಿನ್ನ ಕಲೆಯು ಪೂರ್ಣ ವಿಕಾಸವನ್ನು ಹೊಂದುವದು. ಆ ಕ್ಷಣಕ್ಕಾಗಿ ದಾರಿ ನೋಡುತ್ತಿರು, ಆ ಸಂಧಿಯನ್ನು ಕಳೆದುಕೊಳ್ಳಬೇಡ.' ಎಂದಿಷ್ಟೇ ಹೇಳಿ ಹೊರಟು ಹೋದರು.

'ದಾರಿ ನೋಡುತ್ತಿರು' ಎಂದು ಹೇಳುವಾಗ ವೆಂಕಟರಾಯರು ಒಂದನ್ನು ಮಾತ್ರ ಮರೆತಿದ್ದರು ಅಯಶಸ್ವಿಯಾದ ಪ್ರಯೋಗದ ಅಘಾತ ಪ್ರತ್ಯಾಘಾತಗಳು ಅವಳ ಮನದ ಮೇಲೆ ಮಾಡುವ ಪರಿಣಾಮವು ಅವರ ಲಕ್ಷ್ಯದಲ್ಲಿ ಬರಲಿಲ್ಲ. ಇಂಥ ಕ್ಷಣವು ಅಳಿಸಿಹೋಗಲಾರದು. ಅಂದಿನಿಂದವಳು ಬಾಹ್ಯವರ್ತನದಲ್ಲಿ, ಹುಡುಗರು ಮುಟ್ಟಿದ ಬೆಟ್ಟೀಬೆನಕದಂತಾದಳು. ಸ್ಪರ್ಶವಾದೊಡನೆಯೇ ಶಂಖದ ಮನೆಯಲ್ಲಿ ಸೇರಿಕೊಂಡ ಬಸವನ ಹುಳದಂತಾದಳು. ರಂಗಸ್ಥಲದ ಮೇಲೆ ರಸಪೋಷಕ ಭಾವಗಳು ವಿಶದವಾಗುವಂತೆ ಅವಳ ಅಭಿನಯವು ಭಾವಾನುಕೂಲವಾಗಿತ್ತು. ಬಾಹ್ಯ ಜಗತ್ತಿನಲ್ಲಿ ಅದೇ ಮೋಹಿನಿಯು ಅಷ್ಟೇ ಭಾವನಾತೀತಳಾದ ಶಿಲಾ ಮೂರ್ತಿಯಂತಿದ್ದಳು. ಶಿಲಾಶಿಲ್ಪಿಗನ ಆಯುಧಗಳು ನಡೆಯದಂಥದೀ ಶಿಲೆ. ಈ ಚಂದ್ರಕಾಂತವನ್ನು ಕರಗಿಸುವ ಚಂದ್ರನೇ ಬೇರೆ.

× × × ×

ಆ ಮಾತಿಗೀಗ ೩-೪ ವರ್ಷಗಳಾಗಿವೆ. ಕಂಪನಿಯ ಮುಕ್ಕಾಮು ಹಾಸನದಿಂದ ಮುಂದೆ ಹೋಗುವದಿತ್ತು. ಇಷ್ಟು ಹತ್ತಿರ ಬಂದು ತನ್ನ ಚೆನ್ನಿಗರಾಯನ ದರ್ಶನ ತೆಗೆದುಕೊಳ್ಳದೆ ಹೋಗಬಾರದೆಂದು ನಿಶ್ಚಯಿಸಿ ಮೋಹಿನಿಯು ಒಬ್ಬಳೇ ಬೇಲೂರಿಗೆ ಹೋದಳು. ದಾರಿಯ ದಣಿವನ್ನಾರಿಸಿಕೊಂಡು ಸಂಜೆಯ ಮುಂದೆ ಗುಡಿಗೆ ಹೋದಳು. ವಾಖಂಡಿಯಲ್ಲಾದರೂ

ಭಾವಿಕತನವನ್ನು ಹುಟ್ಟಿಸುವಂಥ ದೇವಾಲಯವದು. ಗೋಪುರದ ಮಹಾ ದ್ವಾರ ದಾಟಿ ಹೋದೊಡನೆಯೇ ವಿಸ್ತೀರ್ಣವಾದ ಪ್ರಾಂಗಣ, ಆಗಲವಾದ ೩೦-೪೦ ಸೋಪಾನಗಳನ್ನು ಏರಿ ಹೋಗಬೇಕು ಮಂದಿರಪ್ರವೇಶಕ್ಕೆ. ಸುಮಾರು ೧೮-೨೦ ಅಂಕಣಗಳು, ೪ ಫೂಟು ಚಚ್ಚೌಕು ಒಂದೊಂದು ಕಲ್ಲಿನ ಕಂಬ, ಆ ಮಾನದಿಂದ ಅಂಕಣದ ಉದ್ದಗಲ, ಆಮೇಲೆ ಗರ್ಭಗುಡಿ. ಮೋಹಿನಿಯು ಹೋದಾಗ ಸಂಜೆಯು ಕಕ್ಕಡಾರತಿಯಾಯಿತು. ದೇವರನ್ನು ಕಣ್ತುಂಬ ನೋಡಿ ಮನದಣಿದು ಕುಳಿತಳು. ಭಕ್ತರೆಲ್ಲರೂ ಒಬ್ಬೊಬ್ಬರಾಗಿ ಮನೆಗೆ ಹೋಗತೊಡಗಿದರು. ಮೋಹಿನಿಯು ಮಾತ್ರ ಎದ್ದು, ಸುತ್ತಲಿರುವ ಪೌಳಿಯ ಮೇಲ್ಮಾಳಿಗೆಯ ಮೇಲೆ ಹತ್ತಿ ಗುಡಿಯ ಹಿಮ್ಮಗ್ಗಲಿಗೆ ಬಂದು ನಿಂತಳು. ಚೆನ್ನಿಗರಾಯನ ಮುಗುಳುನಗೆಯ ಬೆಳದಿಂಗಳು. ಆ ಪ್ರಶಾಂತ ಸಮಯದಲ್ಲಿ ಒಂದೇ ಒಂದು ಜೀರುಂಡೆಯು ಕಿರ್ ಪರ್ ಎಂದು ದನಿಗೊಡುತ್ತಿತ್ತು. ಮೊದಲು ಕರ್ಕಶವೆನಿಸಿದರೂ ಅದರ ಪ್ರತಿಧ್ವನಿಯು ತುಂಬಿ ಇಂಪು ಆದರಲ್ಲಿ ಬಂದಿತ್ತು. ಅದರ ನಿನಾದದಲ್ಲಿಯೇ ಇವಳು ಗುಣುಗುಣಿಸಹತ್ತಿದಳು. ಮೆಲ್ಲಮೆಲ್ಲನೆ ಸ್ವರವು ಉಚ್ಚವಾಗಹತ್ತಿತು. ಕೊನೆಗೆ ಶಬ್ದಗಳು ಹೊರಟವು.

ನೋಡಲಿಲ್ಲವೋ ನಿನ್ನ, ಪಾಡಲಿಲ್ಲವೊ । ಮಹಿಮೆ ।
ಧಾರುಣಿಯೊಳು ಭೂಭಾರ ಜೀವ ನಾನಾಗಿ ।
ದಾರಿ ತಪ್ಪಿ ನಡೆದೆ, ಸೇರಿದೆ ಕುಜನರ । ಆರು ಕಾಯುವವರಿಲ್ಲ,
ಸಾರಿದೆ ನಿನಗಯ್ಯ ಪಾರಗಾಣಿಸೊ ಈಗ ॥

ಆ ಸಂಗೀತದ ಆಘಾತದಿಂದ ಸುತ್ತಲಿನ ಶಿಲ್ಪವು ಕಂಪಿತವಾಯಿತು. ಆದರ ತೆರೆಗಳು ತೇಲುತ್ತ ತೇಲುತ್ತ ಅನಂತದಲ್ಲಿ ಬೆರೆತವು.

× × × ×

ಹೊಳೆಯು ಎತ್ತೋ ಹೊರಳಿತು. ಈಗ ಸಿಕ್ಕರೆ ನೀರಡಿಸಿದವರಿಗೆ ಮುಕ್ಕು ನೀರು ಮಾತ್ರ.

ಗಂಗೆಯ ಗುತ್ತಿಗೆ

೧

‘ ಯಾಕ, ಏ ಗಂಡಬೀರಿ, ಸುಮ್ಮಗ ದಾರೀ ಹಿಡಿದು ಹೋಗಾಕ ವಲ್ಯಂತೈತೇನ ಜೀವ ? ’

‘ ನಾ ದಾರೀಹಿಡಿದಾರ ಹೋಕ್ಕೇನಿ. ಅಡ್ಡದಾರಿ ಅರೆ ಬೀಳತೇನಿ. ನಿನ ಗ್ಯಾಕದರ ಗೊಡವಿ ? ’

‘ ಹಾಳಭಾಂವೀ ಬೀಳು. ನನ್ನ ಹೆಸರು ಮಾತ್ರ ತಗದ್ಯಂದರ ನೋಡು.’

‘ ಅವ್ವ ! ತನ್ನ ಹೆಸರಂತ. ನಿನ್ನ ತೊಟ್ಲಾಗ ಹಾಕಿದಾಗ ನಿಮ್ಮ ಅಪ್ಪ ಅವ್ವಗೇನು ಗುತಿಗಿದ್ದಿದ್ದಿಲ್ಲ. ನನ್ನ ಕತ್ತಿಗೂ ನಾ ಭೈರೂ ಅಂತ ಹೆಸರಿಟ್ಟೇನಿ.’

ತನ್ನ ಹೆಸರು ತೆಗಿಯಬೇಡೆಂದು ಬೆದರಿಸಹೋದರೆ ಗಂಗೆಯು ನಾಲಿಗೆಯು ತಂದೆತಾಯಿಗಳನ್ನೂ ಎಳೆದದ್ದನ್ನು ಕಂಡು ಭೈರವನು ತೆಪ್ಪಗಾದನು. ಪಾಪ! ಹೆಣ್ಣು ಮಕ್ಕಳ ಸಂಗತಿ. ಮಾಡುವನೇನು! ಮತ್ತಾರಾದರೂ ಅವನನ್ನು ಈ ಪರಿ ತಡವಿದ್ದರೆ ಅವರ ಹಲ್ಲುಗಳೇನು ಬಾಯಲ್ಲಿ ಉಳಿಯುತ್ತಿದ್ದಿಲ್ಲ.

ಈ ಮೊದಲು ಗಂಗೆಯು ಅವನನ್ನು ಏನೆಂದು ಕೆಣಕಿದ್ದಳೋ ಭೈರವನೇ ಬಲ್ಲ. ‘ ಈ ಭೈರೂಗ ಡೌಲೆಷ್ಟು ನೋಡು. ತಾ ನೋಡಿದರ ಕತ್ತಿ, ಮಟ್ಟೇಹೊ ತಗೊಂಡು ಸುಮ್ಮಗ ದಾರೀ ನಡಿಲಾಸಲ್ಲ.’ ಎಂದು ನಮ್ಮ ತರ್ಕ-

ಅವನದೋ-ಇರಲಿ, ಅವನ ಅಂಚಿನ ಧೋತರ, ಚುಂಗುಬಿಟ್ಟು ಸುತ್ತಿದ ಜರದ ರುಮಾಲ, ಜಪಾನೀ ರಬ್ಬರಟ್ಟೆಯ ಬೂಟು ಇವೆಲ್ಲವುಗಳ ಮೇಲೆ ಈ ಹೊಡತ.

ಗಂಗೆಯು ನಿಜವಾಗಿಯೇ ಗಂಡುಬೀರಿಯಾಗಿದ್ದಳು. ಓಣಿಯಲ್ಲಿಯ ಓರಿಗೆಯ ಹೆಣ್ಣುಮಕ್ಕಳೊಡನೆ ಎಂದೂ ಆಡಿದ್ದವಳಲ್ಲ. ಅದಕ್ಕೆ ಕಾರಣವೂ ಇತ್ತು. ಗಂಗೆಯು ೩-೪ ವರ್ಷದವಳಿರುವಾಗಲೇ ಅವಳ ತಾಯಿ ತೀರಿಕೊಂಡಳು. ಒಂದೇ ಹುಡಿಗೆಯನ್ನು ಬಿಡಲಾರದೇ ಒಗೆಯಲಿಕ್ಕೆಂದು ಹೋದಾಗ ಫಕ್ಕೀರಪ್ಪನು (ಗಂಗೆಯ ತಂದೆ) ಹತ್ತೀಕೊಳ್ಳಕ್ಕೆ ತನ್ನ ಸಂಗಡಲೇ ಕರೆದೊಯ್ಯುತ್ತಿದ್ದನು. ಬರಬರುತ್ತ ಗಂಗೆಯು ಮನೆಗೆಲಸ, ಅರಿವೆ ಒಗೆಯುವದು, ಇಸ್ತ್ರೀ ಮಾಡುವದು ಇವೆಲ್ಲವುಗಳಲ್ಲಿ ತಂದೆಗೆ ನೆರವಾಗಹತ್ತಿದಳು. ಇತ್ತೀಚೆಗೆ ಫಕ್ಕೀರಪ್ಪನ ಶಕ್ತಿ ನಿಲ್ಲುತ್ತ ಬಂದದ್ದರಿಂದ ಒಗೆಯಲಿಕ್ಕೆ ಬಹುಶಃ ಗಂಗೆಯೇ ಹೋಗುವಳು. ತಂದೆಯು ಬೇಡೆಂದರೂ ಜುಲುಮೆಯಿಂದ ತನ್ನ ಒಡ್ಯಾಣವನ್ನು ಮಾರಿಸಿ ಒಂದು ಕತ್ತೆಯನ್ನು ಕೊಳ್ಳಹಚ್ಚಿದ್ದಳು. ಹೀಗಾಗಿ ತಂದೆ, ಮಗಳು ಹಾಗೂ ಕತ್ತೆ ಮೂವರೂ ಕೂಡಿ ಹೇಗೋ ನಿರ್ವಾಹವನ್ನು ಸಾಗಿಸಿದ್ದರು.

ಮೊದಮೊದಲು ಫಕ್ಕೀರಪ್ಪನ ಕೆಲಸವು ಚೆನ್ನಾಗಿ ಸಾಗಿತ್ತು. ಆದರೆ ಇತ್ತೀಚೆಗೆ ಬಿಳಿಛಾಯ ಮಬ್ಬಿಗೆ ಬಿದ್ದ ಜನರು ಹೆಚ್ಚುತ್ತಾ ಹೋದಂತೆ ವಾಸಿಂಗ ಕಂಪನಿಗಳು ಹೆಚ್ಚಾಗಿ ಮನೆಯಗಸರಿಗೆ ಬಿದ್ದ ಹೊಡತದಿಂದ ಅವನೂ ಹಣ್ಣಾಗಿದ್ದನು. ಈ ವಿವೇಚನೆಯನ್ನು ತಂದೆಯ ಬಾಯಿಂದ ಮೇಲೆ ಮೇಲೆ ಕೇಳುತ್ತಿದ್ದ ಗಂಗೆಗೆ ಕಂಪನಿಯವರೆಂದರೆ ಸಿಟ್ಟುಬೆಂಕಿ.

ಭೈರವನೂ ಅವನಣ್ಣನೂ ಕೂಡಿ 'ಜುಬಿಲೀ ವಾಸಿಂಗ ಕಂಪನಿ'ಯನ್ನಿಟ್ಟಿದ್ದರು. ಅಣ್ಣನು ಇಗ್ಲೀಷ ಶಾಲೆಯ ಮೆಟ್ಟಲುಗಳನ್ನು, ಸವೆಸುವಷ್ಟಲ್ಲದಿದ್ದರೂ, ಕೆಲದಿನ ಮೆಟ್ಟಿಬಂದದ್ದರಿಂದ ಅಂಗಡಿಯಲ್ಲಿ ಕುರ್ಚಿಯ ಮೇಲೆ ಕುಳಿತು ಅಲ್ಲಿಯ ಕೆಲಸ ನೋಡಿಕೊಳ್ಳುತ್ತಿದ್ದನು. ಕತ್ತೆ ಮೊಟ್ಟೆಗಳ ಕೂಡ ಗುದ್ದಾಡುವದು ಭೈರವನ ಪಾಲಿಗೆ ಬಂದಿತ್ತು.

ಭೈರವನನ್ನು ಪರಿಪರಿಯಿಂದ ಕಾಡಿ ಗಂಗೆಯು ತನ್ನ ಸಿಟ್ಟನ್ನು ತೀರಿಸಿಕೊಳ್ಳುತ್ತಿದ್ದಳು. ಒಣಹಾಕುವ ಹಗ್ಗದ ಕತ್ತರಿಗೋಲುಗಳನ್ನು

ಮೆಲ್ಲಗೆ ಸರಿಸಿ ಅವನ ಅರಿವೆಗಳು ಮಣ್ಣಾಗುವಂತೆ ಮಾಡುವದು, ಅವನು ಒಣಹಾಕಹೋದಾಗ ಒಂದೆರಡು ಅರಿವೆಗಳನ್ನು ಕಲ್ಲುಕಟ್ಟಿ ಬಾವಿಯಲ್ಲಿ ಮುಣುಗಿಸುವದು, ಇವೇ ಮೊದಲಾದವುಗಳು ಅವಳ ನಿಯಮಿತ ಚೇಷ್ಟೆಗಳಾಗಿದ್ದವು. ಭೈರವನು ಮಾತ್ರ ತಾನೇ ಸರಿಯಾಗಿ ನಿಲ್ಲಿಸಿರಲಿಕ್ಕಿಲ್ಲವೆಂದಂದುಕೊಂಡು ಮಣ್ಣಾದ ಅರಿವೆಗಳನ್ನು ತಂದು ಮತ್ತೆ ಹಿಂಡಿಹಾಕುವನು. ಕಳೆದ ಅರಿವೆಗಾಗಿ ಸನಿಯದರಲ್ಲಿಯೇ ಕಂಪನಿಯ ದಿವಾಳಿ ತೆಗೆಯಿಸುವವನೆಂದು ಅನ್ನಿಸಿಕೊಳ್ಳುವದಂತೂ ವಾರದಲ್ಲಿ ಒಂದೆರಡು ಬಾರಿ ಇದ್ದದ್ದೇ. ಒಂದುದಿನ ಸಹಜವಾಗಿ ಗಂಗೆಯ ಮುಂದೆ ಈ ಮಾತು ತೆಗೆದನು.

'ಗಂಗೀ, ತಂದ ಅರಿವಿ ತಿರುಗಿ ಮನೀಗ ಒಯ್ಯುದರಾಗ ಒಂದೆಡ್ಡು ಕಮ್ಮ ಆಕ್ಕಾವ ನೋಡು. ಎಲ್ಲಿ ಹೋಕ್ಕಾವೋ ಯಾರು ಒಯ್ತಾರೋ ಶಿವನ ಬಲ್ಲ. ನೋಡಿದರ ಇಬ್ಬರೂ ಇಲ್ಲೇ ಇರತೇವಿ'

'ಕೊಳ್ಳದ ದೆವ್ವ ಒಯ್ದಿದ್ದೀತು!' ಎಂದು ಕಿಡಗೇಡಿ ನಗೆಯಿಂದ ಗಂಗೆಯು ನುಡಿದಳು.

ಭೈರವನ ಮನದಲ್ಲಿ ನಿಜ ಸಂಗತಿಯ ಸುಳಿವು ಕೂಡ ಹತ್ತಲಿಲ್ಲ. ಮರುಮಾತಿನ ಈ ಸಂಧಿಯನ್ನು ಹಾಗೆಯೇ ಬಿಡಬಾರದೆಂದು ಅವನಂದನು:

'ಎದುರಿಗೆ ನಿಂತೈತಿ ಅದ ದೆವ್ವ ಹೌದಲ್ಲೊ!'

ನುಡಿದದ್ದೊಂದೇ ತಡ. ಗಂಗೆಯು ಒಸಕ್ಕನೇ ಮೈಮೇಲೆ ಬಂದು ಅಂದಳು:

'ಯಾಕಲಾ ಕುಂಪಣಿ ಅಂಗಡೀ ಇಟ್ಟು ಸಾವಕಾರಾದ್ರ ನಿನ್ನಷ್ಟಕ್ಕ ನೀ ಆದೀ. ಬಡವರ ವ್ಯಾಗ ಬಲ್ಲಬಲ್ಲ ಹಾಂಗ ಕಳವು ತುಡುಗು ಹೊರಸತೀ? ಅಪ್ಪನ ಮುಂದ ಹೇಳಿದ್ನೆಂದ್ರ ನೋಡೀಗ ಚಾವಡ್ಯಾಗ ಒಯ್ದು ಕುಂಡರಸ್ಯಾನು'

ಈ ಬೆದರಿಕೆಗೆ ಬೆದರಿದನೋ ಏನೋ ಅಂತೂ ಭೈರವನು ಸುಮ್ಮನಾದನು.

೨

ಸುಮಾರು ತಾಸು ರಾತ್ರಿಯಾಗಿರಬಹುದು. ಗಂಗೆಯು ದಣುವಾರಿಸಿಕೊಂಡು ಅದೇ ಅಡಿಗೆಮಾಡತೊಡಗಿದ್ದಳು. ಫಕೀರಪ್ಪನು ಇಸ್ತ್ರಿಯ ಬೆಂಕಿಗೆ

ಗಾಳೀಹಾಕಿ ಪುಟಕೊಡುತ್ತಿದ್ದನು. ಇಷ್ಟರಲ್ಲಿ ಭೈರವನು ಅವನ ಸಮಾಚಾರಕ್ಕಾಗಿ ಬಂದನು.

'ಇಷ್ಟು ವೈಯಾಗ ಶೀಕಿದ್ದು ಈಗ್ಯಾಕ ಮತ್ತ ಇಸ್ತ್ರೀ ಮಾಡಾಕ ಹಿಡಿದೀ? ಯಾಡು ದಿನ ಬಿಟ್ಟು ನೆಟ್ಟಗಾದ ಮ್ಯಾಗ ಮಾಡಿದರಾಗದ?' ಎಂದು ಭೈರವನೆಂದನು.

'ಭೈರ್ಯಾ, ಮದ್ಲ ನಮಗ ಮಂದಿ ಅರವಿಕೊಡಾಕ ವಲ್ಲದು ಅದರಾಗ ೧೫ ದಿನಗಟ್ಲೆ ಇಟಗೊಂಡು ಕುಂತ್ರ ಹ್ಯಾಂಗ ಹೇಳು. ನಿಮ್ಮಂಗಡೀಗೆ ಹ್ಯಾಂಗೈತೀಗ ಕೆಲಸ?'

'ಕೆಲಸೇನ ಕೇಳತಿ. ಗಡಗಡ ಇಸ್ತ್ರೀಮಾಡಿ ಬಂಡಲ್‌ಕಟ್ಟಿ ಕೊಡಾಣಾಗವಲ್ಲದು ಅಣ್ಣನ ಕಡಿಂದ. ಅದಕ ಇನ್ನೊಬ್ಬರನ್ಯಾರನರ ನೋಡಬೇಕೆಂತಿದ್ದ. ನೋಡು ನೀನ ಮಾಡತಿದ್ರ. ನಿಂದೂ ಸಗತಿ ನಿಂತ್ಯು. ಮದ್ಲಿನ್ಹಾಂಗ ದುಡಿತದ ಕೆಲಸ ಆಗಾಣಿಲ್ಲ. ಅಲ್ಲೇ ಅಂಗಡ್ಯಾಗ ಕುಂತು ಇಸ್ತ್ರೀ ಮಾಡತಿದ್ರ ರೂಪಾಯಿಕ್ಕಿಷ್ಟಂತ ಬೇಕಾರ ಮಾಡು. ಇಲ್ಲಾ ಸಂಬಳ ಬಗೀಹರದರ ಹಾಂಗಮಾಡು, ಒಣಾ ನಿಗ್ಗರ ಇಲ್ಲ.'

ಈ ಮಾತು ಕೇಳಿ ಗಂಗೆಯು ಸುಮ್ಮನಿರುವವಳೇ!

'ಅಪ್ಪ! ಇಷ್ಟು ಬಾಗ್ಗೇವು ಬಂತೇನೋ ನಿನಗ? ಅಪ್ಪಾ. ಏನ ಬ್ಯಾಡ. ಇವರಲ್ಲಿ ದುಡ್ಯಾಕ ಇರಬ್ಯಾಡ. ಅಷ್ಟು ಕೆಲಸಾ ಆದ್ರ ನಾ ಮಾಡತೇನಿ. ನಿನಗ್ಯಾಕದರ ಚಿಂತೆ' ಎಂದಂದಳು.

ಫಕೀರಪ್ಪನು ಮಗಳ ಕಡೆಗೊಮ್ಮೆ ಪ್ರೀತಿಪೂರಿತ ಅಭಿಮಾನದ ದೃಷ್ಟಿಯಿಂದ ನೋಡಿದನು. ಮತ್ತೆ ಮರುಕ್ಷಣವೇ 'ನಿನ್ನೆಷ್ಟದಿನ ಇನ್ನ ಮನ್ಯಾಗಿಟಗೊಂಡಿರಲಿ?' ಎಂದನು. ಗಂಗೆಗೆ ಅವನ ಈ ಮಾತಿನ ಅರ್ಥವು ಹೊಳೆಯಲಿಲ್ಲ. 'ನಾಯಲ್ಯು ನಿನ್ನ ಬಿಟ್ಟು ಹೋಗುವದಿಲ್ಲ' ಎಂದು ಆಶ್ವಾಸನ ಕೊಟ್ಟಳು. 'ಆನ್ಮಾಗೈತೋ ಇಲ್ಲೋ ನೋಡ್ಸೋಗೊಳಗ' ಎಂದು ಫಕೀರಪ್ಪನು ಕಳಿಸಿಕೊಟ್ಟನು. ಇನ್ನೆರಡು ದಿನದ ಮೇಲೆ ಏನೆಂಬದೂ ಹೇಳುವೆನೆಂದು ಭೈರವನಿಗೆ ಹೇಳಿದನು.

ಭೈರವನ ಅಂದಿನ ಮಾತು ಕೇಳಿ ಗಂಗೆಯು ಗಾಯದಲ್ಲಿ ಕಾರ ಕಲಿಸಿದಂತಾಯಿತು. ಅಡಿಗೆ ಮಾಡುವಾಗ ಅತ್ತ ಅವಳ ಲಕ್ಷನೇ ಇರಲಿಲ್ಲ.

ಭೈರವನ ಸೊಕ್ಕು ಮುರಿಯುವ ವಿಚಾರಮಾಡತೊಡಗಿದಳು. ಕೊನೆಗೊಂದು ಹಾದಿಯನ್ನು ಕಂಡಳು. ತಾನೂ ಒಂದು ಕಂಪನಿ ತೆಗೆಯಬೇಕೆಂದು ಊಟಕ್ಕೆ ಕುಳಿತಾಗ ತಂದೆಯ ಮುಂದೆ ಈ ಮಾತೆತ್ತಿದಳು. ಆಗದೆಂದು ಮೊದಲು ಫಕೀರಪ್ಪನು ಕಿವಿಗೊಡಲಿಲ್ಲ. ಹೆಚ್ಚು ಆಗ್ರಹ ತೊಡಲು ದುಡ್ಡಿನ ಅಡಚಣೆಯನ್ನು ಮುಂದೆ ಮಾಡಿದನು. 'ಅಂಗಡೀ ಭಾಡಿಗ್ಗೇ ೧೦೦ ರೂಪಾಯಿ, ಮೇಜು-ಕಪಾಟಗೆ ೧೯೦ ರೂಪಾಯಿ ಬೇಕು. ಅದನ್ಯಾರು ಕೊಡೋರು?'

'ಸಾಲಾ ತಗೀಬೇಕು. ಸಾಲಕೇನ ಸೂಲ. ಅರಿವಿಗೊಂದು ಬಿಲ್ಲೀ ಹಾಂಗ ಹೆಚ್ಚಿಗಿ ಶಿಗತೈತಿ. ಮುಂದ ಮುಟ್ಟಸಬೇಕು' ಎಂದಳು.

ಇಷ್ಟಾದರೂ ತನ್ನ ಕಲ್ಪನೆಗೆ ಯಶ ಬಂತೆಂದು ಗಂಗೆಗೆ ಸಮಾಧಾನ. ಬಂದ ಕಠಿಣ ಕಾಲಕ್ಕೆ ಬಾಗಿ ಬಿದ್ದುಹೋಗುವದಕ್ಕಿಂತಲೂ ಕೊನೆಗೊಮ್ಮೆ ತಲೆಯೆತ್ತಿ ಯತ್ನಮಾಡಿ ನೋಡೋಣವೆಂದು ಫಕೀರಪ್ಪನೂ ಅಂದುಕೊಂಡನು.

ಕಂಪನಿ ತೆಗೆಯುವದಂತೂ ನಿಶ್ಚಿತವಾಯಿತು. ಸಾಲವನ್ನು ದೇಶಪಾಂಡೆಯರಲ್ಲಿ ಕೇಳಬೇಕೆಂದು ಗಂಗೆಯು ಸೂಚಿಸಿದಳು. ಬಹುದಿನದ ಬಳಿಕೆ ೨೦ ವರ್ಷ ಫಕೀರಪ್ಪನು ಅವರ ಅರಿವೆ ಒಗೆದಿದ್ದನು. ಬಾಯಿ ತೆಗೆದರೆ ಕೊಡಬಹುದೆಂಬ ಭರವಸೆಯೂ ಇತ್ತು. ಮರುದಿನ ಅರಿವೆ ಕೊಡಲು ಹೋದಾಗ ಕೇಳುವೆನೆಂದು ಫಕೀರಪ್ಪನು ಹೇಳಿದನು.

ಮಾರನೆಯ ದಿನ ಮುಂಜಾನೆ ಲಗುಬಗೆಯಿಂದೆದ್ದು ಗಂಗೆಯು 'ಧಣೇರ' ಅರಿವೆಗಳನ್ನು ಆರಿಸಿ ಇಸ್ತ್ರೀ ಮಾಡಿಕೊಟ್ಟಳು. ಫಕೀರಪ್ಪನೂ ಒಂದು ಬಗೆಯ ಉತ್ಸಾಹದಿಂದ ಅವರ ಮನೆಯ ಕಡೆಗೆ ಸಾಗಿದನು. ಆದರೆ ತಾನೊಂದು ಬಗೆದರೆ ದೈವವೊಂದು ಬಗೆದಿತ್ತು. ಅರಿವೆಗಳನ್ನು ಕೊಟ್ಟು ಮಾಸಿದ ಅರಿವೆಗಳನ್ನು ಕೇಳಿದನು. ೨ ದಿನದ ಹಿಂದೆಯೇ ಧಣೇರ ಅರಿವೆಗಳು ಜುಬಿಲೀಕಂಪನಿಗೆ ಹೋಗಿದ್ದವು. ಧಣೇರು ಫಕೀರಪ್ಪನ ಮನ ನೋಯಿಸಬಾರದೆಂದು ನುಡಿದರು:

'ಇಲ್ಲೆ ನೋಡು, ಫಕೀರಪ್ಪಾ, ಮೊನ್ನೆ ಆ ಜುಬಿಲೀಕಂಪನಿ ಮ್ಯಾನೇಜರ ಬಂದಿದ್ದಾ ನಮ್ಮ ಹತ್ತೀಕೊಳ್ಳದಾಗಿನ ಭಾಂವೀ ಗುತಿಗೀ ಕೇಳ್ಳಿಕ್ಕೆ.

ನಮಗೇನು ನಿಮ್ಮ ಗಂಜಿ ನಡೀತದ. ಆದರ ಈಗಿನ ಹುಡುಗರದೇನ ಕೇಳತೀ, ೭-೭ ದಿನಕ್ಕೊಮ್ಮೆ ಕಡಕ ಇಸ್ತ್ರೀವು ಬೇಕವರಿಗೆ. ಆದಕ ಕೈಯೆತ್ತಿ ಕೊಡೋ ಆ ರೊಕ್ಕರ ಉಳೀಲೆಂತ್ಹೇಳ ನಮ್ಮವೆಲ್ಲಾ ಅರಿವೇ ಒಗೆದು ವ್ಯಾಲೆ ೨೫ ರೂಪಾಯಿ ಕೊಡತೇನೆಂದಾ ಕೊಟ್ಟಬಿಟ್ಟೆ ಈ ಉಗಾದಿಂದ. ನಿನ್ನ ಆಯಾ ಮಾತ್ರ ಒಯಿ ಹಾಂ. ಆದನ್ನೇನು ತಪ್ಪದಿಲ್ಲ.'

ಈ ಮಾತಾದ ಬಳಿಕ ಸಾಲ ಕೇಳಲು ಫಕ್ಕೀರಪ್ಪನ ನಾಲಿಗೆಯೇಳ ಲಿಲ್ಲ. ಬರಿಗೈಯಿಂದ ಮನೆಗೆ ಬಂದು ಮಗಳ ಮುಂದೆ ನಡೆದ ಸಂಗತಿಯನ್ನು ಹೇಳಿದನು. ಗಂಗೆಯು ವಿಷಣ್ಣಳಾಗಿ 'ಭೈರೂನ ಕಂಪನಿಗೆ ಗುತಿಗಿ ಉಗಾದಿಂದ' ಎಂದು ತನ್ನಷ್ಟಕ್ಕೆ ತಾನೇ ಅಂದುಕೊಂಡಳು.

೩

ಧಾರವಾಡ ಗುಡ್ಸ್‌ಶೆಡ್ಡಿನ ದಾರಿಯಲ್ಲಿ ಗೇಟುದಾಟಿ ತುಸು ಮುಂದೆ ಹೋಗಲು ಎಡಬದಿಗಿರುವ ಕೊಳ್ಳವೇ ಹತ್ತೀಕೊಳ್ಳ. ಸುತ್ತಲೂ ಸಣ್ಣ ಸಣ್ಣ ದಿನ್ನೆಗಳ ಸಾಲು. ಒಂದು ಬದಿಗೆ ಕಂಡು ಮತ್ತೆ ಗುಡ್ಡದಲ್ಲಿ ಸೇರಿದ ಹೊಗೆಬಂಡಿಯ ಮಾರ್ಗ. ಕೊಳ್ಳದ ಕಾವಲುಗಾರನಿಗಾಗಿ ಹೊಸ ದಾಗಿ ಕಟ್ಟಿಸಿದ ಮಂಚಿಗೆ (ಸಿಗ್ನಲ್‌ಕೇಬಿನ್). ಕೊಳ್ಳದ ನಟ್ಟನಡುವೆ ಬೈತಲು ತೆಗೆದಂತೆ ಒಂದು ಕೊರಕಲು. ಆದರ ಎರಡು ಬದಿಯಲ್ಲಿಯೂ ಸಣ್ಣ ಕಂಟಿಗಳು. ಕೆಳಗೆ ತೆಗ್ಗಿನಲ್ಲಿ ಒಂದು ಬದಿಗೆ ರೇಲ್ವೆಬಾವಿಯ ಪಂಪಿನ ಶೆಡ್ಡು. ಹುಡುಗರಾಗಿರಬೇಕು. ಅಂದರೇ ಹತ್ತೀಕೊಳ್ಳದ ಸವಿ ತಿಳಿಯುವದು. ಅಕೋ ನಂದನವನವನ್ನು ಸೇರುವ ಆನಂದದಿಂದ ಮಾಳ ಮಡ್ಡಿಯ ಹುಡುಗರದೊಂದು ಕವಳೀಹಣ್ಣಿನ ಪಾರ್ಟೀ ಬರುತ್ತಿದೆ. ಕೊರಕಲದಲ್ಲಿಳಿದರು. ಎತ್ತನೋಡಿದತ್ತ ಚಿಪ್ಪಡ. ಆದರಲ್ಲಿಯೇ ಒಂದು ಕಿಂಡಿಯನ್ನು ಹುಡುಕಿ ವನಶ್ರೀಭಾಂಡಾರದಿಂದ ಹವಳ ಮುತ್ತುಗಳನ್ನು ಕದ್ದು ತರಲು ಒಬ್ಬರಹಿಂದೊಬ್ಬರು ಪಾರಾದರು. ಬಾಲ್ಯದ ಚಾಪಲ್ಯ ನಮ್ಮಲಿಲ್ಲ. ಮೊದಲಿನಂತೆ ಮೈ ಮಣಿಯುವದಿಲ್ಲ. ಅವರೊಡನೆ ಹೋಗಲು ಸುಮ್ಮನೆ ಮೈತರಿಸಿಕೊಂಡಷ್ಟೇ ಆದೀತು. ಸುಮ್ಮನೆ ಕಾವಲುಗಾರನಿಗೆ ವರದೀಕೊಡುವದೇ ಉತ್ತಮ.

ತಲೆ ಕೆಳಗೆ ಮಾಡಿ ತೂಗಹಾಕಿದ ಶರ್ಟಿನ ತೋರಣ ಕಟ್ಟಿದವರಾರು? ನಮ್ಮ ಗಂಗೆ ಭೈರವರೇ, ಏನೋ ನಡೆದಿದೆ ಸರಸಸಲ್ಲಾಪ.

'ಏ ಗಂಗೀ, ಒಂದೀಟು ಅತ್ತ ಮಾರಿಮಾಡಿ ಒಗಿಯಲ್ಲ. ನನಗ ನೀರು ಸಿಡಿತಾವೂ.'

'ಸಿಡಿದರ ನನಗೇನು ಹೇಳತೀ. ಉಗಾದಿಮಟಾ ಯತ್ತಬೇಕತ್ತ ಮಾರಿಮಾಡಿ ಒಗಿತೇನಿ. ಆ ವ್ಯಾಗ ಬೇಕಾದರ ನಿನ್ನ ಭಾಂವಿಗೆ ನಿನಗ ಗಂಟು. ಒಬ್ಬನ ಕಲ್ಲ ಕಟಗೊಂಡು ಮುಣಗುವಂತಿ.'

ಅಣ್ಣನು ಹಿಡಿದುಕೊಂಡುಬಂದ ಗುತ್ತಿಗೆಯ ಮೇಲೆ ಗಂಗೆಯ ಕಟಾಕ್ಷವಿದ್ದುದನ್ನು ಕಂಡು ಭೈರವನು ಸುಮ್ಮನಾದನು.

ಆ ದಿನ ಮೊಟ್ಟೆ ಗೂಡಿಸಿ ಕಟ್ಟಿಕೊಂಡು ಹೊರಡಬೇಕಾದರೆ ಬೆಳದಿಂಗಳು ಬಂತು. ಇಬ್ಬರೂ ಹುಬ್ಬುಗಂಟಿಕ್ಕಿ ತಂತಮ್ಮ ಕತ್ತೆಗಳನ್ನು ಮುಂದೆ ಹಾಕಿಕೊಂಡು ಕೊಳ್ಳದ ಏರಿಯನ್ನು ಏರಹತ್ತಿದರು. ಗಂಗೆಯು ಏರಿಯ ನೆತ್ತಿಗಾಗಲೇ ಬಂದಿದ್ದಳು. ಭೈರವನು ತುಸು ಹಿಂದುಳಿದಿದ್ದನು. ಇಷ್ಟರಲ್ಲಿ ಹುಬ್ಬಳ್ಳಿಯ ಲೋಕಲ್ ಗಾಡಿಯು ಚಿಟ್ಟನೇ ಚೀರಿತು. ನಿಶಾಂತ ಸ್ತಬ್ಧತೆಯಲ್ಲಿ ಅದನ್ನು ಕೇಳಿದ ಭೈರವನ ಕತ್ತೆಯು ಬೆದರಿ ಒಂದು ಹೆಜ್ಜೆ ಹಿಂದೆ ಇಟ್ಟು ತುಸು ಮಗ್ಗಲಾಯಿತು. ಡುಬ್ಬದ ಮೇಲೆ ಹೇರಿದ ಮೊಟ್ಟೆಯ ಗಂಟು ಭೈರವನನ್ನು ಹಿಂದಕ್ಕೆ ದಬ್ಬಿತು. ಇಳುಕಲ ಕಾಲುದಾರಿಯಲ್ಲಿ ರಬ್ಬರಟ್ಟೆಯ ಬೂಟುಮೆಟ್ಟಿದ ಭೈರವನಿಂದ ಹಿಂಜೋಲಿಯನ್ನು ತಡೆಯುವದಾಗಲಿಲ್ಲ. ಅಯ್ಯೋ ಎಂದವನೇ ಇಳುಕಲುದ್ದಕ್ಕೂ ಗಡಗಡನೆ ಉರುಳಿಹೋಗಿ ಬಿದ್ದನು. ಗಂಗೆಯು ಹೊರಳಿ ನೋಡಿದಳು. ಬೆಳದಿಂಗಳಲ್ಲಿ ಕೊಳ್ಳದಡಿಯಲ್ಲಿ ಬಿದ್ದ ಭೈರವನ ಅಸ್ಪಷ್ಟ ಆಕೃತಿಯು ಕಂಡಿತು. ಬರಿಗಾಲಲಿದ್ದ ಗಂಗೆಯು ದುಡುದುಡನೆ ಓಡುತ್ತ ಹೋಗಿ ನೋಡಿದಳು. ಭೈರವನು ನಿಶ್ಚೇಷ್ಟನಾಗಿ ಬಿದ್ದಿದ್ದನು.

ಅವಳ ಮನದ ಉಳಿದ ಭಾವನೆಗಳೆಲ್ಲಿಯೋ ಅಡಗಿಹೋಗಿ ಅವನ ಅಸಹಾಯ ಸ್ಥಿತಿಯಲ್ಲಿ ಅವನನ್ನು ಪಚರಿಸಿ ಎಚ್ಚರಿಸಬೇಕೆಂಬದೊಂದೇ ಪ್ರಬಲವಾಗಿದ್ದಿತು. ಓಡುತ್ತಹೋಗಿ ಮೈಮೇಲಿನ ಸೆರಗನ್ನು ಬಾವಿಯಲ್ಲಿ ತೆಪ್ಪಗೆ ತೊಯ್ಸಿಕೊಂಡು ಬಂದು ನೋಡಿದಳು. ಹಣೆಗೊಂದು ತೂತು.

ಮೆಲಕಿನಿಂದ ಹರಿಯುವ ರಕ್ತದ ಧಾರೆ. ತಲೆಯ ಹತ್ತಿರ ಕುಳಿತು ರಕ್ತ ಒರಿಸಲು ಅನುವಾಗಬೇಕೆಂದು ಅವನ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡಳು. ರಕ್ತವನ್ನು ಒರಿಸಿ ನೆತ್ತಿಗೆ ನೀರು ಬಡೆದಳು ತುಸು ಹೊತ್ತಿನ ಮೇಲೆ ಆ ಶಿತೋಪಚಾರಗಳಿಂದೆಚ್ಚೆತ್ತ ಭೈರವನು ಕಣ್ಣು ತೆರೆದು ನೋಡಿದನು. ಬೆಳದಿಂಗಳಲ್ಲಿ ತಂಗಾಳಿಯಿಂದ ಸುಳಿಯುವ ಗಂಗೆಯ ಮುಂಗೂದಲುಗಳು. ಒಂದೆ ದೃಷ್ಟಿಯನ್ನೊಯ್ದಂತೆ ಚಂದ್ರನನ್ನು ಬಿಂಬಿಸುವ ಆವಳ ಬೆವರ್ತೊಡೆದ ಹಣೆ. ಅದರ ಕೆಳಗೆ ಸ್ನೇಹಪೂರ್ಣವಾದೆರಡು ಕಣ್ಣುಗಳು. ಎಚ್ಚತ್ತನೋ ಇಲ್ಲವೋ ನೋಡಬೇಕೆಂದು ಅದೇ ಸಮಯಕ್ಕೆ ಬಾಗಿ ನೋಡಿದಳು. ತಲೆಯ ಹತ್ತರಿದ್ದ ಅವಳೆಡಗೈಯನ್ನು ತನ್ನ ಕೈಯಲ್ಲಿ ಹಿಡಿದು 'ಗಂಗೀ' ಎಂದಿಷ್ಟೇ ಅಂದನು.

'ಭಾಳ ಪೆಟ್ಟ ಹತ್ತೇನು ಭೈರೂ?'

'ಇಲ್ಲ ಭಾಳೇನೂ ಇಲ್ಲ' ಎಂದು ಉತ್ತರಕೊಟ್ಟು ಮಗ್ಗಲಾಗಿ ಏಳತೊಡಗಿದನು. ಗಂಗೆಯ ಸಹಾಯದಿಂದ ಎದ್ದುನಿಂತು ಅರಿವೆಯ ಮಣ್ಣು ಜಾಡಿಸಹೋದನು. ಅರಿವೆಗೆ ರಕ್ತವೇ ಹತ್ತಿತ್ತು. ಮೊಣಕಾಲ ಪರಟಿಯ ಬದಿಯಲ್ಲಿ ಕೆತ್ತಿದ್ದರಿಂದ ಉರಿಯುತ್ತಿತ್ತು. ಚೆನ್ನಾಗಿ ಕಾಲೂರಲು ಬರುತ್ತಿದ್ದಿಲ್ಲ. ಅಂತೂ ಇಬ್ಬರೂ ಒಮ್ಮೆ ಏರಿಯನ್ನೇರಿ ದಾರಿಗೆ ಬಂದುಕೂಡಿದರು. ಇಬ್ಬರ ಕತ್ತೆಗಳೂ ಒಡೆಯರಿಗೊದಗಿದ ಯಾವ ಸಂಗತಿಯ ಪರಿವೆಯೂ ಇಲ್ಲದೆ ದಾರಿಯ ಮಗ್ಗಲಿಗೆ ಮೇಯುತ್ತ ನಿಂತಿದ್ದವು.

'ನೀ ಇಲ್ಲೇ ಕೂಡಟು. ಈಗ ಠೇಸಣದಿಂದೊಬ್ಬ ಟಾಂಗಾದವನ್ನ ಕರಕೊಂಡು ಬರತೇನಿ. ಅದರಾಗ ಹೋಗ್ವಂತಿ. ನಿನ್ನ ಅರಿವಿ ತಂದು ನಾ ಅಂಗಡಿಗೆಲ್ಲಾ ಮುಟ್ಟಸತೇನಿ.'

'ಯಾತಕ ಬ್ಯಾಡ, ನಡಿ. ಹಗೂರಕ ಇಬ್ಬರೂ ಕೂಡೇ ಹೋಗೂಣ್ಹಂಗ.'

ಭೈರವನೇನೂ ರೊಕ್ಕಕ್ಕೆ ಹಿಂದುಮುಂದೆ ನೋಡುವವನಲ್ಲ. ಆದರೂ ಏಕೆ ಬೇಡೆಂದನೋ! ಗಂಗೆಯು ಹೇಳಿದ ವಾಹನಕ್ಕಿಂತಲೂ ಅವಳ ಆಧಾರದಿಂದಲೇ ಮನೆಗೆ ಹೋಗುವದು ಹೆಚ್ಚು ಸುಖನೆನಿಸಿದ್ದೀತು. ಅಂದು ಮನೆಗೆ ಬರಲು ೨ ತಾಸು ರಾತ್ರಿಯಾಯಿತು. ೩ ಸಾರೆ ಫಕೀರಪ್ಪನು ಅಂಗಡಿಯವರೆಗೆ ಹೋಗಿಬಂದಿದ್ದನು.

೪

ಆ ದಿನದ ನಂತರ ಭೈರವನ ಅರಿವೆಗಳು ಕಳೆದುಹೋಗಲಿಲ್ಲ. ಮಾತ್ರ ಅದಲುಬದಲಾಗುತ್ತಿದ್ದವು. ಆದ್ದರಿಂದ ಭೈರವನು ಮೇಲೆ ಮೇಲೆ ಫಕೀರಪ್ಪನ ಮನೆಗೆ ಬರಬೇಕಾಗುತ್ತಿತ್ತು. ಬದಲಾಗಿರದಿದ್ದರೂ ನೆವಮಾಡಿಕೊಂಡು ಬಂದು ಗಂಗೆಯ ಕೂಡ ತಾಸುಗಟ್ಲೆ ಮಾತಾಡುತ್ತ ಕೂಡುತ್ತಿದ್ದನು. ಅರಿವೆ ಬದಲಾಗಲು ಕಾರಣವೆಂದರೆ ಇತ್ತೀಚೆಗೆ ಇಬ್ಬರ ಮೊಟ್ಟೆಗಳನ್ನೂ ಭೈರವನೇ ಒಗೆಯುತ್ತಿದ್ದನು. ಗಂಗೆಯು ಒಣಗಿಸಿ ಬೇರೆ ಬೇರೆ ಮಾಡಿ ಕಟ್ಟುತ್ತಿದ್ದಳು.

ಒಂದು ದಿನ ಹೀಗೆಯೇ ಒಣಹಾಕುತ್ತಿದ್ದಾಗ ಭೈರವನು ಒಂದು ಗಿಡದಡಿಯಲ್ಲಿ ಕುಳಿತು ನಿಟ್ಟುಸಿರು ಬಿಟ್ಟಂದನು: 'ಏನ ಗನಾ ಬಿಸಿಲಪಾ ಇದು. ಗಂಗೀ ನೀ ಒಗೀತಿದ್ದಾಗ ತಂಪಾಗುತ್ತಿತ್ತು ನೋಡು. ಸಂಪಾಗಿ ನೀರ ಸಿಡಿಸತಿದ್ದಿ. ಈಗ್ಯಾಕ ಬಿಟ್ಟೆ ?'

'ಉಗಾದೀಮ್ಯಾಗ ಹತ್ತೀಕೊಳ್ಳದ ಬಾಂವ್ಯಾಗ ಒಗೀಬ್ಯಾಡಂತ ಹೇಳಿದವ್ಪಾ. ನಿಮ್ಮ ಕಂಪನಿಗೇನೋ ಗುತಿಗ್ಯೈತೆಂತಲ್ಲ.'

'ವಾ ! ರೆ ಹುಡಗಿ ! ಅದಕ ನನ್ನ ಕಡಿಂದ ಒಗಿಸಿಕೊಂಡ ಒಯ್ತೀ ಏನ ? ಒಳ್ಳೊಳ್ಳೇ ಬಾಲಿಷ್ಟರನ ತಲ್ಯಾಗೂ ಬರಾಕಿಲ್ಲ ನೋಡೀ ಹಂಚಿಕಿ.'

'ನುಗ್ಗೀಕೇರಿತನಕ ಎಲ್ಲಿ ಹೋಗಲೊಬ್ಬಾಕೆ ಇನ್ನ. ನೀನ ತಾ ಇಲ್ಲೇ ಒಗದ ಕೊಡತೇನೆಂದಕ್ಕಾಸ ಬಿಡಿಸಿದಿ, ಬೇಶಾತಂದೆ. ಮತ್ತೇನ ಮಾಡಲಿ. ಇಲ್ಲಿ ಒಗ್ಯಾಕೂ ಆಗದೂ ಬಿಡಾಕೂ ಆಗದು. ಗುತಿಗೀ ಹಿಡಕೊಂಡು ಬಂದೀರಿ ಧಣೇರ ಕಡಿಂದ.'

'ನನ್ನ ನೀ ಗುತಿಗಿ ಹಿಡಿದ ವ್ಯಾಗ, ನಾ ಹಿಡಿದ ಗುತಿಗೀನೂ ನಿಂದ ಆತಲ್ಲ.'

ಕುರುಡ ದೈವ

ಕಾಳಪ್ಪನು ಕುರುಡನಾದರೂ ಹುಟ್ಟುಗುರುಡನಲ್ಲ. ತನ್ನ ಉದ್ಯೋಗದಿಂದ ಕಣ್ಣು ಕಳೆದುಕೊಂಡವನು. ಕೆರೆಬಾವಿಗಳಲ್ಲಿ ಬಿದ್ದ ವಸ್ತುಗಳನ್ನು ಮುಳುಗಿ ತೆಗೆಯುವದೇ ಅವನ ಉದ್ಯೋಗ. ಅವನ ಉದ್ಯೋಗದಲ್ಲಿ ಸ್ಪರ್ಧೆಗೆ ಅವಕಾಶವಿರಲಿಲ್ಲ. ಜೀವಕ್ಕೆ ಅಪಾಯವಾಗುವ ಸಂಭವವಿರುವ ಉದ್ಯೋಗದಲ್ಲಿ ಕಂಡು ಕಂಡು ಕಾಲಿಡುವರಾರು? ಜಿಲ್ಹೆಯ ತುಂಬಾ ಅವನ ಪ್ರಸಿದ್ಧಿ. ಪೈಪುಗಳಿದ್ದ ಪಟ್ಟಣಗಳಲ್ಲಿ ಮೊದಲಿನಷ್ಟು ಗಿರಾಕಿ ದೊರೆಯದಿದ್ದರೂ ಒಟ್ಟಿನ ಮೇಲೆ ಅವನ ಪ್ರಾಪ್ತಿ ಚೆನ್ನಾಗಿಯೇ ಇತ್ತು.

ಎತ್ತರವಾದ ಆಳು; ಧಷ್ಟಪುಷ್ಟವಾದ ದೇಹ. ಮೈಬಣ್ಣ ಗೋದಿಗೆಂಪು. ಅವನ ಶರೀರಸಂಪತ್ತನ್ನೂ ಸೌಷ್ಟವವನ್ನೂ ನೋಡಿದವರಿಗೆ ಆ ಕುರುಡತನವನ್ನು ನೋಡಿ, ಆ ಉದ್ಯೋಗವನ್ನು ಇವನೇಕೆ ಕೈಕೊಂಡನೆಂದು ಮರುಕ ಬರುವದು. ಕಾಳಪ್ಪನಿಗೋ ಅದರಲ್ಲಿ ಒಂದು ಹೆಮ್ಮೆ. ೧೨ ಆಳು ನೀರಿನ ಬಾವಿಯಲ್ಲಿ ಬಿದ್ದ ಮೂಗುತಿಯನ್ನು ತೆಗೆದುಕೊಟ್ಟೆನೆಂದು ಹೇಳುತ್ತಿದ್ದನು. ೩೦ ಆಳುಗಳವರೆಗೆ ಮುಣುಗುತ್ತಿದ್ದನು. ಇಂಥವನಲ್ಲಿ ಒಂದೇ ದೋಷ. ಕಾಳಪ್ಪನು ಕುಡುಕ. ಆ ಮೂಲಕ ಒಮ್ಮೆ ಗೋಳಿಗೆ ಸಿಕ್ಕಿಬಿದ್ದಿದ್ದನು. ಕುಡಿದು ಹೊಡೆದಾಟ ಬೈದಾಟದ ಮೂಲಕ ಪೋಲೀಸ ಕಚೇರಿಯನ್ನು ಕಂಡವನಲ್ಲ. ಅದು ಬೇರೆ ತರದ ಗೋಳು. ಅವನ ಹಿತ ಬಯಸುವ ಉಪದೇಶಕರ ಬಲುಮೆಯ ಗೋಳು. ಆ ಹಿತಚಿಂತನೆಯು ಒಮ್ಮೊಮ್ಮೆ ಬಲು ಉಗ್ರರೂಪವನ್ನು ತಾಳುತ್ತಿತ್ತು. ೧೯೨೧ರಲ್ಲಿ ಪಿಕೆಟಿಂಗದ ಹಾವಳಿಯೆದ್ದಾಗ ಹೊಡೆಯುವದು, ಕತ್ತೆಯ ಮೇಲೆ ಮೆರೆಸುವದು ಇವು ಸ್ವಯಂಸೇವಕರು ಯೋಜಿಸುವ ಸಾಧಾರಣ ಉಪಾಯಗಳಾಗಿದ್ದವು. ಒಂದು ದಿನ ಇವನು ಗಡಂಗದಲ್ಲಿದ್ದಾಗ ಸ್ವಯಂಸೇವಕರ ತಂಡವೊಂದುಬಂದುಅದನ್ನುಮುತ್ತಿತು. ಮುಂಚೆಯ ಬಾಗಿಲಿನಿಂದಂತೂ ಹೊರಬಿದ್ದರೆ ಪರಿಣಾಮವು ಒಳಿತಿದ್ದಿಲ್ಲ. ವಿಚಾರ ಮಾಡದೆ ಹಿತ್ತಲವನ್ನು ಹೊಕ್ಕು ಗೋಡೆ ಜಿಗಿದನು. ಅಲ್ಲಿಯ ಖಾನಾವಳಿಯಲ್ಲಿ ಚಿಲ್ಲರೆ ಕೆಲಸಗಳನ್ನು ಮಾಡಿಕೊಂಡಿದ್ದ ೧೪ ವರ್ಷದ

ಶಿವಪ್ಪನೆಂಬ ಹುಡುಗನೊಬ್ಬನು ಇವನಿಗೆ ಸಹಾಯಮಾಡಿ ಪಾರುಮಾಡಿದನು. ಊಟಕ್ಕೆ ಬಂದವನೆಂದು ಹೇಳಿ ಊಟ ಮಾಡಿಸಿ ಕೆಲವು ದಾರಿ ಇವನನ್ನು ಕಳಿಸಲು ಬಂದನು. ಕಾಳಪ್ಪನು "ತಮ್ಮಾ, ನಿನಗಿಲ್ಲೇನು ಸಂಬಳಾ ಕೊಡತಾರೋ?" ಎಂದು ಕೇಳಿದನು. 'ಊಟಾ ಹಾಕಿ ೬ ರೂಪಾಯಿ' ಎಂದು ಶಿವಪ್ಪನು ಉತ್ತರ ಕೊಟ್ಟನು. '೮ ರೂಪಾಯಿ ಕೊಡತೇನಿ ನನ್ನಲ್ಲಿರತೀಯಾ? ಎಂದ. 'ಕೆಲಸವೇನು?' ಎಂದು ಹುಡುಗ ಕೇಳಿದ. 'ಏನಿಲ್ಲ' ಎಂದ ಕಾಳಪ್ಪ. 'ಅಂದರ?' 'ನಾ ಕೆಲಸಕ್ಕ ಹೊಂಟೆನೆಂದರೆ ನನ್ನ ಕೂಟ ಬರೋದು. ಶಿವೂ ನನಗ ಕಣ್ಣು ಅಟು ನಿಚ್ಚಳಾಗಿ ಕಾಣೂದಿಲ್ಲ. ಏನೋ ಬರತೈತಿ ಈಟು ತಿಳೀತೈತಿ. ದನಾನೋ ಗಾಡ್ಯೋ ಇದು ತಿಳ್ಯಾಣಿಲ್ಲ. ಒಂದು ಕೋಲು ಹಿಡಕೊಂಡು ನನ್ನ ಮುಂದ ಮುಂದ ಹೋಗಬೇಕು. ಮತ್ತೇನಿಲ್ಲ.' ಈ ದುಡಿತವಿಲ್ಲದ ಚಾಕರಿ ಸಿಕ್ಕ ಮೇಲೆ ಮೊದಲಿನ ಚಾಕರಿ ಬಿಟ್ಟು ಶಿವಪ್ಪನು ಕಾಳಪ್ಪನಲ್ಲಿಯೇ ಬಂದು ಇದ್ದುಬಿಟ್ಟನು.

ಕಾಳಪ್ಪನ ಮನೆಯಲ್ಲಂದರೆ ಹತ್ತು ವರ್ಷದ ಅವನ ಮಗಳೊಬ್ಬಳೇ. ಅವಳೂ ಶಾಲೆಗೆ ಹೋಗುವವಳು. ಮಧ್ಯಾಹ್ನದ ಮೇಲೆ ಕಾಳಪ್ಪ ಕೆಲಸಕ್ಕೆ ಹೊರಡುವದು ಕಡಿಮೆ. ಊಟವಾದ ಮೇಲೆ ನೆರೆಹೊರೆಯಲ್ಲಿ ಮಾತನಾಡುತ್ತ ಕೂಡುವನು. ಹೀಗಾಗಿ ಶಿವಪ್ಪನು ಒಬ್ಬೊಂಟಿಗನಾಗಿಯೇ ಕಾಲ ಕಳೆಯಬೇಕಾಗುತ್ತಿತ್ತು. ಆಗ ಒಮ್ಮೊಮ್ಮೆ ಖಾನಾವಳಿಯ ಬಾಳುವೆಯೇ ಸೊಗಸೆಂದು ತೋರುವದು. ನಾಲ್ಕು ಜನರ ಬರಹೋಗೋಣ, ಅವರ ಮಾತುಕಥೆ, ಅವರ ಸುದ್ದಿ ಇವುಗಳಿಂದ ಅಲ್ಲಿಯದೊಂದು ಮೋಜು ಬೇರೆ. ಆದರೂ ತಾನು ತೊಳೆಯಬೇಕಾಗುತ್ತಿದ್ದ ಗಂಗಾಳಗಳ ಸಂಖ್ಯೆಯನ್ನು ನೆನೆದುಕೊಂಡು ಈಗಿದ್ದದ್ದೇ ಗುಣವೆನ್ನುವನು.

ಒಂದು ದಿನ ಗೌರಿಯು (ಕಾಳಪ್ಪನ ಮಗಳು) ಶಾಲೆಯಿಂದ ಬಂದವಳೇ ಒಂದು 'ಗೊಂಬೆಯ ಪುಸ್ತಕ' ವನ್ನು ತೋರಿಸಿದಳು. ಎಲ್ಲಿಯದೆಂದು ಶಿವಪ್ಪನು ಕೇಳಿದನು.

"ಮತ್ತ–ಮತ್ತ, ನಮ್ಮ ಸಾಲಿಗೆ ಸಾಹೇಬರು ಬಂದಿದ್ದರು. ನನಗ ಇನಾಮು ಕೊಟ್ಟಾರ."

"ಏನಂತ?"

" ಕೊಯ್ತಾ (ಕವಿತೆ) ಅಂದದ್ದಕ್ಕ. "

" ನನಗೂ ಅನ್ನಾಕ ಬರತೈತಿ ' ಪಾಂಡುನೆಪತಿ ಜನಕಜಯಾ. ' "

" ದಿನಾ ಸಾಲಿಗೆ ಬಂದರ ಹೀಂಗs ಇನಾಮು ಕೊಡತಾರಂತ ಹೇಳಿದರು ಅಕ್ಕಾ ಅವರು. "

" ಹಾಂಗಾರ ನಾನೂ ಬರತೇನಿ ಸಾಲಿಗೆ ನಿನ್ನ ಕೂಟ. "

" ನಾಳೆ ಅಕ್ಕಾ ಅವರನ ಕೇಳಿಕೊಂಡು ಬರತೇನಿ. "

ಮರುದಿನ ಗೌರಿಯು ತನ್ನ ಶಿಕ್ಷಿಕೆಗೆ ಕೇಳಿದಳು. " ಶಿವೂನ್ನೂ ಸಾಲೆಗೆ ಕರಕೊಂಡ ಬರಲೇನರಿ ?" ಎಂದು. ಅವರೂ ಸಮ್ಮತಿಯನ್ನಿತ್ತರು. ಆ ಪ್ರಕಾರ ಶಿವಪ್ಪನು ಗೌರಿಯೊಡನೆ ಶಾಲೆಗೆ ಹೋದಾಗ ಮಾತ್ರ ಎಲ್ಲರಿಗೂ ಒಂದು ನಗೆಯ ದಿನವಾಯಿತು. ' ಶಿವೂನ್ನ ' ಎಂದು ಗೌರಿಯು ಕೇಳಿದಾಗ ಭಾವೀ ಶಿಷ್ಯನ ವಯಸ್ಸು ಕೇಳಬೇಕೆಂಬ ಕಲ್ಪನೆಯು ಸಹ ಶಿಕ್ಷಿಕೆಗೆ ಬಾರದಿರುವದು ಸಹಜವೇ. ಮರುದಿನ ಮಾತ್ರ ಅವನನ್ನು ಕರಕೊಂಡು ಬಂದಕೂಡಲೆ ನಕ್ಕು " ಇವಗ ಕಲಸೋಣ ನಮ್ಮ ಕಡಿಂದ ಆಗದ ಮಾತು. ನೀನs ಗಂಡನ್ನ ಮಾಡಿಕೊಂಡು ಕಿವಿಹಿಂಡಿ ಕಲಿಸು " ಎಂದು ಹೇಳಿಬಿಟ್ಟರು. ನಿರುಪಾಯನಾಗಿ ಮನೆಗೆ ಬಂದನು. ಅಂದಿನಿಂದ ಮನೆಯಲ್ಲಿಯೇ ಗೌರಿಯ ಬಳಿಯಲ್ಲಿ ಶಿವಪ್ಪನ ಅಧ್ಯಯನವಾರಂಭವಾಯಿತು. ೨-೩ ತಿಂಗಳಾಗುವಷ್ಟರಲ್ಲಿಯೇ ತಾನು ಇನ್ನು ಅವಳ ಹತ್ತರ ಕಲಿಯುವದಿಲ್ಲವೆಂದನು. ಅದಕ್ಕೆ ಕಾರಣವು ಕಲಿಸುವಾಗ ಅವಳು ಕೊಟ್ಟ ಛಡಿಯ ಏಟುಗಳೆಂದಲ್ಲ. ತಾನು ಇನ್ನು ಮೇಲೆ ಕನ್ನಡ ಕಲಿಯುವದಾಯಿತೆಂದನು. ಕಲಿತರೆ ಇನ್ನು ಇಂಗ್ಲೀಷು. ಈ ಪ್ರತಿಜ್ಞೆ ಕೇಳಿ ಗೌರಿಯು ಕೈಬಿಟ್ಟು ಬಿಟ್ಟಳು. ಈ ಅವಧಿಯಲ್ಲಿ ಇತ್ತ ಗೌರಿಯು ಶಾಲೆಗೆ ಹೋದಾಗ ಅವಳ ವರ್ಗದಲ್ಲಿಯ ಹುಡುಗೆಯರು ' ಗಂಡನ್ನೇಕೆ ಕರಕೊಂಡು ಬರುವದಿಲ್ಲೆ'ಂದು ಕಾಡಹತ್ತಿದ್ದರಿಂದ ಬೇಸತ್ತು ಅವಳೂ ಶಾಲೆಗೆ ಶರಣುಹೊಡೆದಳು.

ಶಿವಪ್ಪನ ಆದಷ್ಟೇ ಅಧ್ಯಯನವು ಉಪಯೋಗ ಬೀಳುವ ಸಂದರ್ಭ ಪೊದಗಿತು. ಓಣಿಯಲ್ಲಿ ' ಕೃಷ್ಣಪಾರಿಜಾತ ' ಆಟವನ್ನು ಹೂಡಿದರು. ಅದರಲ್ಲಿ ಅವನು ಕೊರವಂಜಿಯ ವೇಷವನ್ನು ಧರಿಸಿದನು. ಶಿವಪ್ಪನು ರೂಪವಂತ. ಮೇಲೆ ವೇಷಸಾಧನೆಯೂ ಚೆನ್ನಾಗಿತ್ತು. ಹಳದೀ ರಾಘಾವಳಿಯ

ಶೀರೆಯನ್ನುಟ್ಟು ಕಣ್ಣಿಗೆ ಕಾಡಿಗೆಯಿಟ್ಟು, ಬೆಳೆಸಿದ ಕೂದಲುಗಳನ್ನು ಹಾಗೆಯೇ ಬಿಟ್ಟು, ಕಾಲಲ್ಲಿ ಗೆಜ್ಜೆ, ಹಣೆಯ ಮೇಲೆ ಕುಂಕುಮ, ತಲೆಯ ಮೇಲೆ ಬುಟ್ಟಿ, ಬಗಲಲ್ಲಿ ಕೂಸು ಇಟ್ಟುಕೊಂಡು ಎಡಗೈಯನ್ನು ತಿರುವುತ್ತ 'ಭೂತ ಬಿಡಿಸಲು ಬಲ್ಲೆ ಬೇತಾಳವ ಬಲ್ಲೆ' ಎಂದು ಪ್ರವೇಶಿಸಿದನೆಂದರೆ ಜನವೆಲ್ಲ ಮಂಕಃಬಡಿದ ಹಾಗೆ ಕೂಡುತ್ತಿತ್ತು. ಮುಖ್ಯ ಕಥಾಭಾಗಕ್ಕೆ ಬರುವ ಮೊದಲು ಹಾಸ್ಯಕ್ಕೆ ಪೋಷಕವಾಗಲು ದಾಸಿಯರ ಶಕುನ ಹೇಳು ವದಕ್ಕಾರಂಭಿಸಿದನು. ಒಬ್ಬನಿಗೆ ತವರುಮನೆಯ ಹೆಣ್ಣುಮಗಳ ಮೇಲೆ ಮರ್ಮ ಮಾಡುತ್ತೀಯೆಂದು ಹೇಳಿದನು ಮತ್ತೊಬ್ಬಳು ಗಂಡನು ಸಿಟ ಗೊಂಡದ್ದಕ್ಕೆ ಕಾರಣ ಕೇಳಲು, ನೆರೆಯುವಳೊಬ್ಬಳು ಅವನಿಗೆ ಮಾಟ ಮಾಡಿಸಿ ಆಟದ ಹುಚ್ಚು ಹಿಡಿಸಿರುವಳು, ಆಟದ ಅಟ್ಟದ ಹಿರಿಯ ಕಂಬಕ್ಕೆ ನಸುಕಿನಲ್ಲಿ ೫ ಬಾಳೇ ಹಣ್ಣು ಇಡಬೇಕೆಂದು ಹೇಳಿದನು. ಮುಗುದೊಬ್ಬಳು ಮಕ್ಕಳಿಲ್ಲವೆಂದು ಕೇಳಲು ಅಂಗಡಿಗೆ ಜೋಳ ಹಾಕಿ ಕದ್ದು ಕರದಂಟು ತಿನ್ನುವದನ್ನು ಬಿಡಬೇಕೆಂದು ಹೇಳಿದನು. ಹೀಗೆ ಏನೇನೋ ಹೇಳಿ ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತಿದ್ದನು.

ಓಣಿಯಲ್ಲಿ ೨ ಆಟಗಳಾದವು. ಜನಕ್ಕೆ ತೃಪ್ತಿಯಾಗಲಿಲ್ಲಿ. ಆಟದ ಕೂಟದವರಲ್ಲಿ ಹಿರಿಯನೊಬ್ಬನು ಥೇಟರಿನಲ್ಲಿ ಮಾಡಬೇಕೆಂದು ಬೇಟೆ ಹೂಡಿದನು. ಉಳಿದವರದೆಲ್ಲ ಬಗೆಹರಿಯುವಂತಿತ್ತು. ಶಿವಪ್ಪನಿಂದಲೇ ತೊಂದರೆ. ಆಟವಿದ್ದ ದಿನ ಹಾಗೂ ಅದರ ಮರುದಿನ ಕೆಲಸಕ್ಕೆ ಹೋಗುವ ದನ್ನು ಬಿಡಬೇಕಾಗುತ್ತಿತ್ತು. ಅವನಿಲ್ಲದಿದ್ದರೆ ಕಾಳಪ್ಪನೂ ಮನೆಯಲ್ಲಿಯೇ ಕೂಡಬೇಕು. ಎರಡು ಸಲ ಏನೋ ಓಣಿಯವರು ಕೂಡಿ ಮಾಡುವ ಕೆಲಸ ಎಂದು ಸುಮ್ಮನಿದ್ದನು. ಇದು ಹಾಗೆಯೇ ಮೇಲಿಂದ ಮೇಲೆ ನಡೆದರೆ ಸಾಗು ವದು ಹೇಗೆ? ಕಾಳಪ್ಪನು ಬೇಡವೆಂದನು. ಹಿರಿಯನು ಬಂದು ಸಾವಿರ ಪರಿ ಯಿಂದ ಹೇಳಿಕೊಂಡು ಖುಷಿಗೆಂದು ೪ ರೂಪಾಯಿ ಕೊಟ್ಟು ಅಂದಿನಮಟ್ಟಿಗೆ ಅಪ್ಪಣೆಯನ್ನು ಪಡೆದುಕೊಂಡನು. ಇದನ್ನು ಕಂಡು ಶಿವಪ್ಪನಿಗೆ ಹೊಟ್ಟೆ ಯುರಿ. ಆ ಹೊತ್ತು ಮನೆಯಲ್ಲಿ ಮತ್ತೂ ಒಂದು ಪ್ರಕರಣವಾಗಿತ್ತು. ಆಟಕ್ಕೆ ಮೆಚ್ಚಿದ ಮಗಳು ಅಂದೂ ನೋಡಲಿಕ್ಕೆ ಹೋಗಬೇಕೆನ್ನುವವಳು; ತಂದೆಯು ಬೇಡವೆನ್ನುವವ. '೨ ಸಾರೆ ಓಣಿಯಲ್ಲಾದಾಗ ನೋಡಿಯೂ ನೋಡಿ ಈಗ

ಮತ್ತೇನಿದು ಹುಚ್ಚು ರೊಕ್ಕ ಕೊಟ್ಟು ನೋಡುವದು?' ಎಂದು ಬೆದರಿಸಿದ್ದನು. ಕಣ್ಣಿದ್ದವರ ನೋಡಬೇಕೆಂಬಾಸೆಯು ಹಸಿವನ್ನು ಕುರಡನು ಅರಿಯನು. ಕಾಳಪ್ಪನು ಸಂಜೆಗೆ ನಿಶೆಯಾಗಿ ಬಂದು ಬಿದ್ದುಕೊಂಡನು. ಇತ್ತ ಶಿವಪ್ಪನು ಗೌರಿಯನ್ನು ಕರಕೊಂಡು ಥೇಟರಿಗೆ ಹೋದನು. ದಾರಿಯುದ್ದಕ್ಕೂ ಇಬ್ಬರೂ ಕಾಳಪ್ಪನನ್ನು ಬಲ್ಲಬಲ್ಲಂತೆ ಆಡಿಕೊಂಡರು. ಹೊಟ್ಟೆಯಲ್ಲಿಯ ಸಿಟ್ಟು ತೋಡಿಕೊಂಡರು. ಅವನ ಫಜೀತಿ ಮಾಡಬೇಕೆಂದು ನಿಶ್ಚಯಿಸಿ ಕೊಂಡರು.

ಅಂದಿನ ಆಟವು ಹಿಂದಿನ ದಿನಗಳಿಗಿಂತ ಮಿಗಿಲಾಯಿತು. ಆಟಕ್ಕೆ ತಕ್ಕ ರೊಕ್ಕವೂ ಆಯಿತು. ಯಾರೋ ಒಬ್ಬರು ಮೆಚ್ಚಿ ಶಿವಪ್ಪನಿಗೆ ಒಂದು ಪದಕವನ್ನು ಕೊಟ್ಟರು. ಆಟ ಮುಗಿದ ಮೇಲೆ ಗೌರಿಗೆ ಉತ್ಸಾಹದಿಂದ ಅದನ್ನು ತೋರಿಸಿದನು. ಅವಳೂ ಅವನನ್ನು ಅಭಿಮಾನ ತುಂಬಿದ ಕಣ್ಣು ಗಳಿಂದ ನೋಡಿದಳು. ಶಿವಪ್ಪನಿಗೆ ಸ್ವರ್ಗವು ಮೂರೇ ಗೇಣಾಳಿಯಿತು.

ಸುಗ್ಗಿಯ ಹಂಗಾಮು ಮುಗಿದ ಮೇಲೆ ಆಟದ ಹಿರಿಯನು ಮೇಳ ವನ್ನು ಕಟ್ಟಿಕೊಂಡು ಊರೂರಿಗೆ ಹೋಗಬೇಕೆಂದು ಪ್ರಸ್ತಾಪ ತೆಗೆದನು. ಶಿವಪ್ಪನ ತೊಂದರೆಯನ್ನು ಈ ಸಾರೆ ಬೇರೆ ರೀತಿಯಿಂದ ದೂರಮಾಡ ಬೇಕೆಂದೆಣಿಸಿ ಶಿವಪ್ಪನಿಗೆ ಪ್ರಾಪ್ತಿಯ ಅರ್ಧಪಾಲನ್ನು ಕೊಡುವೆನೆಂದು ಕರೆದನು. ಮೊದಲೊಂದು ನೂರಿನ್ನೂರು ರೂಪಾಯಿ ಮಾತ್ರ ಹಾಕಬೇಕು. ಮೂರು ತಿಂಗಳಲ್ಲಿ ಇಬ್ಬರಿಗೂ ಒಂದೊಂದು ಸಾವಿರ ಲಾಭಮಾಡಿಕೊಳ್ಳ ಬಹುದೆಂದನು. ಈ ವಿಷಯದಲ್ಲಿ ಶಿವಪ್ಪನು ಆತ್ಮೀಯತೆಯಿಂದ ಗೌರಿಯ ಸಲಹೆ ಕೇಳಿದನು. ಅವಳೂ ಈ ಕುಂಟ ಚಾಕರಿಯಲ್ಲಿ ಕೊಳೆಬೀಳುವದ ಕ್ಕಿಂತ ಬಂದ ಸಂದಿಯನ್ನು ಬಿಡಬಾರದೆಂದೇ ಮತಕೊಟ್ಟಳು. ಆ ಮೇಲೆ ಬಂತು ಭಂಡವಲದ ಪ್ರಶ್ನೆ. ಶಿವಪ್ಪನ ಸಂಬಳದಲ್ಲಿ ಉಳಿದದ್ದೆಂದರೆ ಇಪ್ಪತ್ತು ವರಹ ಮಾತ್ರ. ಹೆಚ್ಚಿಗೆ ಬೇಕಾದ್ದಕ್ಕೆ ಗೌರಿಯು ತನ್ನ ಕೈಯಲ್ಲಿಯ ಳ ತೊಲಿಯ ಬಳಿ ಕೊಡುವೆನೆಂದಳು. 'ಮತ್ತ ಕಾಳಪ್ಪ ಏನರ್ನ ಅಂದರ?' ಎಂದು ಶಿವಪ್ಪನು ಶಂಕೆ ತೆಗೆದನು. 'ಅನಿಸಿಕೋಳಕ್ಕೆ ಇಲ್ಲಿರತಾರ್‍ಯಾರು?' ಎಂದು ಗೌರಿಯು ಉತ್ತರಕೊಟ್ಟಳು. ಶಿವಪ್ಪನು ಚಕಿತನಾಗಿ ಅವಳ ಕಡೆಗೆ ನೋಡಿದನು. ಅವಳು ತಲೆತಗ್ಗಿಸಿ ನಿಂತಿದ್ದಳು. ಅಂತೂ ಇಬ್ಬರೂ ಕೂಡಿಯೇ ಹೊರಟರು.


ಮೊದಮೊದಲು ಉತ್ಪನ್ನವು ಚೆನ್ನಾಗಿಯೇ ಆಯಿತು. ಕೈಯಲ್ಲಿ ರೊಕ್ಕವಿದ್ದಾಗ ತಕ್ಕ ಗೆಳೆಯರೂ ಶಿವಪ್ಪನಿಗೆ ಕೂಡಿದರು. ಕೊನೆಗೆ ಗಳಿಕೆಯ ಆಶೆಯೆಲ್ಲಾ ಬಯಲಾಗಿ ಅರಿಯದ ಊರಿನಲ್ಲಿ ಎಲ್ಲಿಯೋ ಹೋಗಿ ಮತ್ತೆ ಚಾಕರಿಗೆ ನಿಲ್ಲಬೇಕಾಯಿತು. ಇತ್ತ ಗೌರಿಯು ಕೆಲವು ದಿನ ಸೌಖ್ಯವನ್ನು ಸೂರೆಗೊಂಡು ಆ ಮೇಲೆ ಪತಿತ ಜೀವಿಗಳ ಆಯುಷ್ಯವನ್ನು ಹೇಗೋ ಕಳೆಯುತ್ತ ನಡೆದಳು.

ಏಳೆಂಟು ವರ್ಷಗಳು ಹಾಗೇ ಕಳೆದವು. ಈ ಅವಧಿಯಲ್ಲಿ ಕಾಳಪ್ಪನ ಕುಡುಕತನವು ಹೆಚ್ಚಾಯಿತು. ಅವನಿಗೆ ಇಬ್ಬರ ಸುದ್ದಿಯೂ ಇರಲಿಲ್ಲ. ಯಾರಾದರೂ ನೆರೆಹೊರೆಯವರು ಮಾತು ತೆಗೆದರೆ ಆ ಹೇಸಿ ಮೂಳಗಳ ಸುದ್ದಿ ಎತ್ತಬೇಡಿರೆಂದು ಗದ್ದರಿಸುವನು.

× × × ×

ಶಹರುಗಳಲ್ಲಿ ಉದ್ಯೋಗಿಗಳಂತೆಯೇ ನಿರುದ್ಯೋಗಿಗಳೂ ಹೆಚ್ಚು. ಇವರಲ್ಲಿ ನಿರೀಕ್ಷಣ ಶಕ್ತಿ ಹೆಚ್ಚು. ಯಾವದಾದರೊಂದು ಕಟ್ಟಡದ ಮೇಲೆ ಮಂಗನ ಮರಿಯಾಗಲಿ ಇಣಚಿಯ ಚಿನ್ನಾಟವಾಗಲಿ ನಡೆದಿದ್ದರೆ ಇಂಥವರಲ್ಲೊಬ್ಬನ ದೃಷ್ಟಿಗೆ ಬೀಳುವದು. ಮುಂದೆ ಅರಗಳಿಗೆಯಲ್ಲಿ ಒಂದು ಸಣ್ಣ ಸಂತೆ ನೆರೆಯುವದು. ಒಂದು ದಿನ ಬೆಳಗು ಮುಂಜಾನೆ ಹಾಲಗೆರೆಯ ಒಂಡಿಯ ಮೇಲೆ ಹಾಯ್ದು ಬರುವಾಗ ಒಬ್ಬನ ದೃಷ್ಟಿಗೆ ನೀರಿನಲ್ಲಿ ಏನೋ ತೇಲುತ್ತಿದ್ದುದು ಬಿತ್ತು. ನೆರೆದ ಜನರ ತಿಳುವಳಿಕೆಯು ಮೊದಲು ಎಂಥದೋ ಪಾಚಿ ಎಂದಾಯಿತು. ಆ ಮೇಲೆ ತಲೆಬುರುಡೆಯ ಕೆಲ ಭಾಗವೂ ಸ್ಪಷ್ಟವಾಗಿ ಕಂಡುಬಂತು. ಪೋಲೀಸರಿಗೆ ವರದಿ ಹೋಯಿತು. ಅವರೂ ಬಂದರು. ಹೆಣ ತೆಗೆದು ದಂಡೆಗೆ ಹಾಕುವದು ಮೊದಲನೆಯ ಪ್ರಶ್ನೆ. ಆ ಕೆರೆಯಲ್ಲಿ ಹುದುಲು ಬಹಳವಾಗಿದೆಯೆಂದೂ ಪಾತ್ರದಲ್ಲಿ ನಡುವೆ ಬಾವಿಯೂ ಸುತ್ತಲೂ ಗೋಡೆಗಳೂ ಇರುವವೆಂದೂ ವದಂತಿ. ಪಾವಟಿಗೆಯಿದ್ದಲ್ಲಿ ಮಾತ್ರ ಇಳಿದು ಬಳಿಕೆಗಾಗಿ ಕೆಲವು ಜನರು ನೀರು ಒಯ್ಯುತಿದ್ದರು. ಇಂಥದರಲ್ಲಿ ಧೈರ್ಯಮಾಡುವವನೆಂದರೆ ಕಾಳಪ್ಪನೇ. ಪೋಲೀಸರು ಕಾಳಪ್ಪನಿಗೆ ಕರೆಕಳಿಸಿದರು. ಅವನು ಬಂದು ೫ ಮಿನಿಟುಗಳಲ್ಲಿ ಕೂದಲುಗಳಿಂದ ಎಳೆಯುತ್ತ ತಂದು ಶವವನ್ನು ದಂಡೆಗೆ ಹಾಕಿದನು. ಒಣ ಅರಿವೆ ಹಾಕಿ

ಕೊಳ್ಳುತ್ತ "ಸೂಳೇಮಕ್ಕಳು! ಬೀಳಲಿಕ್ಕೆ ಊರ ನಡುವಿಂದಽ ಕೆರೀ ಆರಿಸ್ಯಾರ! ಮತ್ತ್ಯಾವ ಕೇರೀಬಾವೀ ಹಾಳ ಬಿದ್ದಿದವ!" ಎಂದು ಗೊಣಗುಟ್ಟಿದನು. ಅಮಲ್ದಾರರು ಕೈಯಲ್ಲಿಟ್ಟ ರೂಪಾಯಿ ತೆಗೆದುಕೊಂಡು ಒಮ್ಮೆಲೆ ಗಡಂಗದ ದಾರೀ ಹಿಡಿದನು. ಇತ್ತ ಯಥಾಕ್ರಮವಾಗಿ ಪಂಚನಾಮೆ ಮುಂತಾದವು ನಡೆದವು. ‘ಯಾರು ಯಾರೆ’ಂದು ಅನೇಕ ಜನ ಬಂದು ನೋಡುತ್ತಿದ್ದಿತು. ಬಿದ್ದವಳು ಊರವಳೇ ಆದ್ದರಿಂದ ಗುರುತು ಸಿಗಲು ಬಹಳ ಹೊತ್ತು ಹತ್ತಲಿಲ್ಲ. ಕಾಳಪ್ಪನ ಮಗಳು ಗೌರಿ ಎಂದು ಪಂಚನಾಮೆಯಾಯಿತು. ದೈವಕ್ಕೆ ಕುರುಡವೆನ್ನುವ ಪರಿಪಾಠ!



ಕಣ್ಣ ಮೇಲಿನ ಪರೆ

ಸುಬ್ಬಣ್ಣನ ವಿವಿಧ ಕೃತಿಗಳನ್ನೋದಿದವರಲ್ಲಿ ಅನೇಕರು ಹೊಗಳಿರಬಹುದು; ಚರ್ಚಿಸಿರಬಹುದು; ಟೀಕಿಸಿರಬಹುದು. ಆದರೆ ಒಂದು ಪ್ರಶ್ನೆಯನ್ನು ಈ ವರೆಗೂ ಯಾರೂ ಕೇಳಿರಲಿಲ್ಲ. ಆ ಧೈರ್ಯವನ್ನು ಮಾಡಿದ ಅವನ ಹೆಂಡತಿ ಸರಸಕ್ಕನೇ. ಅವಳೂ ಧೈರ್ಯ ಮಾಡಿದಳೆಂದು ಅಲ್ಲ. ಅವಳ ಬಾಯಿಂದ ಸಹಜವಾಗಿ ಹೊರಬಿದ್ದ ಪ್ರಶ್ನೆಯದು. ಏನೋ ಬರೆಯುತ್ತ ಕುಳಿತಿದ್ದ ಸುಬ್ಬಣ್ಣನು ಅದನ್ನು ಕೇಳಿ ಒಂದು ಕ್ಷಣ ಸ್ತಿಮಿತನಾದನು. ಅವಾಕ್ಕಾದನು.

' ಇದನ್ನೆಲ್ಲ ಯಾಕ ಬರೆಯುವಿರಿ ' ಎಂಬುದೇ ಆ ಮಹತ್ತಾದ ಪ್ರಶ್ನೆ.

ಈ ಉದ್ಧಟ ಪ್ರಶ್ನೆಗೆ ' ಬರೆಯಬೇಕೆಂದೆನಿಸುವದೆಂದು ' ಎಂದು ಉತ್ತರ ಕೊಟ್ಟನು.

ಅವನಿಗಿದು ಸರಿಯಾದ ಉತ್ತರವೆನಿಸಿತು. ಅವಳಿಗೆ ಹಾಗೆನಿಸಲಿಲ್ಲ. ಯಾರಿಗೂ ಅನಿಸಲಿಕ್ಕಿಲ್ಲ. ಕಳಕಳಿಯಿಂದ. ಬುದ್ಧೀ ಹೇಳ ಬಂದವರಿಗೆ ಒಂದು ಬಗೆಯಿಂದ ಕೆನ್ನೆಗೆ ಬಡಿದಂತೆಯಾಯಿತು.

ಅವನಾದರೂ ' ನಿನಗೇಕೆ ಬೇಕು ಕಾರಭಾರ, ನಿನಗೇನು ತಿಳಿಯುವದು, ಸುಮ್ಮನಿರು ' ಎಂಬ ಅರ್ಥದಲ್ಲಿ ಹಾಗೆ ಆಡಿರಲಿಲ್ಲ. ಮನಃಪೂರ್ವಕವಾಗಿ (ಅವಳ ಪ್ರಶ್ನೆಗೆ) ಅವಳಿಗೆ ತಿಳಿಯುವಂತೆ ತಿಳಿಯಾದ ಭಾಷೆಯಲ್ಲಿ ಹೇಳಲು ಯತ್ನಿಸಿದ್ದನು. ಉದ್ದೇಶವು ಸಾಧ್ಯವಾಗದಿದ್ದುದು ಅವನ ದೋಷವಲ್ಲ.

ಸರಸಕ್ಕನು " ಅದ್ಕ ನಾ ಕೇಳಿದ್ದು. ಅದು ಹಂಗ್ಯಾಕ ಅನಿಸತ'ದ ಎಂದು. " ಆಗ ಸುಬ್ಬಣ್ಣನಿಗೆ ತನ್ನ ಉತ್ತರದ ಸಹಜಾರ್ಥದಲ್ಲಿ ಅಡಕವಾಗಿದ್ದ ನಿರರ್ಥಕತ್ವವು ಹೊಳೆಯಿತು. ತಾನು ಹೇಳಬೇಕೆಂದಿದ್ದುದು ' The urge to create ' ಎಂದು. ಮೊದಲು ಕನ್ನಡ ಭಾಷೆಗೂ ಆ ಮೇಲೆ ತನಗೂ ನಾಲ್ಕು ಬೈಗುಳನ್ನಿಟ್ಟುಕೊಂಡು ನಿಧಾನವಾಗಿ ಆ ಗೂಢ ಮನೋವ್ಯಾಪಾರವನ್ನು ತಿಳಿಸಲುಪಕ್ರಮಿಸಿದನು.

‘ ಇದು ನೋಡು, ಹೆಂಗಸರು ಮಕ್ಕಳನ್ನು ಬಯಸಿ ಹೆರುವದೇಕೆ ?’

‘ ನಿಮಗೊಂದುದ್ಯೋಗವಿಲ್ಲ. ಏನಾದರೊಂದು ಕೇಳಿದರೆ ಎಲ್ಲಿಗಾದರೂ ಒಯ್ದು ಹಚ್ಚುವದು. ಇಂಥದೇ ಏನಾದರೂ ಬರೀಶೀರೆಂತ ಹೇಳಿ ಜನರು ಬಯ್ತಾರ ನಿಮಗ. ’

“ ಮೊದಲು ಓತ್ತಾರ ಹೌದಲ್ಲೋ, ಬಯ್ಯಲಿ ಬೇಕಾದರೆ ಆ ಮೇಲೆ. ಆದರೂ ನಿನ್ನಂತೆ ಓದದೆ ಬಯ್ಯುವದಿಲ್ಲವಷ್ಟೇ ಸುಮ್ಮ ಸಮ್ಮನೆ ! ನನ್ನ ಮೇಲೆ ಈಗ ಅಶ್ಲೀಲತೆಯ ಆರೋಪವಿಟ್ಟ. ಶೃಂಗಾರಕ್ಕೇ ಅಶ್ಲೀಲವೆನ್ನುವ ಮಡಿವಂತರೆಷ್ಟು ಮಂದಿಯೋ ? ನೋಡು, ನಿಜವಾಗಿಯೂ ಇದು ಅಸಭ್ಯ ವಿದ್ದಿಲ್ಲ. ಒಂದು ವೇಳೆ ಇದ್ದರೂ ಕ್ಷಮ್ಯವಿದೆ. ‘ No Thing that is relevant is indecent. ’ ಪ್ರಸ್ತುತ ವಿಷಯವನ್ನೇ ಸುಗಮವಾಗಿ ತಿಳಿಸಲೋಸುಗ ಒಂದು ದೃಷ್ಟಾಂತವನ್ನುದಹರಿಸಿದೆ. ಒಮ್ಮೆಲೆ ಮೂಗು ಮುರಿದಿ. ”

“ ಹಾಗಾದರೆ ಬರೆಯುವದಕ್ಕೂ ಇದಕ್ಕೂ ಏನು ಸಂಬಂಧ ? ”

“ ಕೇಳಿಕೋ. ಕೇಳಿಕೋ ಒಂದಿಷ್ಟು ಪೂರ್ಣಾರ. ಹೆಂಗಸರಿಗೆ ಹೇಗೆ ಮಕ್ಕಳನ್ನು ಹಡೆಯುವದು ನಿಸರ್ಗ ಸಹಜಗುಣಧರ್ಮವೋ ಹಾಗೆಯೇ ಗ್ರಂಥಕರ್ತರಿಗೂ ಕೃತಿಗಳನ್ನು ನಿರ್ಮಿಸುವದು. ಮಾತೃತ್ವದ ಆನಂದವನ್ನು ಪಡೆಯದ ಸ್ತ್ರೀಯ ಜನ್ಮವು ಹೇಗೆ ವ್ಯರ್ಥವೆನಿಸುವದೋ ಹಾಗೆಯೇ ಕಲಾವಿದನ ಜನ್ಮವು. ”

‘ ಹಾಂ. ಹಾಂ. ಇದ್ದೀತು. ಇದ್ದೀತು. ’

‘ ಇದ್ದೀತು. ಏನು ? ಇದೆ. ಹಾಗೆಂದರೆ ಈಗ ಸುಳ್ಳು ನೆವ ಮುಂದು ಮಾಡಿಕೊಂಡು ಒಂದು ನನ್ನ ಲೇಖನಕ್ಕೆ ವ್ಯತ್ಯಯ ತಂದಿ. ನೀನೇ ಅಪರಾಧಿಯು ! ’

‘ ಸುಳ್ಳು ನೆವ ಅಲ್ಲ. ’

‘ ಸುಳ್ಳಲ್ಲದೆ ಮತ್ತೇನು. ಒಮ್ಮೆಯೂ ಓದದೆ ನನಗೆ ಒಮ್ಮೆಲೆ ಏಕೆ ಬರೆಯುವಿರಿ ’ ಎಂದು ಪ್ರಶ್ನೆಯನ್ನು ಕೇಳುವ ಮೊದಲು ‘ ಹೀಗೇಕೆ ಬರೆದಿದ್ದಾನು ’ ಎಂಬದನ್ನು ನಿನ್ನ ಮನಸ್ಸಿನಲ್ಲಿ ವಿಚಾರ ಮಾಡಿದ್ದೀಯಾ ? ’ ಅವೇನು ಸಾಮಾನ್ಯ ಜನರ ಶಬ್ದಗಳಲ್ಲ. ಪ್ರಖ್ಯಾತ ಲೇಖಕರ ಅಭಿಪ್ರಾಯಗಳು.

‘ ಹಂ, ಹಂ, ಅಂತೂ ನೀವು ಬರೆಯುುವದೆಲ್ಲ ನಿಮ್ಮದಲ್ಲವೆನ್ನಿರಿ. ’

‘ ಅಂದರೆ ನಾನು ಪ್ರಖ್ಯಾತ ಲೇಖಕನಲ್ಲವೆಂದು ತಿಳಿದಿರುವಿಯೇನು? ತಿಳಿ. ಒಂದು ವೇಳೆ ನಾನು ಅನ್ಯ ಪುಸ್ತಕಗಳನ್ನು, ಲೇಖಗಳನ್ನು ಓದಿ ಅವುಗಳ ಆಧಾರದಿಂದ ನನ್ನ ಲೇಖಗಳನ್ನು ಸಿದ್ಧಪಡಿಸಿದೆ. ತಪ್ಪೇನು, ಅವನ್ನು ಅರಗಿಸಿಕೊಂಡ ಮೇಲೆ ಅವು ನನ್ನವೇ ಆದವು. ’

‘ ಹಾಂ, ಹಾಂ, ನಾನೆಲ್ಲಿ ಹಾಗೆಂದೆ. ನೋಡಿದಿರಾ, ಕಳ್ಳನ ಜೀವ ಹುಳ್ಳ ಹುಳ್ಳಗೆ ಅಂತೆ. ಅಳ್ಳಿ ಕದ್ದವರಾರೆಂದರೆ ಗಡ್ಡಕ್ಕ ಕೈ ಹಚ್ಚಿಕೊಂಡು ನೋಡಿದರಂತೆ. ’

‘ ಅಂತೂ ನನ್ನ ಮಾತು ಮಾತಿನಲ್ಲಿಯೇ ಕಳ್ಳನ್ನ ಮಾಡಿದೆಯಲ್ಲ. ವಾಙ್ಮಯಚೌರ್ಯದ ಪ್ರಶ್ನೆ ಬಹಳ ಸೂಕ್ಷ್ಮವಾಗಿರುವುದು. ಹಾಗೆಂದರೆ ಜಗತ್ತಿನಲ್ಲಿ ತೀರ ಹೊಸದೆಂಬುದಾವುದೂ ಇಲ್ಲ. ’

‘ ನೋಡಿದಿರಾ, ನಾನು ಬರೇ ಒಂದು ದೃಷ್ಟಾಂತ ಕೊಟ್ಟೆ. ಅದನ್ನೇ ನಾನೆಂದದ್ದೆಂದು ತಿಳಿದುಮಾತಾಡಹತ್ತಿದಿರಿ.’

‘ ಹೂಂ, ಅಂತೂ ಸಹಜವಾಗಿಯೆ [The creation, criticism and playagrism Literature] ಈ ಪ್ರಶ್ನೆಗಳುದ್ಭವಿಸಿದವು. ಒಳ್ಳೇದು ಮುಂದಿನ ತಿಂಗಳಿಗೆ ಒಂದು ಲೇಖವನ್ನು ಸಿದ್ಧಮಾಡೋಣ. ನಾಳೆ ಲೈಬ್ರಿಗೆ ಹೋಗೋಣ’

‘ ಅದೆಲ್ಲ. ನಾಳೆ ಮಾಡುವಿರಂತೆ. ಈಗ ಊಟಕ್ಕೇಳಿರಿ, ಅನ್ನ ಆರಿ ಹೋತು ’

ಊಟಕ್ಕೆ ಕುಳಿತಾಗ ಮೆಲ್ಲಗೆ ಮಾತು ತೆಗೆದು ತನ್ನ ಉದ್ದೇಶವನ್ನು ಸಾಧಿಸಿಕೊಂಡಳು. ಅದೇನೊ ಸೋದರಮಾವನ ಮಗನ ಮುಂಜಿವೆಯಂತೆ, ತಾಯಿಯೊಡನೆ ಹೊರಡಬೇಕಾಗಿತ್ತು. ಬೇಡಬೇಡವೆನ್ನುತ್ತ ಕಡೆಗೊಮ್ಮೆ ಕಳಿಸಲು ಒಪ್ಪಿಕೊಂಡನು. ಆದರೆ ಒಂದು ಕರಾರಿನಿಂದ. ಕಾರ್ಯ ತೀರಿದ ಕೂಡಲೆ ಊರಿನಿಂದ ಹಾಗೆಯೇ ಮನೆಗೇ ಬರಬೇಕು. ಹೂಂ. ಕೇಳುವ ದೇನು ಮತ್ತೆ ಇದ್ದುದಲ್ಲೆ ತವರುಮನೆ. ಮನೆಬಿಟ್ಟು ಹೊರಟಕ್ಕೈಲೆ ‘ ನಾಲ್ಕುದಿನ ’ ತವರಮನೆಯೂ ಆಗಲೆಂದುನಿಂತರೆ! ಇತ್ತ ಖಾನಾವಳಿಯ ಕೂಳು ತಿನ್ನುವಗೋಳು ಇವನಿಗೆ. ಮರುದಿನ ಹೋಗುವದೆಂದು ನಿಶ್ಚಯ

ವಾಯಿತು. ಉಡುಗೊರೆಯನ್ನು ನಿಷ್ಕರ್ಷಿಸಿದರು. ಕಚೇರಿಯಿದ್ದುದರಿಂದ ಕಳಿಸಲಿಕ್ಕೆ ಬರಲು ಶಕ್ಯವಿದ್ದಿಲ್ಲ. ಅವಳ ಅಣ್ಣನೇ ಕರೆದೊಯ್ಯಬೇಕು. ನೆರೆಮನೆಯಲ್ಲಿ ಕೀಲಿಯ ಕೈಕೊಟ್ಟು ಹೋಗಬೇಕು. ಗೌಳಿಗನಿಂದ ಹಾಲು ತಕ್ಕೊಂಡಿರುವ ಕೆಲಸವನ್ನಾದರೂ ಅವರಿಗೊಪ್ಪಿಸಬೇಕು.

ಮರುದಿನ ೧೨ ಗಂಟೆಗಾಗಲೇ ಅವಳ ಊಟ ಕೆಲಸಗಳು ತೀರಿದವು. ಸಾಮಾನ ಕಟ್ಟುವದೂ ಅರ್ಧ ತಾಸಿನಲ್ಲಾಯಿತು. ಇನ್ನೂ ಎರಡು ತಾಸು ಹೇಗೆ ಕಳೆಯಬೇಕೆಂದು ವಿಚಾರ ಮಾಡುತ್ತಿರುವಷ್ಟರಲ್ಲಿ ಓದಿ ತಿಳಕೊಳ್ಳುವ ಪ್ರಯತ್ನ ಮಾಡಬೇಕೆಂದು ಮುನ್ನಾದಿನ ಗಂಡನು ಹೇಳಿದ ಮಾತು ನೆನಪಿಗೆ ಬಂತು. ಕಪಾಟಿನಲ್ಲಿ ಹುಡುಕುವಾಗ ಮಾಸಪತ್ರಿಕೆಗೆ ಕಳಿಸ ಬೇಕೆಂದು ಅನುವುಗೊಳಿಸಿದ ಒಂದು ಲೇಖವು ಇವಳ ಕೈಗೆ ಬಿತ್ತು. ಓದಲು ಸುರುವು ಮಾಡಿದಳು.

'ಇಲಾಖೆಯ ವಾರ್ಷಿಕ ವರದಿಯನ್ನು ನೋಡಲಾಗಿ ಹತ್ಯಾಪರಾಧಗಳು ಹೆಚ್ಚಾಗಿವೆಯೆಂದು ಕಂಡು ಬರುತ್ತದೆ. ಅವೆಲ್ಲವುಗಳ ಮೂಲಭೂತ ಉದ್ದೀಪಕವು ಕಾಂತಾ ಇಲ್ಲವೆ ಕನಕವಾಗಿರುತ್ತದೆ. ಅದರಲ್ಲಿಂದ ೧೦೦ ಕ್ಕೆ ೯೦ ರಷ್ಟು ಪ್ರಕರಣಗಳಲ್ಲಿ ವ್ಯಭಿಚಾರವೇ ಕಾರಣವಾಗಿದೆ. ಹತ್ಯಾದೋಷಕ್ಕೆ ಮರಣದಂಡನೆಯನ್ನು ವಿಧಿಸಿದ್ದರೂ ಈ ಕೃತ್ಯಗಳು ಎಂದಿನಿಂದಲೂ ಹಾಗೆಯೇ ನಡೆಯುತ್ತ ಬಂದಿವೆ. ಅದರಲ್ಲಿ ತಾತ್ಕಾಲಿಕ ರೋಷಕ್ಕೆ ಬಲಿಬಿದ್ದ ಉದಾಹರಣೆಗಳು ತೀರ ಕಡಿಮೆ. ಇಂಥ ಪರಿಸ್ಥಿತಿಯಲ್ಲಿ ದೇಹಾಂತ ಶಾಸನ ವನ್ನು ವಿಧಿಸುತ್ತ ಹೋಗುವ ರಾಜಮಾರ್ಗವು ನಡೆವೇ ಇದೆ. ಆದರೆ ಈ ಪ್ರವೃತ್ತಿಯ ಮಾನಸಿಕ ಪೃಥಕ್ಕರಣಮಾಡಿ ಅದರಿಂದ ಹೊರಡುವ ನಿಷ್ಕರ್ಷೆ ಗಳ ದೃಷ್ಟಿಯಿಂದ ಸಮಾಜದ ವಾತಾವರಣದಲ್ಲಿ ಮಾರ್ಪಾಟಾಗುವಂತೆ ಯತ್ನಿಸುವದು ನಿಜವಾದ ಸಮಾಜವಿನೀತರ ಕಾರ್ಯ.

ಹೀಗೆ ವಿಚಾರಮಾಡಲಾಗಿ ಅಪ್ರಿಯವಾದುದಾದರೂ ಒಂದು ಸತ್ಯವು ಒಡೆದು ಕಾಣುವದು 'ಮಾನವನು ನಿಸರ್ಗತಃ ಬಹು ಪತ್ನೀಕನಿದ್ದಾನೆ. ದೇಶಕಾಲ ಪರಿಸ್ಥಿತಿಗನುರೂಪವಾಗಿ ಸಮಾಜವು ಹೇರಿದ ಅನೇಕ ನಿರ್ಬಂಧ ಗಳನ್ನು ಮುಂದೊಗೆದು, ನೀತಿಯ ತತ್ವಗಳ ಸಾವಿರಾರು ವರ್ಷಗಳ

ಬೋಧೆಯ ಸಂಸ್ಕಾರವನ್ನು ಕ್ಷಣದಲ್ಲಿ ಮಣ್ಣು ಗೂಡಿಸುವ ಈ ಪ್ರವೃತ್ತಿಯು ಮಾನವನಲ್ಲಿ ಪ್ರಬಲವಾಗಿ ಇನ್ನೂ ನಿಂತಿದೆ. ಅನುಕೂಲ ಸಂಧಿಯೊದಗಿ, ಸಿಕ್ಕಿ ಬೀಳುವ ಇಲ್ಲವೆ ಶಿಕ್ಷೆಯ ಅಂಜಿಕೆಯನಿಸದಿರುವಾಗ ಈ ಪ್ರವೃತ್ತಿಯು ಯಾವಾಗಲೂ ವಿಜಯಿಯಾಗುವದು. ಸ್ತ್ರೀಯ ತೀರ ಹತ್ತಗಡೆಯ ಸಂಬಂಧಿಕರನ್ನುಳಿದು ಇನ್ನಾರ ನಿಷೇಧವೂ ಅಷ್ಟು ತೀವ್ರವಾಗಿರುವದಿಲ್ಲ; ಅಷ್ಟು ಉಗ್ರವಾಗಿ ವ್ಯಕ್ತವಾಗುವದಿಲ್ಲ. ಸಾರ್ವತ್ರಿಕ, ಸರ್ವಾಂಗೀಣ ಬಹಿಷ್ಕಾರದಲ್ಲಿ ಪರಿಣಮಿಸುವದಿಲ್ಲ. ಹೀಗಿರಲು ಇದು ಮಹತ್ಪಾಪವೆಂದು ಗಣಿಸುತ್ತಲೇ ಇನ್ನೆಷ್ಟು ಯುಗ ಸಾಗುವದು! ಇದು ಪಾಶವೀವೃತ್ತಿಯೆಂದರೂ ಮಾನವನೂ ಅಂಶತಃ ಪಶುವೇ ಇದ್ದಾನೆ, ಶಾರೀರಿಕ ಕ್ಷುಧೆಗಳಿವೆಯೆಂದು ಒಪ್ಪಿಕೊಂಡು ಮುಂದಿನ ಮಾರ್ಗವನ್ನು ಹಿಡಿಯಬೇಡವೇ?

ಸೂಕ್ಷ್ಮವಾಗಿ ಶೋಧಿಸಿ ನೋಡಿದರೆ ವ್ಯಭಿಚಾರ ಜನಿತ ಕ್ರೋಧೋದ್ವೇಗಗಳ ಉಗಮವು, ಗಂಡಸಿನ ಒಡೆತನದ ಭಾವನೆಯಲ್ಲಿದೆ. ಸ್ತ್ರೀಯೊಂದು ವಸ್ತುವು. ಅವನು ಅದರ ಒಡೆಯ. ತಾನು ಅನ್ಯಾಸಕ್ತನಾದರೂ ಹೆಂಡತಿ ತನ್ನವಳು. ತನಗೆ ಬೇಡವಾದರೂ ಮಂದಿಗೂ ಬೇಡ. ಆದೇ ಘಟಸ್ಫೋಟವಾಯಿತೋ-ಒಡೆತನವನ್ನು ಬಿಟ್ಟುಕೊಟ್ಟನೋ-ಯಾವನೊಡನೆ ಕೂಡಿದ್ದರೂ ಸೈ. ಇದಿವನ ವೃತ್ತಿ. ಸಂಸಾರದಲ್ಲಿಯ ತನ್ನ ಒಡೆತನದ ಇತರ ಯಾವ ವಸ್ತುವಿನ ವಿಷಯಕ್ಕೂ ಇಷ್ಟು ಅನುದಾರನಾಗುವದಿಲ್ಲ. ಕಡಕಟ್ಟು ಎನ್ನವನು. ಇನ್ನೊಬ್ಬರಿಗೆ ನೆರವಾಗುವನು. ಅವರ ನೆರವು ತಕ್ಕೊಳ್ಳುವನು. ಇದೊಂದರ ವಿಷಯಕ್ಕೆ ಇಷ್ಟೇಕೆ? ಇನ್ನು, ಸ್ತ್ರೀಯೊಂದು ಸ್ವತಂತ್ರ ವ್ಯಕ್ತಿ, ತನ್ನಂತೆಯೆ ಅವಳಿಗೂ ಆಕಾಂಕ್ಷೆಗಳಿವೆ, ವಿಕಾರಗಳಿವೆಯೆಂದು ಒಪ್ಪಿಕೊಂಡರಂತೂ ಪ್ರಶ್ನೆಯೇ ಉಳಿಯುವದಿಲ್ಲ.

ಈ ಮನಸ್ಸಿನ ಈ ಮುರಿಗೆಯೊಮ್ಮೆ ಬಿಚ್ಚಿದರೆ ತುಸು ಸಡಿಲವಾದರೆ, ಮಕ್ಕಳ ಪೋಷಣದ ಹೊಣೆಗಾರಿಕೆ ಮೊದಲಾದ ಗೌಣಪ್ರಶ್ನೆಗಳನ್ನು ಉಳಿದ ವ್ಯವಹಾರದಂತೆಯೇ ಪರಸ್ಪರರ ಸಮ್ಮತಿಯಿಂದ ನಿರ್ಣಯಿಸುವದು ಸುಲಭವಾದ ಮಾತು. ಈವರೆಗಿನ ಸಮಾಜದ ವೃತ್ತಿಯು ರೋಗನಿದಾನವಿಲ್ಲದೆ ಉಪಚಾರ ಮಾಡುವ ವೈದ್ಯನದಾಗಿದೆ. ರೋಗವಿರುವದೊಂದು, ಔಷಧಿಯೋಜನೆ ಮತ್ತೊಂದರ ಮೇಲೆ.

ಓದಿದ ಕೂಡಲೆ 'ಹೀಗೆ ಬೇರೆ ಇದೆಯೋ ಮತ್ತೆ' ಎಂಬ ಉದ್ಗಾರವು ಅವಳ ಬಾಯಿಂದ ಹೊರಬಿತ್ತು. ಅವಳು ಚಕಿತಳಾದಳು; ಗಾಬರಿಯಾದಳು. ಈ ಸುಬ್ಬಣ್ಣನು ಅವಳಿಗೆ ತೀರ ಅಪರಿಚಿತ. ಅವನ ವಿಚಾರಗಳು ಈ ದಾರಿಯಲ್ಲಿ ನಡೆದಿವೆಯೆಂಬುದು ಅವಳ ಕನಸುಮನಸಿನಲ್ಲಿಯೂ ಬಂದಿರಲಿಲ್ಲ. ಅಂದು ಅವಳು ಊರಲ್ಲಿ ಇರುವದಾಗಿದ್ದರೆ ಮುನ್ನಿನ ದಿನದ ಕಿಂತ ಹೆಚ್ಚಿನ ಜಗಳವಾಗುತ್ತಿತ್ತು. ಒಮ್ಮೆ ಊರಿಗೆ ಹೋಗುವದನ್ನು ನಿಲ್ಲಿಸಿ ಇದರ ನಿಷ್ಕರ್ಷೆಮಾಡಿಕೊಳ್ಳಬೇಕೆನಿಸಿತ್ತು. ಮರುಕ್ಷಣ ಮತ್ತೆ ತಿರುಗಿ ಬಂದ ಮೇಲೆ ನೋಡಲಾದೀತು ಎಂದು ಮಾತಾಡಿದಳು. ಇಷ್ಟರಲ್ಲಿ ಅಣ್ಣನೂ ಕರೆಯಲಿಕ್ಕೆ ಬಂದ. ಇವಳೂ ಹೊರಟಳು.

ಸಂಜೆಯ ಮುಂದೆ ಅಂಗಡಿಯಲ್ಲಿಯೇ ಚಹಕುಡಿದು ವಾಚನಾಲಯದಿಂದ ತನಗೆ ಬೇಕಾದ ಪುಸ್ತಕಗಳನ್ನು ತೆಗೆದುಕೊಂಡು ಸುಬ್ಬಣ್ಣನು ಮನೆಗೆ ಬಂದನು. ನೆರೆಮನೆಯ ವಿಮಲೆಯು ಹಾಲನ್ನು ತಂದಿಟ್ಟು ಹೋದಳು. ಅವನ್ನು ಕಾಸಿಟ್ಟು ತನ್ನ ವ್ಯವಸಾಯದಲ್ಲಿ ತೊಡಗಿದನು. ಮರುದಿನ ಮುಂಜಾನೆ ಸ್ಟೋ ಹೊತ್ತಿಸಿ ಚಹ ಮಾಡಿ ಹಾಲಿಗಾಗಿ ಕೈಹಾಕಿದನು. ಪಾತೇಲಿಯು ಬರಿದಾಗಿತ್ತು. ಎಷ್ಟೆಂದರೂ ಹೆಂಗಸರಷ್ಟು ಲಕ್ಷ ಇಂಥ ಸಂಗತಿಗಳ ಕಡೆಗೆ ಗಂಡಸರಿಗಿರುವದಿಲ್ಲ. ಹಾಲು ಬೆಕ್ಕಿನ ಪಾಲಾಗಿತ್ತು. ಇಷ್ಟರಲ್ಲಿ ಇವನ ಕಿವಿಯ ಮೇಲೆ ಒಂದು ಮೆತ್ತನ್ನ ಮ್ಯಾಂವ್ ಬಂತು. ಬರಿದಾದ ಪಾತೇಲಿಯನ್ನೇ ಎಸೆಯಬೇಕೆಂದು ಅತ್ತ ತಿರುಗಿದನು. ನೋಡಿದ ಕೂಡಲೇ ಅರ್ಧ ಸಿಟ್ಟು ಇಳಿಯಿತು. ಕಪಾಟು ತೆರೆದ ಸದ್ದು ಕೇಳಿ ಪುನಃ ಮತ್ತೇನಾದರೂ ಸಿಗಬಹುದೆಂಬ ಆಶೆಯಿಂದ, ಬೇಡುವ ದೀನ ಸ್ವರದಿಂದ ಒಂದು ಮೋಟನ್ನ ಬೆಕ್ಕಿನ ಮರಿಯು ಇವನೆಡೆಗೆ ಬರುತ್ತಿತ್ತು. ಇಷ್ಟರಲ್ಲಿ 'ಇಲ್ಲಿ ಬಂದಿಯಾ ಖೋಡಿ ಮನೀದ ಸಾಲದs' ಮತ್ತ ಮಂದೀ ಹಾಲಿಗೆ ಬಾಯಿ ಹಾಕಲಿಕ್ಕೆ' ಎಂದು ಅದನ್ನು ಕೈಯಲ್ಲಿ ತಕ್ಕೊಂಡು ವಿಮಲೆಯು ಒಂದು ಅಚ್ಚೆಯ ಪೆಟ್ಟು ಕೊಟ್ಟಳು. ಸುಬ್ಬಣ್ಣನ ಕೈಯಲ್ಲಿಯ ಬರಿಯ ಪಾತ್ರೆಯ ಕಡೆಗೆ ಅವಳ ದೃಷ್ಟಿ ಹೋಯಿತು. "ಅಯ್ಯಯ್ಯ! ಎಲ್ಲಾ ಕುಡದ ಬಿಟ್ಟsದಲ್ಲರಿ. ನಿಂದರ್ರಿ. ನಮ್ಮ ಮನ್ಯಾಗಿನ ಹಾಲು ತಂದು ಕೊಡತೇನಿ. ಖೋಡೀ, ನೋಡಲ್ಲೆ ಹೀಂಗ ಮಾಡಿದರ ಎನು ಮಾಡಬೇಕು ಅವರು! ನಡೀ ಮನೀಗೆ

ನಿನಗ ತೋರಿಸತೇನಿ" ಎಂದು ಮರಿ ಸಹಿತ ಹೊರಟಳು. "ಅಷ್ಟೇನು ನಿಮಗ ತ್ರಾಸು ಬೇಡ, ನಾನಿಲ್ಲೇ ಅಂಗಡಿಗೆ ಹೋಗಿ ಕುಡೀತೇನೆ" ಎಂದ ಸುಬ್ಬಣ್ಣ. "ಅದ್ಯಾಕಂತೊ, ನಮ್ಮ ಹಾಲಿನ ಚಹಾ ಕಹಿ ಹತ್ತದೇನ ಮತ್ತ ?" ಎಂದಳು. ನಿರುಪಾಯನಾಗಿ ಅವನು ಒಪ್ಪಿಕೊಂಡನು. ಹಾಲು ಬಂತು. ಎರಡು ಕಪ್ಪಿನಲ್ಲಿ ಚಹಾ ಹಾಕಿ ವಿಮಲೆಯ ಮುಂದೊಂದು ಕಪ್ಪ ಇಟ್ಟನು. "ಬೇಡ, ಇದೇ ಈಗ ಮನೆಯಲ್ಲಿ ಆಗಿದೆ" ಎಂದಳು. "ಯಾಕೆ ನಮ್ಮ ಚಹಾ ಕಹೀ ಇದ್ದರೂ ನಿಮ್ಮ ಹಾಲು ಹಾಕಿದ್ದರಿಂದ ಸಿಹಿ ಯಾಗಿದೆ" ಎಂದ ಸುಬ್ಬಣ್ಣ.

ತನ್ನ ಬಾಣ ತನಗೇ ಇಷ್ಟು ಬೇಗನೆ ತಿರುಗಿದ್ದನ್ನು ಕಂಡು ಸುಮ್ಮನೇ ಕುಡಿಯತೊಡಗಿದಳು.

'ಆ ಮರಿಗೇನು ಫಾಶೀ ಕೊಟ್ಟಿರೋ ಏನು ಕತ್ತಲೀಕೋಣೆ ಶಿಕ್ಷಾನೋ ?'

ಇದನ್ನು ಕೇಳಿ ವಿಮಲೆಯು ನಕ್ಕಳು. 'ಬೆಕ್ಕಿಗೆ ಶಿಕ್ಷಾ ಕಲಿಸಿ ಯಾರು ಪೂರೈಸಾರು ಹಾಂಗ ಅದು.'

'ಹಾಗಾದರೇನು ನನ್ನ ಸಮಾಧಾನಕ್ಕಾಗಿ ಹಾಗೆಂದಿರೋ, ಸಣ್ಣ ಹುಡುಗರಿಗೆ ಹೇಳಿದಂತೆ 'ಹತ್' ಮಾಡುತ್ತೇನೆಂದು.'

'ಅದೇನೋ ಅಂತಾರಲ್ಲಾ. ಬರೆಯುವರ ಜೋಡಿಗೆ ಓದುವವ ರಿಗೆ ಓಡೆಂದರಂತ ಆ ವಿಚಾರ. ನಿಮ್ಮ ಜೋಡಿ ಮಾತಾಡಿ ಯಾರು ಗೆದ್ದಾರು! ನೋಡಿರಿ. ಬೆಕ್ಕಿನ ಜಾತಿ ಅದು. ಮನ್ಯಾಗ ಹೊಟ್ಟೆತುಂಬ ಹಾಲು ಹಾಕಿದರೂ ಮತ್ತ ಮಂದೀ ಮನ್ಯಾಗ ಕಳವಿಲೆ ಬಾಯಿ ಹಾಕೋದೇ. ಬೆಕ್ಕಿನೆಂಜಲ, ಹಕ್ಕೀ ಎಂಜಲ ಎರಡೂ ಒಂದೇ ಅನ್ನೋದೆ; ಹಾಗೆ ಬಳಸೋದೇ.'

ಇಷ್ಟರಲ್ಲಿ ಮನೆಯಿಂದ ಕರೆ ಬಂದದ್ದರಿಂದ ವಿಮಲೆಯು ಹೋದಳು. ಹೋಗುವ ಮೊದಲು ಇವನ ಲೇಖನ ಶೈಲಿಯನ್ನು ಬಾಯಿತುಂಬ ಹೊಗಳಿ ಓದಲಿಕ್ಕೆಂದು ಒಂದು ಮಾಸಪತ್ರಿಕೆಯನ್ನು ಒಯ್ದಳು.

ತನ್ನ ಹೆಂಡತಿಯನ್ನು ವಿಮಲೆಯೊಡನೆ ಹೋಲಿಸಿ ನೋಡಿದನು. ಈ ಹುಡುಗೆಯು ಮಾತಿನಲ್ಲಿ ಎಷ್ಟು ಚುರುಕು. ಬುದ್ಧಿಯಿಂದೆಷ್ಟು ಚಾಣಾಕ್ಷ.

ವಿಚಾರಸರಣಿಯೂ ಎಷ್ಟು ಸಹಜ-ಸರಲವಾದದ್ದು. 'ಬೆಕ್ಕಿನ ಜಾತ್ಯದು. ಮುನ್ಯಾಗ ಹೊಟ್ಟಿತುಂಬಾ ಹಾಲು ಹಾಕಿದರೂ ಕಳವಿಲೆ ಬಾಯಿ ಹಾಕೋದೇ. ಬೆಕ್ಕಿನೆಂಜಲ. ಹಕ್ಕಿ ಎಂಜಲ.' ಮನುಷ್ಯನು ಬೆಕ್ಕಿನ ಮರಿಯಂತೆ ಎಂದರೆ, ಕೂಡಲೇ ಹೊಳೆಯಿತು ಇವನಿಗೆ. ಆ ರೂಪಕವನ್ನು ಸೇರಿಸಿ ಇನ್ನೊಂದು ಪ್ಯಾರಾ ಬರೆದಿಟ್ಟನು. ಇತ್ತ ವಿಮಲೆಗೆನಿಸಿತು 'ಇವರ ಸ್ವಭಾವವಾದರೂ ಎಷ್ಟು ಸರಲ. ಇಷ್ಟು ದೊಡ್ಡ ಲೇಖಕರಾದರೂ ತೀರ ನಿಗರ್ವಿ. ಎಷ್ಟು ಆಗ್ರಹದಿಂದ ತಾವು ಸ್ವತಃ ಮಾಡಿದ ಚಹಾ ಕೊಟ್ಟರು. ವ್ಯಾಸಂಗವಾದರೂ ಎಷ್ಟು. ಪ್ರತಿಯೊಂದು ಮಹತ್ವದ ಸಾಮಾಜಿಕ ಪ್ರಶ್ನೆಯ ಮೇಲೆ ಇವರದೊಂದು ಲೇಖವಿದ್ದೇ ಇದೆ. ಪ್ರತಿಯೊಂದು ಶಾಸ್ತ್ರದಲ್ಲಿಯೂ ಇವರ ಗತಿ.'

ಅತ್ತ ಸರಸಕ್ಕನ ಮನಸಿನಲ್ಲಿ ಬಿದ್ದ ಸಂಶಯದ ಬೀಜವು ಭರದಿಂದ ಬೆಳೆಯತೊಡಗಿತು. ಎಂದು ತಿರುಗಿ ಊರಿಗೆ ಹೋಗುವೆನೋ ಎನಿಸಹತ್ತಿತು. ಎಲ್ಲರೂ ನಗುತ್ತ ಕೆಲೆಯುತ್ತಲಿದ್ದಾಗ ಇವಳು ಹೀಗೆ ವಿಮನಸ್ಕಳಾಗಿದ್ದುದನ್ನು ಕಂಡು 'ಅಕ್ಕಿದ್ದರೆ ಗಂಡನನ್ನೂ ಕರಕೊಂಡು ಬರಬೇಕಿತ್ತು. ಇಲ್ಲನೆ ನಡೆ. ಈಗೊಂದು ಗಾಡಿಯದೆ. ಟಿಕೀಟ ತೆಗೆದು ಕೂಡಿಸಿ ಬರುವೆ' ನೆಂದು ಅವಳ ತಮ್ಮನು ಚೇಷ್ಟೆ ಕೂಡ ಮಾಡಿದನು. ನಿರ್ವಾಹವಿಲ್ಲದೆ ಎಲ್ಲರೂ ಹೊರಡುವವರೆಗೆ ನಿಂತಳು. ಎಲ್ಲರ ಕೂಡ ಹೊರಟಳು. ಗಾಡಿಯಲ್ಲಿ ಯಾವ ರೀತಿಯಿಂದ ತನ್ನ ಸಂಶಯವನ್ನು ನಿವಾರಣ ಮಾಡಿಕೊಳ್ಳಬೇಕೆಂದು ವಿಚಾರಮಾಡಹತ್ತಿದಳು. ಪ್ರಶ್ನೆಯೇನು ಸುಲಭವಲ್ಲ. ಊಟಹೋಗದ್ದನ್ನು ಕಂಡು ಅಂಗಡಿಯಲ್ಲಿ ಫರಾಳವಾಗಿದೆಯೇನು ಎಂದು ಕೇಳುವಂತಹದಲ್ಲ. ಮೊನ್ನೆ ಕೇಳಿದಂತೆ ಹೀಗೆ ಏಕೆ ಬರೆದಿರುವಿರೆಂದು ಎದುರಾ ಎದುರು ಕೇಳುವಂತಹದಲ್ಲ. ಹಾಗಿದ್ದರೆ ಮದುವೆಯೇಕಾದಿರೆಂದು ಕೇಳಸದೇ? ಊಂ. ಹೂಂ. ಆದೂ ಬಗೆಹರಿಯದು. ವಿಚಾರ ಮಾಡಿದಂತೆ ಅವಳಿಗೆನಿಸಹತ್ತಿತು, ಬೀದಿಯಿಂದ ಹೋಗುವ ದೆವ್ವನನ್ನು ಮನೆಹೊಗಿಸಿಕೊಂಡಂತಾಯಿತೆಂದು

ಒಂದು ವೇಳೆ ಸಂಶಯವು ನಿರಾಧಾರವಾಗಿದ್ದರೆ ಕೊನೆಯವರೆಗೂ ಅದರ ನಿರಸನವಾಗುವಂತಿಲ್ಲ. ಆಜನ್ಮ ಮನದಲ್ಲಿ ಕುದಿಯುತ್ತಿರುವದು, ಉಡಿಯಲ್ಲಿ ಕೆಂಡವಿಟ್ಟುಕೊಂಡಿರುವದು. ಅದಕ್ಕಿಂತ ಸಿಕ್ಷಿತವಾಗುವದು, ಅಪರಾಧ ಸಿದ್ಧವಾಗುವದು ಹತ್ತುಪಾಲಿಗೆ ಬೇಕು. ಹಾಗೆ ಆದರೂ-

ಆ ವಿಚಾರ ಬಂದ ಕೂಡಲೆ ಮೈ ಜುಮ್ಮೆಂದಿತು. ಹೀಗೆಯೇ ಮನವು ಹೊಯ್ದಾಡುತ್ತಿರುವಾಗ ಊರು ಸಮೀಪ ಬಂದುದರ ಪರಿವೆಯೇ ಇಲ್ಲ ಅವಳಿಗೆ. ತಮ್ಮನೇ ಎಚ್ಚರಿಸಿದನು. "ಇನ್ನಾರೆ ಒಂದಿಷ್ಟು ಮೋರೀಮ್ಯಾಲೆ ನಗಿಮೂಡಲಿ. ಅರ್ಧಾತಾಸಿನೊಳಗ ಗಂಡನ ಮೋರೀ ನೋಡತೀದಿ. ಏನು ಕಾಳಜೀ ಮಾಡಬ್ಯಾಡ" ಎಂದು.

ಮೊದಲೇ ಗೊತ್ತಾದ ಮೇರೆಗೆ ಅವಳು ಮನೆಗೇ ಹೋಗಬೇಕು. ರಾತ್ರಿಯ ಹೊತ್ತು, ತಮ್ಮನನ್ನು ಸಂಗಡ ಕರೆದುಕೊಂಡು ಹೋಗೆಂದು ತಾಯಿಯು ಹೇಳಿದಳು. 'ಯಾತಕ್ಕ, ಶಹರದ ಊರು, ರಸ್ತೇಕ್ಕೆ ಮನಿ ಅದ ಬ್ಯಾಡ' ಅಂದಳು. ಟಾಂಗಾ ಗೊತ್ತು ಮಾಡಿಕೊಂಡು ಹೊರಟಳು. ಮನೆಗೆ ಬಂದಳು. ಇವಳು ಮೊದಲು ಇಳಿದು ಪಾವಟಿಗೆ ಹತ್ತಿ ಬಂದಳು. ಬಾಗಿಲಿಗೆ ಬಂದು, ಚಿಲಕ ಸಪ್ಪಳ ಮಾಡಬೇಕೇ, ಬಾಗಿಲ ಬಡಿಯಬೇಕೇ ವಿಚಾರ ಮಾಡುತ್ತ ನಿಂತಳು. ಟಾಂಗೆಯವನು ಸಾಮಾನವನ್ನೆಲ್ಲ/ಎತ್ತಿ ಇಳಿಸ ಹತ್ತಿದನು. ಆದಾದ ಮೇಲೆ ಅವನು ಇವಳ ಸಹಾಯಕ್ಕೆ ಬರಬಹುದು 'ರಾವಸಾಬ, ರಾವಸಾಬ'ಎಂದು ಒದರಿ ಎಬ್ಬಿಸಲಿಕ್ಕೆ. ಹಾಗೆಯೇ ಸುಮ್ಮನೆ ನಿಂತಿದ್ದಳು. ಕಣ್ಣು, ಇಳಿಸುತ್ತಿದ್ದ ಸಾಮಾನಿನ ಮೇಲಿದ್ದರೂ ಕಿವಿಯೆಲ್ಲ ಮನೆಯ ಒಳಗಿನ ಸದ್ದಿನ ಕಡೆಗೇ. ಎಚ್ಚತ್ತಿದ್ದ ಲಕ್ಷಣವೇನಾದರೂ ಕಂಡು ಬಂದೀತೆಂದು ಮೊದಲೇ ಸಿಟ್ಟುಬಂದಿತ್ತು. ಇವಳ ಸ್ವಾಗತಕ್ಕಾಗಿ ಅವನೇನು ಎಚ್ಚರದಿಂದಿದ್ದು ಬಾಗಿಲ ತೆರೆದಿಡಬೇಕಾಗಿತ್ತೋ ಏನೊ! ಇಷ್ಟರಲ್ಲಿ ಅವಳ ಕಿವಿಯ ಮೇಲೆ ಮನೆಯೊಳಗಿಂದ ಬಳೆಗಳ ಸಪ್ಪಳ ಬಂದಿತು. ಎದೆ ಧಸ್ಸೆಂದಿತು. ಸಿಡಿಲುಬಡಿದಂತಾಯಿತಿವಳಿಗೆ. ಸಾಮಾನು ಇಳಿಸುತ್ತಿದ್ದ ಬಂಡಿಯವನಿಗೆ ಪುನಃ ಸಾಮಾನು ಇಡಹೇಳಿ ತವರಮನೆಗೆ ಟಾಂಗಾ ಹೊಡೆ ಯೆಂದಳು ಟಾಂಗಾದವನಿಗೆ ದಿಗಿಲುಬಿತ್ತು. ಆದರೂ ಸ್ಪಷ್ಟವಾಗಿ ಹೇಳಿದ ನಂತರ ರೊಕ್ಕ ಕೊಡುವವರ ಕೂಡ ವಾದಿಸುವದೇ ಮತ್ತೊಂದು ಬಾಡಿಗೆ ಹೆಚ್ಚಾಯಿತೆಂದನು. ಅವಳು ಹೇಳಿದಲ್ಲಿಗೆ ಒಯ್ದು ಇಳಿಸಿದನು. ಅವನ ಬಾಡಿಗೆಯನ್ನು ಹೊರಗೇ ಕೊಟ್ಟು ಇವಳು ಮನೆಸೇರಿದಳು. 'ಯಾಕೆ ಇಲ್ಲಿಗೇ ಬಂದೆ' ಎಂದು ಇವಳ ತಮ್ಮನು ಕೇಳಿದನು. 'ಮನೇ ಕೀಲೀ ಹಾಕಿತ್ತು. ಎಲ್ಲಿ ನಾಟಕಕ್ಕೆ ಹೋಗಿರುವರೋ ಏನು ಮತ್ತೆಲ್ಲಿ ಊಗೆ

ಹೋಗಿರುವರೋ!!' ಎಂದಳು. ಸಹಜವೆನಿಸಿತು. ಮಾತು ಅಷ್ಟಕ್ಕೆ ಮುಗಿಯಿತು.

ನಾಲ್ಕು ದಿನವಾಯಿತು; ಎಂಟು ದಿನವಾಯಿತು. ತಾಯಿಯೇ ಒಮ್ಮೆ ಅಂದಳು. 'ನೋಡವ್ವಾ, ಮತ್ತ ನಿನ್ನ ಗಂಡ ಸಿಟ್ಟಾಗ್ಯಾನು!' ಅದಕ್ಕವಳು ಸುಮ್ಮನೇ ಇದ್ದಳು. ತಮ್ಮನು ಪೇಟೆಗೆ ಹೋದಾಗ ಸುಬ್ಬಣ್ಣನು ಭೆಟ್ಟಿಯಾದನು. ಔಪಚಾರಿಕ ಮಾತುಗಳಾದ ಮೇಲೆ ಅವನೇ ಕೇಳಿದನು 'ನಾವು ಊರಿಗೆ ಬಂದ ದಿನ ರಾತ್ರಿ ಎಲ್ಲಿ ಹೋಗಿತ್ತು ರಾಯರ ಸ್ವಾರಿ ಕೀಲೀಹಾಕಿಕೊಂಡು?' ಸುಬ್ಬಣ್ಣನು 'ಎಲ್ಲಿಯೂ ಇಲ್ಲ. ಮನೆಯಲ್ಲಿಯೇ ಇದ್ದೆ' ಎಂದ. 'ಮತ್ತೆ ಹಾಗೇಕೆ ಹೇಳಿದಳು ಅಕ್ಕ!' ಎಂದು ಕೇಳಿದನು. 'ಇಬ್ಬರನ್ನೂ ಸಿಕ್ಕಿಸಿ ತನ್ನ ಮನಸ್ಸಿನಂತೆ ನಡೆಯುವ ಅವಳ ಹಂಚಿಕೆಯಲ್ಲದೆ ಮತ್ತೇನು? ಆಗಲಿ ಪ್ರಾಯಶ್ಚಿತ್ತ! ನಾನೂ ಕರೆಯುವದೇ ಇಲ್ಲ.'

ಮನೆಗೆ ಬಂದು ಸರಸಕ್ಕನಿಗೆ ಇದನ್ನು ತಿಳಿಸಿದನು. ಅವಳಂದಳು. 'ನೆವಕ್ಕ ನಿಂತಾರ ಅವರು, ಅವರಿಗೆ ನನ್ನ ಗರಜಿಲ್ಲದ ಮುಖ್ಯ, ಆಗಲಿ ಬಂದದ್ದನ್ನು ಭೋಗಿಸಲಿಕ್ಕೆ ನಾನೂ ಗಟ್ಟಿ ಇದ್ದೇನಿ'

ಇದನ್ನೆಲ್ಲ ಕಂಡು ಅವನಿಗೇನೊ ಒಂದು ಗೂಢವಿದೆಯೆನಿಸಿತು. ಕಡ್ಡಿಯೆ ಗುಡ್ಡವಾಗಿರಬೇಕು. ಇವಳ ಹಟಮಾರಿ ಸ್ವಭಾವವು ಇವಳ ತಲೆ ತಿನ್ನುತ್ತಿರಬೇಕು. 'ಹೊರಡೆಂ'ದು ಅವಳನ್ನು ಗಂಡನ ಮನೆಗೆ ಅಟ್ಟಿ ಬರುವದೇ! ಊಂ. ಹೂ. ಕೆಲದಿನ ನೋಡಬೇಕು. ಬೀಗ ತಾನಾಗಿ ಹಾದಿಗೆ ಬರಬಹುದು. ಆಗ ಕರೆತಂದು ಇಬ್ಬರನ್ನು ಎದುರುಬದಿರು ನಿಲ್ಲಿಸಿ ನಿಷ್ಕರ್ಷೆ ಮಾಡಿಕೊಳ್ಳಬೇಕೆಂದು ಯೋಚಿಸಿ ಸುಮ್ಮನಿದ್ದನು.

೧-೧॥ ತಿಂಗಳು ಹೋಯಿತು. ಮರುದಿನ ನಾಗರ ಪಂಚಮಿ. ಇದ್ದೂರಲ್ಲಿ ಇದ್ದು ಹಬ್ಬದ ದಿವಸ ಬೀಗನನ್ನು ಖಾನಾವಳಿಗೆ ಹೋಗಗೊಡುವದೇ! ತಮ್ಮನು ಔತನಕೊಟ್ಟು ಬಂದು ಮನೆಯಲ್ಲಿ ತಿಳಿಸಿದನು. ಅಕ್ಕನಿಗೆ ಈ ಮಾತು ಹೇಳಿದಾಗ ಅವಳ ಮುಖ ಪೆಚ್ಚು ಬಿದ್ದಿತು. ಅವಳಿಗನಿಸಿತು 'ಈವರೆಗೂ ಕರೆಯ ಬರುವ ಸುದ್ದಿಯೇ ಇಲ್ಲದ್ದರಿಂದ ಗಂಡನೂ ಹಟಕ್ಕೆ ಬಿದ್ದದ್ದು ಒಳಿತೇ ಆಯಿತು. ಯಾವುದರ ವಾಚ್ಯತೆಯೂ ಆಗುವ ಅಗತ್ಯವಿಲ್ಲ! ಸುಬ್ಬಣ್ಣನು ಮನೆಗೆ ಬರಲೊಪ್ಪಿದನೆಂದ ಮೇಲೆ ಆ ಬಿಗುವು ಕಡಿಮೆಯಾದಂತಾಯಿತು. ಸಹಜವಾಗಿ ಅತ್ತೆಯಮನೆಗೆ ಹೋಗುವ ಪ್ರಸ್ತಾಪ

ಯಾರಿಂದಲಾದರೂ ಹೊರಡುವದೇ, ಅದರಲ್ಲಿನ್ನು ಶ್ರಾವಣಮಾಸ ಬೇರೆ! ಗೌರಿ-ಗಂಗಿ ತನ್ನ ಮನೆಯಲ್ಲಿ ಮಾಡಬೇಕು ಎನ್ನುವರವರು. ಇವಳಿಗೋ ಗಂಗಾಪ್ರವೇಶವಾದ ಮನೆಯಲ್ಲಿ ಗೌರಿಯ ಪೂಜೆ ಬೇಡಾಗಿತ್ತು. ಇದು ಹಾಗೇ ಎಷ್ಟುದಿನ ನಡೆಯಬಹುದೆಂಬುದರ ವ್ಯಾವಹಾರಿಕ ದೂರದೃಷ್ಟಿ ಅವಳಿಗಿರಲಿಲ್ಲ. ಇನ್ನೂ ಚಿಕ್ಕವಳು. ಆದ್ದರಿಂದಲೇ ಗಂಡನ ಬರವಿನ ಸುದ್ದಿಯು ಇವಳನ್ನು ಗೊಂದಲದಲ್ಲಿ ಕೆಡವಿತು. ಎಂದೋ ಎಂಬಿದ್ದ ಮರಣ ಮರುದಿನನೇ ಬಂದಂತೆ.' ಸುಬ್ಬಣ್ಣನಿಗೆ ಇವಳ ಮನಸ್ಥಿತಿಯ ಯಾವ ಕಲ್ಪನೆಯೂ ಇಲ್ಲ. ಒಪ್ಪಿಕೊಂಡಂತೆ ಹೆಂಡತಿಯು ಮನೆಗೇ ಬರದಿದ್ದರ ಸಿಟ್ಟೊಂದಿತ್ತು. ಆದರೆ ಅದನ್ನೇನು ಬೀಗನ ಮುಂದೆ ಒಡನುಡಿಯುವದೇ, ಒದರಾಡುವದೇ, ತಾನು ಮಾತ್ರ ಕರೆಯಲಿಕ್ಕಿಲ್ಲ ಅವಳೇ ಬಂದೆನೆಂದಾಗ ಕಿವಿ ಹಿಂಡಿ ಬುದ್ಧಿ ಕಲಿಸಬೇಕೆಂದು ಮಾಡಿದ್ದನು. ಯಥಾ ಪ್ರಕಾರ ಮುಂಜಾನೆ ಫರಾಳದ ಹೊತ್ತಿಗೆ ಬಂದನು. ಅಥವಾ ಬಂದಾಗ ಫರಾಳದ ಹೊತ್ತಾಯಿತೆನ್ನಿರಿ. ಒಂದರ್ಧ ತಾಸು ಅತ್ತಿತ್ತಿನ ಹರಟೆಯಾಯಿತು. ಸ್ನಾನದ ಸಿದ್ಧತೆಯಾಗಿದೆಯೆಂದು ಒಳಗಿನಿಂದ ವರದಿ ಬಂತು. ಇವನು ಸ್ವಲ್ಪ ಹೊತ್ತಿನ ಮೇಲೆ ಎದ್ದು ಬಚ್ಚಲ ಮನೆಯ ಕಡೆಗೆ ಹೋದನು. ಬಾಗಿಲವಿಕ್ಕಿತ್ತು. ಒಳಗೆ ಬಳೆಯ ಸಪ್ಪಳ ಕೇಳಿಸಿತು. ತನಗೆ ತಡವಾದ್ದರಿಂದ ಮತ್ತಾರಾದರೂ ಮೈ ತೊಳೆಯಲು ಇಳಿದಿರಬಹುದೆಂದು ತಿಳಿದು ತಿರುಗಿ ಕುಳಿತ ಕೋಣೆಗೆ ಹಾಗೇ ಬಂದನು. ಇವನ ಬೀಗನು ಕೇಳಿದ 'ಯಾಕ, ಹಾಗೇ ಬಂದಿರಿ' ಎಂದು. ಇವನೂ ಕಾರಣವನ್ನು ಹೇಳಿದನು. ಬೀಗನು ಒಳಗೆ ಹೋಗಿ ತಪಾಸು ಮಾಡಿದನು. ಯಾರೂ ಬಚ್ಚಲದಲ್ಲಿಲ್ಲ. ಹೆಣ್ಣು ಮಕ್ಕಳೆಲ್ಲರೂ ಒಂದಿಲ್ಲೊಂದು ಕೆಲಸದಲ್ಲಿ ತೊಡಗಿ ಅಲ್ಲೇ ಇದ್ದರು. ಬಚ್ಚಲಮನೆಯ ಬಾಗಿಲ ತೆರೆದು ನೋಡಿದನು. ಯಾರೂ ಇರಲಿಲ್ಲ. ಮಳೆಗಾಲದಲ್ಲಿ ಬೆಚ್ಚನ್ನ ಒಲೆಯ ಬೂದಿ, ಕೆಂಡ ಕೆದರಿ ಕಾಯಲಿಟ್ಟ ಹಾಲು ಇವೆರಡಕ್ಕೆ ಲುಬನಾದ ಬೆಕ್ಕಿನ ಮರಿಯೊಂದು ಮಾತ್ರ ಇತ್ತು. ಇವನು ಬಂದಕೂಡಲೇ ಇವನಾವರೂ ತನ್ನಪಾಲಿಗೆ ಅನ್ನದಾತನಾಗಬಹು ದೆಂಬಾಶೆಯಿಂದ ಎದ್ದು, ಮೈಯೊಡ್ಡಿ ಮುರಿದು ಮೆಂವ್, ಮೆಂವ್ ಎನ್ನುತ್ತ ಇವನ ಬಳಿಗೆ ಬಂದು ಇವನ ಕಾಲಿಗೆ ಮೈತಿಕ್ಕಿತು. ಇವನು ನೆಟ್ಟಗೆ ಹೋಗಿ

ನೀರು ಹವಣಿಯಿದ್ದದ್ದು ನೋಡಿ ಹಾಗೇ ತಿರುಗಿ ಹೋದನು. ಮರಿಯು ನಿರಾಶವಾಗಿ ಮಾರ್ಜಾಲಧ್ಯಾನ ಮಾಡುತ್ತ ಕಣ್ಣುಮುಚ್ಚಿ ಪುನಃ ಒಲೆಯ ಮುಂದೆ ಹೋಗಿ ಕುಳಿತುಕೊಂಡಿತು.

‘ಯಾರೂ ಇಲ್ಲ. ನೀರು ತೋಡಿಟ್ಟಿದೆ ಸ್ನಾನಕ್ಕೆ ನಡೆಯಿರಿ’ ಎಂದು ಹೊರಡಿಸಿದನು. ಇತ್ತ ಒಳಗೆ ಹೋಗಿ “ಸರಸಕ್ಕ, ನಿನ್ನ ಯಜಮಾನರು ಕರೀತಾರ ನಡಿ. ನಿನ್ನ ಸವತಿಗೆ ಸುರಗೀ ಎರೀಬೇಕಂತ” ಎಂದು ಅಕ್ಕನನ್ನು ಎಳೆತಂದು ತೋರಿಸಿದನು.

“ಬಿಡೋ, ಇಲ್ಲದ್ದ ಏನಾರೆ ಚ್ಯಾಷ್ಟಿ ಮಾಡಬ್ಯಾಡ’ ಎಂದು ತಾಯಿಯು ಸಿಟ್ಟು ಮಾಡಿದಳು. ‘ಏನದು, ಏನದು’ ಎಂದು ಸುಬ್ಬಣ್ಣನು ಕೇಳಿದರೆ ‘ಏನಿಲ್ಲ’ವೆಂದು ಹೇಳಿ ನಗುತ್ತ ಕೈಬಿಟ್ಟನು. ಆ ಮೇಲೆ ಮಧ್ಯಾಹ್ನದ ಊಟಕ್ಕೆ ಕುಳಿತಾಗ ಪುನರಾವೃತ್ತಿಯಾಯಿತು. ಬೆಕ್ಕಿನ ಮರಿಯು ಬಂದು ಸುಬ್ಬಣ್ಣನ ಹತ್ತರ ಮಣೆಯ ಮೇಲೆ ಕೂತುಕೊಂಡಿತು. ‘ಸರಸಕ್ಕ, ಅಲ್ಲಿ ನೋಡು ನಿನ್ನ ಸವತಿನ್ನ ಮದಿವ್ಯಾಗ ನೀ ಇನ್ನೂ ಹತ್ತೀಲಿನ ಮಣೀ ಮ್ಯಾಲೆ ಕೂಡಲಿಕ್ಕೆ ನಾಚತಿದ್ದಿ. ಇದು ನೋಡು ಹ್ಯಾಂಗ ಅವರ ಮಣೀ ಮ್ಯಾಲ ಹೋಗಿ ಕೂತದ. ಈಗ ಇವರು ತುತ್ತು ಹಾಕತಾರ ಹೆಸರ ಮಾತ್ರ ಚಿತ್ರಗುಪ್ತರದು ತೊಗೋತಾರ. ಸುಬ್ಬಣ್ಣಾ, ಭಾಳ ಪ್ರೀತಿ ಕಾಣಸತದ ನಿಮ್ಮದು. ಕರಕೊಂಡು ಹೋಗಿ ಬಿಡಿರಿ ಈ ಸವತಿನ್ನ. ಸೊಕ್ಕು ಮುರೀಲಿ ಈ ಸರಸಕ್ಕನದು” ಎಂದನು.

‘ಅವರೇನು ಅನುಮಾನ ಮಾಡತಾರಂತ ತಿಳಿದೀಯೇನು. ಮೊನ್ನಿನ ಲೇಖದಾಗ ಅವರು ಸಿದ್ಧಾಂತ ಇಟ್ಟಾರ ಮನುಷ್ಯನು ನಿಸರ್ಗತಃ ಬಹುಪತ್ನೀಕನಿದ್ದಾನೆ’ ಅಂತ.

‘ಹೌದೇನರಿ, ಸುಬ್ಬಣ್ಣಾ. ಹಾಂಗಿದ್ದರ ಹೊಡಿಸಿಬಿಡಿರಿ ಹೋಗಲಿ ಒಮ್ಮೆ. ಇನೇ ಮದಿವಿ ಎಕ್ಕೀ ಗಿಡಕ್ಕ ಜೋಡಿ ಮಾಡತಾರಂತ, ಇನೇದ್ದು ಬೆಕ್ಕಿನ ಮರೀ ಜೋಡಿ ಆಗಲಿ!’

‘ಚ್ಯಾಷ್ಟಿ ಇರಲಿ. ಅಲ್ಲರಿ, ಸುಬ್ಬಣ್ಣಾ, ಆ ಲೇಖದಾಗಿನ ನಿದಾನ, ವಿಧಾನ ಎಲ್ಲಾ ವಿಚಿತ್ರ ಕಾಣಸತಾವೆ. ಎಷ್ಟರಮಟ್ಟಿಗೆ ಸತ್ಯ ಅವೆ!’

ಸುಬ್ಬಣ್ಣ:—ಎಷ್ಟರಮಟ್ಟಿಗೆ ಅಂದರ! ಸಂಪೂರ್ಣ ಸತ್ಯ. The 'Analyst' ಅಂಬೋ ಅಮೇರಿಕನ್ ಪತ್ರಿಕೆ ನೋಡಿರಿ ಫೆಬ್ರುವರೀದು. ಅಣ್ಣ 'ಅದ ಅಂತೇನಿ ನಾನೂ. ಇಂಥಾ ವಿಚಾರ ನಿಮ್ಮ ತಲ್ಯಾಗ ಹ್ಯಾಂಗ ಬಂದ್ವೂ? ಅಂತ.' ಹೀಗೆ ಹರಟೆಯೊಡನೆ ಊಟ ಸಾಗಿತು.

ಇತ್ತ ಇದನ್ನೆಲ್ಲಾ ಕೇಳಿದ ಸರಸಕ್ಕನಿಗೊಂದು ಹೊಸ ವಿಚಾರ ಹೊಳೆಯಿತು

ಅಣ್ಣನು ಸವತಿ, ಸವತಿ ಎಂದು ಚೇಷ್ಟೆ ಮಾಡಿದ್ದು ನಿಜವಾಗಿಯೂ ಹಾಗೆಯೇ ಆಗಿರಬಹುದೇ. ಸುಬ್ಬಣ್ಣನಿಗೆ ಬಳೇ ಸಪ್ಪಳ ಕೇಳಿ ಕಲ್ಪನೆ ಯಾದಂತೆಯೇ ತನ್ನದೂ ಆಗಿರಬಹುದು ಎನಿಸಿತು. ನೆರೆಮನೆಯ ಚಿಕ್ಕಿನ ಮರಿಯ ಕೊರಳಲ್ಲಿ ಬಳೇ ಇದ್ದದ್ದು ನೆನಪಿಗೆ ಬಂತು. ಲೇಖ ಓದಿ ದೂಷಿತ ಮನವಾದ್ದರಿಂದಲೇ ತನಗೆ ಹಾಗೆ ಗ್ರಹವಾಗಿರಬೇಕು ಆಯಿತು. ಸಂಶಯದ ಪಟಲವು ಎಷ್ಟು ತೀವ್ರ ಬೆಳೆದಿತ್ತೋ ಅಷ್ಟೇ ತೀವ್ರವಾಗಿ ಸರಿದುಹೋಯಿತು.

ಸಂಜೆಯ ಮುಂದೆ ತಮ್ಮನಿಗೆ ಟಾಂಗಾ ತರಲಿಕ್ಕೆ ಹೇಳಿದಳು ಮನೆಗೆ ಹೋಗಬೇಕಾಗಿದೆಯೆಂದು. ಅದನ್ನು ಕೇಳಿದ ಸುಬ್ಬಣ್ಣನು 'ಯಾಕೆ ಬಾಯೀಸಾಹೇಬರಿಗೆ ಇಷ್ಟು ಲಗೂನ ಮನೀ ನೆನಪಾತು' ಎಂದನು. 'ಹೂಂ ಸೋಲೋದು ಮತ್ತೂ ಹೆಣ್ಣಿನ ಜನ್ಮಕ್ಕ ಕಟ್ಟಿಟ್ಟದ್ದ ಅಲ್ಲ' ಎಂದಳು.

ಮನೆಗೆ ಹೊಂದ ಮೇಲೆ ಸಂಜೆಯ ಫರಾಳದ ಶಾಸ್ತ್ರವಾಯಿತು. ಸುಬ್ಬಣ್ಣನು ಇನ್ನಿಷ್ಟು ಬುದ್ಧಿಗಲಿಸಬೇಕೆಂದು ಅವಳ ಕಡೆಗೆ ಲಕ್ಷಕೊಡದೆ ಏನನ್ನೋ ಬರೆಯುತ್ತ ಕುಳಿತನು. ಇವಳು ಬಂದವಳೇ ಭರ್‍ರನೆ ಮುಂದಿನ ಕಾಗದಗಳನ್ನು ಕಸಿದೊಗೆದಳು. 'ಇನ್ನು ಏನರ ಬರೆದರೆಂದ್ರ ನನ್ನ ಆಣಿ ಅದ. ಯಾರದಾದರ ಜೀವ ತಗೊಂಬೋವರು ಎಲ್ಲಿರ ನೀವು. ಎಲ್ಲೀದರ ಓದೋದು, ಏನರೆ ಬರೆಯೋದು, ಇಂಥಾದು ಯಾಕ ಬರೀತೀರೀ?' ಮತ್ತೂ ಅದೇ ಪ್ರಶ್ನೆ. 'ಹಿಂದಕ ಹೇಳಿನಲ್ಲ ಇದಕ್ಕ ಉತ್ತರ.' ಎಂದು ಹೇಳಿ ಅವಳ ಕಡೆಗೆ ನೋಡಿದನು. ಕಲ್ಪಿಸಿದಂತೆ ಚೆಂಡಿಯ ಅವತಾರವಿರಲಿಲ್ಲ. ಅವಳ ಕಣ್ಣಲ್ಲಿ ದಳದಳ ನೀರು ಸುರಿಯುತ್ತಿದ್ದವು.

‘ನಾನು ಬರೆಯುವದರಿಂದ ನಿಜವಾಗಿಯೂ ನಿನಗಿಷ್ಟು ಕೆಟ್ಟೆನಿಸುವದೇ, ಯಾಕೆ, ಏನಾಯಿತು’ ಎಂದು ಹತ್ತಿರ ಕರೆದು ಸಮಾಧಾನ ಹೇಳಿದನು. ಆಗ ಸರಸಕ್ಕನು ನಡೆದ ಎಲ್ಲ ಸಂಗತಿಯನ್ನು ಹೇಳಿದಳು. ಆಕಸ್ಮಾತ್ ಈ ಹೊತ್ತು ಬಚ್ಚಲಮನೆಯಲ್ಲಿ ಬೆಕ್ಕಿನ ಮರಿಯಿರದಿದ್ದರೆ ‘ನೀವು ಅತ್ತ, ನಾನು ಇತ್ತ’ ಎಂದಾಗುತ್ತಿತ್ತು ಎಂದಳು.

‘ನಿನ್ನಂಥ ಹುಚ್ಚರು ಓದತಾರಂತ ತಿಳಿದಿದ್ದರ ಹಾಂಗ ಬರೀತಿದ್ದಿಲ್ಲ’ ಎಂದು ಚೇಷ್ಟೆಮಾಡಿದನು.

‘ಓದೋರು ಹುಚ್ಚರಿರಲಿ, ಶಾಣೇರಿರಲಿ ನಿಮಗೆ ಖರೇ ಖರೇ ಅನಿಸಿದ್ದನ್ನ ಬರೀರಿ. ಮುಂದೀದು ಏನರೆ ಓದ್ಯೋದಿ ಏನರ ಬರೀಬ್ಯಾಡರಿ ಅನ್ನೋದು ನಾನು.’

ಏನು ಬಗೆಯೋ ಅವನಿಗೂ ಅದರ ಯಥಾರ್ಥತೆ ಹೊಳೆದು ಬರೆಯುವದನ್ನು ಬಿಟ್ಟುಕೊಟ್ಟನು.

ಪ್ರಸಿದ್ಧಿಗಿಂತ ಗೃಹಸ್ವಾಸ್ಥ್ಯ ಹೆಚ್ಚಿನದು.

ಸದಾ ಕೇಳೋದು ಬರೆ ಐತಿ

ಸದಾ ಹೇಳೋದು ಬಿರಿ ಐತಿ.

ಯಶವಂತರಾಯನು ಮುಲಕೀ ಖಾತೆಯಲ್ಲಿ ಕೆಲಸಕ್ಕೆ ಸೇರಿದ ೨-೩ ವರುಷಗಳಲ್ಲಿಯೇ ಆದರ ತಲೆಚಿಟ್ಟು ಹಿಡಿಯಿತು. ಮನೆಯಲ್ಲಿ ಬರೆಯುವ ಕಾಗದಗಳ ಗಂಟೊಂದನ್ನು ಬಗಲಲ್ಲಿಟ್ಟುಕೊಂಡು ಮನೆಯ ಕಡೆಗೆ ಇವನು ಹೊರಟಾಗ ದಾರಿಯಲ್ಲಿ ಕಾಲೇಜದ ವಿದ್ಯಾರ್ಥಿಗಳು ತಾವು ಓದಿದ ಪುಸ್ತಕ ಗಳಲ್ಲಿಯ ಇಲ್ಲವೆ ನೋಡಿದ ಚಿತ್ರಪಟಗಳಲ್ಲಿಯ ಪಾತ್ರ ಘಟನೆಗಳನ್ನು ದೊಡ್ಡ ದನಿಯಲ್ಲಿ ಚರ್ಚಿಸುತ್ತ ಹೊರಟಿರುವದನ್ನು ನೋಡಿ ತಾನುಎರವಾದ ಸುಖವನ್ನು ನೆನಿಸುವನು. ಸದ್ಯದ ಸಹಕಾರಿಗಳು ಹಾಗೆ ಕೂಡುವದೇ ಮೊದಲು ಅಪರೂಪ. ಆಪ್ಪಿತಪ್ಪಿ ಕೂಡಿದಾಗ ಪ್ರಮೋಶನ್, ರಿಮೈಂಡರ್, ಎಕ್ಸಪ್ಲನೇಶನ್ ಇವೇ ಮಾತು ನಡೆಯುತ್ತಿದ್ದವು.

ಕೊನೆಗೊಂದು ದಿನ ರೇಗಿ ರಾಬರ್ಟ ಕ್ಲೈವ್ಹನಂತೆ 'ನಾನು ಬಿ. ಏ. ಆದದ್ದು Forwarded with B. C. to ಎಂದು ಬರೆಯಲಿಕ್ಕಲ್ಲ' ಎಂದು ರಾಜೀನಾಮೆಯನ್ನು ಗೀಚಿದನು. ತರುಣ ರಾಬರ್ಟನು ಆಗ ಸೈನ್ಯವನ್ನು ಸೇರಿದನಂತೆ. ಯಶವಂತರಾಯನೂ ಕನ್ನಡ ವಾಙ್ಮಯ ಸೇವಾ ಸೇನೆಗೆ ಸೇರಿದನು.

ಇವನ ಸೇವೆಯು ಮೊದಲೊಂದು ಕುಂಟುತ್ತ ಮುಗ್ಗುತ್ತ ಸಾಗಿದ್ದ ಮಾಸಿಕದ ಸಂಸಾರವನ್ನು ಕೊರಳಿಗೆ ಹಾಕಿಕೊಂಡು ಸುರುವಾಯಿತು. ಚಂದಾಹಣವನ್ನು ಮುಂಗಡವೆಂದು ಮುದ್ರಿಸಿದ್ದರೂ ಎಷ್ಟೋ ಮಂದಿಯ ಮೇಲೆ ಬಾಕಿಯಾಗಿಯೇ ಉಳಿಯುವದಾಗಿ ವರ್ಷೆರಡುಗಳಲ್ಲಿತಿಳಿದುಬಂತು. ಪ್ರಚಾರಕನನ್ನು ನಿಯಮಿಸಿದರೆ ಪ್ರವಾಸದ ವೆಚ್ಚಕ್ಕೆ ಆವನ ಸಂಬಳಕ್ಕೆ ಸರಿ ಹೋಗುತ್ತಿತ್ತು. ಪ್ರತಿಗಳನ್ನು ಕಳಿಸುವ ಅಂಚೆಯ ವೆಚ್ಚ ಮತ್ತೆ ಮೈ ಮೇಲೇ. ತಾನೇ ಹೊರಡುವದೆಂದರೆ ಸಂಪಾದಕನ ಕಾರ್ಯವು ಸಮಾಧಾನ ಕಾರಕವಾಗುವದಿಲ್ಲ. ಹೀಗಾಗಿ ಕೊಡುವದು ಮಾತ್ರ ನಿಜವಾಯಿತು.

ಬರುವದು ಅನಿಶ್ಚಿತ. ನಿಯಮಿತ ಕಚೇರಿಯ ಖರ್ಚು, ಮುದ್ರಣದ ವೆಚ್ಚ, ಅಂಚೆಯವೆಚ್ಚ, ಇವುಗಳಿಗಾಗಿ ಹಣವು ಸಂಪುಷ್ಟಕ್ಕೆ ಬಂತು.

ಈ ನಡುವೆ ಅನೇಕ ಕೃತಿಗಳನ್ನು ಇವನು ನಿರ್ಮಿಸಿದ್ದನು. ಆದರೂ ಉಳಿದ ವ್ಯವಸ್ಥೆಯು ವ್ಯಾಪದಲ್ಲಿ ತಾನು ಕಲ್ಪಿಸಿದಷ್ಟು ವ್ಯಾಸಂಗವನ್ನು ಸಾಗಿಸಲಿಕ್ಕೆ ಅನುಕೂಲವಿರಲಿಲ್ಲ. ಮೊದಲು ತನಗೆ ಸೇರುವ ಪುಸ್ತಕಗಳನ್ನು ಕೊಳ್ಳುವ ಪರಿಪಾಠವಿಟ್ಟಿದ್ದನು. ಈಗ ಹಣದ ಕೊರತೆಯ ಮೂಲಕ ಯಾವ ಉದ್ದೇಶ ಸಾಧನೆಗಾಗಿ ಇವನು ಈ ಮಾರ್ಗವನ್ನು ಸೇರಿದ್ದನೋ ಅದಕ್ಕಾಗಿ ಸಾಕಷ್ಟು ಅವಕಾಶವಾಗಲೊಲ್ಲದು. ಮನಸ್ಸಿನಲ್ಲಿಯೇ ಮಿಡುಕಹತ್ತಿದನು. ಆದರೂ ಸರಸ್ವತಿಯು ಓಜವು ಲಕ್ಷ್ಮಿಯಿಂದಿರುವ ಅಂತರದ ಸಮಪ್ರಮಾಣದಲ್ಲಿರುವದೆಂಬ ವಾಙ್ಮಯೇತಿಹಾಸದ ಸಿದ್ಧಾಂತದಿಂದ ಸಮಾಧಾನ ಹಚ್ಚಿಕೊಂಡನು. ವಚನಕಾರರ ಹಾಗೂ ದಾಸಕೂಟದ ವಾಙ್ಮಯವನ್ನು ಅಭ್ಯಸಿಸಿದಾಗ ಅವರ ಸತ್ಯತೆಯು ಬೇರೂರಿ ಹತ್ತಿತು. ಈ ಭಾವಗೀತಗಳ ಜಾತಿಯೇ ಬೇರೆ. ಪಾಶ್ಚಾತ್ಯ ಪ್ರಣಯಗೀತಗಳ ಉನ್ಮಾದವದರಲ್ಲಿರಲಿಲ್ಲ. ಇದರಲ್ಲಿಯ ಪ್ರಸಾದವದರಲ್ಲಿರಲಿಲ್ಲ. ಉಚ್ಚ ಪ್ರತಿಯ ವಾಙ್ಮಯನಿರ್ಮಿತಿಗೆ ತಕ್ಕ ಅನುಭಾವವನ್ನು ಹೊಂದಬೇಕಾದರೆ ಸುಖಮಯಜೀವನವು ಅವಶ್ಯಕವೆಂದು ಇವನಿಗೆ ಅನಿಸುತ್ತಿತ್ತು. ಆದರೆ ದಾಸರ, ಶರಣರ ಆ 'ಯಾರು ಒಲಿದರೇನು ನಮಗಿನ್ನಾರು ಮುನಿದರೇನು' 'ಹಾಗೆ ನಡೆದೊಡೆ ನಿನ್ನಾಣೆ ನಿನ್ನ ಪ್ರಮಥರ ಆಣೆ' ಎಂಬುದರಲ್ಲಿ ಕಂಡು ಬರುವ ನಿರ್ಭೀಕ, ನಿಃಸಂಗ ನಿರ್ಧಾರವನ್ನು ನೋಡಿ, ಆ ಜೀವನದ ಬಗೆಯು ಇವನ ಮನಸ್ಸನ್ನು ಮಿತಿಮೀರಿ ಸೆಳೆಯಿತು. ಏಕತಾರಿಯನ್ನೇ ಹಿಡಿಯುವವರಲ್ಲಿದ್ದನು. ಅದರಿಂದ ಇವನನ್ನು ಪರಾವೃತ್ತಮಾಡಿದ ಶ್ರೇಯವು ಜನಪದ ಸಾಹಿತ್ಯದ ಪುನರುಜ್ಜೀವನಕ್ಕೆ ಸಲ್ಲುವದು.

ನಾಮಸ್ಮರಣದ ಭಕ್ತಿಪಂಥವೇಕೋ ಇವನಿಗೆ ಸೇರಲಿಲ್ಲ. ಒಂದು ವೇಳೆ ಅದರಲ್ಲಿ ಇವನು ಸೇರಬೇಕೆಂದಿದ್ದರೆ ತನ್ನ ಸಾಧ್ಯದ ಒಂದು ಪ್ರಾಯೋಗಿಕ ಸಾಧನವೆಂದೇ. ಯಾಕಂದರೆ ಇವನ ದೃಷ್ಟಿಯಿಂದ ಕಾವ್ಯಾನಂದವೇ ಬ್ರಹ್ಮಾನಂದ. ಜೀವನದಲ್ಲಿಯ ಅತ್ಯುಚ್ಚ ಆನಂದ ಇದು ಜೀವನದ ಬೇರೆ ಬಗೆಗಳಲ್ಲಿಯೂ ಸಾಧ್ಯವುಂಟೆಂದು ಇವನು ಮನಗಂಡದ್ದು ಆ ಸಾಹಿತ್ಯವನ್ನು

ಕೇಳಿ, ಓದಿ. ಈ ಕವಿಗಳ ಜೀವನವು ಸಾಮಾನ್ಯರಲ್ಲಿದ್ದರೂ ಜೀವನದ ಎಲ್ಲ ಬಗೆಯ ಅನುಭವವನ್ನು ಅವರ ಕೃತಿಗಳಲ್ಲಿ ಕಾಣಬಹುದು. ಕೆಲವದರಲ್ಲಿ ಪ್ರಣಯ ಗೀತೆಗಳ ಉನ್ಮಾದವಿದೆ. ಕೆಲವದರಲ್ಲಿ ಭಕ್ತಿಯ ಪ್ರಸಾದವಿದೆ. ಕೆಲವದರಲ್ಲಿ ಚಿಕ್ಕವಾದರೂ ಹೃದಯಸ್ಪರ್ಶಿಯಾದ ಚಿತ್ರಗಳಿವೆ. ವಿನೋದವಿದೆ. ಗುಡಿಸಲಲ್ಲಿಯ ತಾಯಿಯು ತನ್ನ ಮಗುವನ್ನು ಆಡಿಸಲು ಹಾಡಿದ ಹಾಡುಗಳು ಪುರಂದರದಾಸರು ಗೋಪಾಲಕೃಷ್ಣನನ್ನು ಆಡಿಸಿದ ಹಾಡಿಗಿಂತೇನು ಕಡಿಮೆಯವಲ್ಲ. ಇವನು ಕೇಳಿದ ಕೆಲವು ನಿರ್ಮಲ ಹಾಸ್ಯ ಲಾವಣಿಗಳಂತೂ 'ಕೂಪರ'ನ 'ಜಾನ್ ಗಿಲ್ಪಿನ್' ಲಾವಣಿಗಿಂತ ಉಚ್ಚ ಪ್ರತಿಯವು. ಹೀಗಾದ್ದರಿಂದ ಲಾವಣಿಗಳನ್ನೂ ಹಾಡುಗಳನ್ನೂ ಕೇಳುವ ಒಂದೂ ಸಂಧಿಯನ್ನು ವ್ಯರ್ಥ ಹೋಗಗೊಡುತ್ತಿರಲಿಲ್ಲ. ಅದೊಂದು ವ್ಯಸನವೇ ಆಗಿತ್ತು.

ಕಾವ್ಯಾನಂದ ಶೋಧಕನಾದ ಇವನಿಗೆ ರಸಿಕರ ಸ್ವಾದಾನಂದವು ಅನೇಕ ಸಾರೆ ಸಿಗುತ್ತಿತ್ತು. ಆದರೆ ಅದರ ನಿರ್ಮಿತಿಯ ಆನಂದಕ್ಕೆ ಬೇಕಾಗುವ ಜೀವನದ ಸಮತೂಕವು ಇನ್ನೂ ಸಿಕ್ಕಿದ್ದಿಲ್ಲ. ಅದನ್ನು ಹಳ್ಳಿಯಲ್ಲಿದ್ದು ಹಳ್ಳಿಗರ ಜೀವನದ ಬಗೆಯಿಂದ ಕಲಿಯಬೇಕೆಂದನು. ಸಂಪಾದಕತ್ವವನ್ನು ಬಿಟ್ಟುಕೊಟ್ಟು ಹಳ್ಳಿಹಳ್ಳಿ ತಿರುಗಿದನು. ಆದರೇನು ಅವನಿಗೆ ಅದು ಸಾಧ್ಯವಾಗಲಿಲ್ಲ. ಗುರುಗಳೂ ಇಲ್ಲ, ಶಿಷ್ಯರೂ ಇಲ್ಲ, ಇಂಥ ಸ್ಥಳಕ್ಕೆ ಕಲಿಯಲೆಂದು ಹೋದಂತಾಯಿತು. ಬ್ರಿಟಿಶ್ ಆಳಿಕೆಯಿಂದ ಈಚೆಗೆ ನಡೆದ ಹಳ್ಳಿಗಳ ಜೀವಿತ ಶೋಷಣದ ಪರಿಣಾಮವು ಚೆನ್ನಾಗಿ ಕಂಡುಬಂತು. ಎಲ್ಲಿ ನೋಡಿದಲ್ಲಿ ಕಂದಿದ ಮುಖ, ನಿರಾಶೆಯ, ಉದಾಸೀನಬಾಳು, ಜೀವನೋತ್ಸಾಹವೇ ಇಲ್ಲ. ಹಳೆಯ ಲಾವಣಿಗಳೇ ಲಾವಣಿ, ಹಳೇ ಹಾಡೇ ಹಾಡು. ಪರಂಪರೆಯೇ ಮುಗ್ಗಿತು. ಕಾವ್ಯದ ಶೆಲೆಯೇ ಬತ್ತಿದ ಬಳಿಕ ಕಾರಂಜಿಯು ಹೇಗೆ ಪುಟಿಯಬೇಕು. ಅವರನ್ನುವ ಆ ಹಾಡುಗಳ ಆನಂದವನ್ನು ಅವರಿಗಿಂತ ಇವನೇ ಹೆಚ್ಚು ಅನುಭವಿಸಬಲ್ಲನು. ಕಲ್ಪಕ ಹಾಗೂ ಸಂಸ್ಕಾರಕ್ಷಮ ಮನಸ್ಸಿದ್ದುದರಿಂದ ಸಾಧ್ಯವಾಯಿತು. ಅವರಿಗೆ ಆ ಜೀವನದ ಬಗೆ, ಪರಂಪರೆ ತಪ್ಪಿದ ಕೂಡಲೇ ಎಳೆ ಹರಿದ ಜೇಡಹುಳದಂತೆ ದಿಕ್ಕು ತಪ್ಪುವದು. ಹೀಗೆಯೇ ಒಮ್ಮೆ ಆಯಿತು.

ಹೋಳಿ ಹುಣ್ಣಿವೆಯಲ್ಲಿ ಎಲ್ಲ ಕಡೆಯಲ್ಲಿಯೂ ಲಾವಣಿಗಳನ್ನು ಹಚ್ಚುವರು. ಕಲ್ಗಿ, ತುರಾಯಿ ಎರಡು ಪಕ್ಷಗಳ ಮೇಳಗಳನ್ನು ಕರೆಯಿಸುವವಪರೂಪ. ಸಾಧಾರಣತಃ ಒಂದೇ ಮೇಳ ಕರೆಯಿಸಿ ವಿಶ್ರಾಂತಿಯ ಕಾಲದಲ್ಲಿ ನಡುವೆ ಸ್ಥಳೀಕರೇ ಎರಡು ಪದ ಅನ್ನುವರು. ಇಬ್ಬರೂ ಕೂಡಿದಾಗ ಸವಾಲುಜವಾಬಿನ ಏಗಾಟ ನಡೆದು ಮಜಲು ಬಹಳೇ ರಂಗಾಗುವದು. ಮೊದಮೊದಲು ಪದಗಳ ಮೇಲಾಟ ನಡೆದು ಕೊನೆಗೆ ಮಾತ್ರ ಭೀಭತ್ಸಕ್ಕೆ ಪ್ರತಿ–ಪಕ್ಷಿಗೆ ಸಂಗೀತ ಬೈಗಳನ್ನರ್ಪಿಸುವ ವರೆಗೆ ಬಂದಿಳಿಯುವದು. ವಿಧಿ ನಿಷೇಧಗಳನ್ನು ಬದಿಗಿಟ್ಟೇ ಅದನ್ನು ಕೇಳಬೇಕು. ಹೋಳಿಹುಣ್ಣಿವೆ ಓಕಳಿ ಡಾಂಬರುಗಳನ್ನು ತೊಳೆಯುವ ಎಣ್ಣೆ ಸಾಬೂಣುಗಳು ಮನೆಯಲ್ಲಿದ್ದರೆ ಈ ದೋಷವನ್ನು ಪರಿಹಾರಮಾಡುವ ಶಕ್ತಿ ಮನಸ್ಸಿನಲ್ಲಿರಬೇಡವೇ ?

ಹೀಗೇ ಒಂದು ಹುಣ್ಣಿವೆ ರಾತ್ರಿ ಬೆಳಗಿನ ಸುಮಾರಿಗೆ ಹಸಗೆಟ್ಟಿತೆಂದು ಎದ್ದು ಹೋಗುವ ವಿಚಾರದಲ್ಲಿದ್ದಾಗ ಒಂದು ಮೋಜಾಯಿತು. ಇಷ್ಟೊತ್ತು ಭೀಭತ್ಸಕ್ಕೆ ಅದರಿಂದಲೇ ಉತ್ತರಕೊಡುವದು ನಡೆದಿತ್ತು. ಹಿಂದಿನ ಸೂಳಿಯ ಹಾಡಿಗೆ ಉತ್ತರ ಕೊಡಲು ಮೇಳದಲ್ಲಿ ಯಾರೂ ಏಳುವ ಲಕ್ಷಣ ಕಾಣಲಿಲ್ಲ. ಅವರ ಸಂಗ್ರಹದಲ್ಲಿನ ಹಾಡುಗಳೂ, ಅವರ ಬೈಗಳ ಶಬ್ದಕೋಶವೂ ಆಗಲೇ ಬರಿದಾಗಿತ್ತು. ನೀಏಳು,ನೀಏಳು ಎಂದು ಅವರಲ್ಲಿ ಬಹಳ ಹೊತ್ತು ಗುಜು ಗುಜು ನಡೆಯಿತು. ಇಷ್ಟರಲ್ಲಿ ಪ್ರೇಕ್ಷಕರಲ್ಲಿಂದ ಒಬ್ಬ ಸುಮಾರು ೨೫ ವಯಸ್ಸಿನವನೊಬ್ಬನು ಮಂಚದ (ವ್ಯಾಸಪೀಠ) ಕಡೆಗೆ ಬರಹತ್ತಿದನು. ಜನರೆಲ್ಲ ಚಕಿತರಾದರು. ನುರಿತವರು, ಆ ಉದ್ಯೋಗದವರೇ ಅನುಮಾನ ಮಾಡುತ್ತಿರಲು ಇವನಿಗೆ ಹೇಗೆ ಧೈರ್ಯವಾಯಿತೆಂದು ಆಶ್ಚರ್ಯಪಟ್ಟರು. ಹಾಡಿದ್ದೇ ಹಾಡ ಹತ್ತಿದರೆ, ಅದರಲ್ಲಿ ಹೊಸದೇನೂ ಇಲ್ದಿದ್ರೆ ತತ್‌ಕ್ಷಣ ಅಪಮಾನ ಮಾಡಿ ಕೂಡಿಸಿ ಬಿಡುವರು. ಆ ಬೈಗಳಾಟಕ್ಕೆ ಕೆಲವು ನಿಯಮಗಳಿವೆ. ಇಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಪಕ್ಷದ ಮರ್ಯಾದೆಯನ್ನು ಇವನು ಉಳಿಸುವ ಬಗೆ ಹೇಗೆಂದು ಕೆಲವರು ಸಾಶಂಕರಾದರು. ಕೆಲವರಂತೂ ‘ ನೀ ಯಾಕೋ ಕುಂದ್ರು. ರೊಕ್ಕ ಕೊಟ್ಟ ಕಸಬೇವಿ ಅವರನ, ಅವರ ಬೇಕಾದ ಪದ ಹೇಳಲಿ ಸಾಕಾರ ಸುಮಾರಾಗಲಿ ಎಂದು ಜಗ್ಗಿದರು ಕೂಡ

ಆದರೆ ಅವನು ಮಾತ್ರ ಆವುದನ್ನೂ ಲೆಕ್ಕಿಸದೆ ಆತ್ಮ-ವಿಶ್ವಾಸದಿಂದ ಮಂಚವನ್ನೇರಿದನು. ಆದರೆ ಬೈಗಳ ಪದವನ್ನಾರಂಭಿಸಲಿಲ್ಲ.

ಕುಣೀಬ್ಯಾಡ, ಕುಣೀಬ್ಯಾಡಾಽಽ
ಕುಣೀಬ್ಯಾಡ ಧಕ್ಕಾ ಧಿಂಗಿ, ನಿನಗೇನು ಗೊತ್ತ ತಂಗಿ ‖ ಕುಣೀಬ್ಯಾಡ ‖
ಪದಾ ಕೇಳೋದು ಬರೇ [ಕೇವಲ] । ಪದಾ ಹೇಳೋದು ಬಿರಿ ಐತಿ
‖ ಕುಣೀಬ್ಯಾಡ ‖
ರಸದಗುಂಡು ಸುರದ್ಹಾಂಗ ಸುರೀಬೇಕ ಶಬದಾ ।
ಮತ್ತ ಗಾಸ ಬೇಕಽ । ಅದಕ । ತಾಽನ ಬೇಕಽ ‖ ಕುಣೀ ‖
ಮುತ್ತು ಪೋಣಿಸಿಧಾಂಗ ಪೋಣಿಸಬೇಕ ಭಾವಾಽ ।
ಮತ್ತ ರಾಗಬೇಕ । ಅದು । ಎದಿ ತಾಗಬೇಕ ‖ ಕುಣೀ ‖

ಹೀಗೆ ಸತ್ಕಾವ್ಯ ಲಕ್ಷಣಗಳನ್ನು ಹೇಳಲು ಆರಂಭಿಸಿದನು. ಲಾಕ್ಷಣಿಕ ಗ್ರಂಥಗಳ ಸಾರದಂತಿತ್ತು. ಎಲ್ಲರೂ ಚಿತ್ರದಲ್ಲಿನ ಗೊಂಬೆಗಳಂತೆ ಸ್ತಬ್ಧರಾಗಿ ಕೇಳುತ್ತಿದ್ದರು. ಕೊನೆಗೆ ಅಲ್ಲಿದ್ದ ಸಾವ್ಕಾರರೊಬ್ಬರ ಹೆಸರು ಪೋಣಿಸಿ ಇದಕೆಲ್ಲಾ 'ರಾಮಣ್ಣನಂಥಾ ಧೊರೀ ಬೇಕ' ಎಂದು ಪದ ಮುಗಿಸಿದನು.

ಯಶವಂತರಾಯನೇ ಆ ಯುವಕನು. ಆರ್ಕಿಮಿಡಿಸ್‌ನು 'ಉದ್ದವಾದೊಂದು ಸೊನ್ನೆಯ ಕೋಲು, ಹಚ್ಚಿ ಮೀಟಲೊಂದು ಸ್ಥಳ, ಇವೆರಡಿದ್ದರೆ ಪೃಥ್ವಿಯನ್ನು ಎತ್ತಿಡುವೆನೆಂಡನಂತೆ. ಈಗ ಅವನಂತೆಯೆ ಯಶವಂತರಾಯನಿಗೂ ತನ್ನ ಆತ್ಮಶಕ್ತಿಯು ಸೊನ್ನೆಯ ಕೋಲಿಗೆ ಮೀಟಲು ಸ್ಥಳ ಸಿಕ್ಕ ವಿಶ್ವಾಸವುಂಟಾಗಿದೆ

ಸಣ್ಣ ಮೀನ–ದೊಡ್ಡ ಮೀನ

ಸುಳಿದೊಂದು ಮೀನ್ನುಂಗಿತಾ ಮೀನನಾ
ಗಳೆ ನುಂಗಿತೊಂದು ಮೀನಾ ಮೀನ ನುಂಗಿದುದು
ಬಳಿಕೊಂದು ಮೀನನಂ ಮತ್ತೊಂದು ಮೀನ್ನುಂಗಿತಾಮೀನ ನುಂಗಿತೊಂದು ॥
ತೊಳಲುತೊಂದೊಂದನೊಂದಿತಾ ನುಂಗಲ್ತೀಮಿಂ।
ಗಿಳನೆಲ್ಲಿಮುಂ ನುಂಗುತಿರ್ಪುದೆನೆ ಬೆದರಿ ಮೀ।
ನ್ಗಳೆ ತಿರುಗುತಿರ್ದುಪೆರಕೆಗಳೊಡನೆ ಮುಂಪೊಕ್ಕ
ಗಿರಿಗಳೆಡೆಯಾಡುವಂತೆ ॥

ಜೈ. ೬. ೮.

ರಾಜೇರಾಯರು ಈವರೆಗೆ ಅಸಹಕಾರ, ಸತ್ಯಾಗ್ರಹ ಮೊದಲಾದವು ಗಳಲ್ಲಿ ಭಾಗವಹಿಸಿದವರಲ್ಲ. ಆದರೇನಾಯಿತು! ದೇಶಸೇವೆಯದೊಂದೇ ಮಾರ್ಗವಲ್ಲ. ರಾಯರು ಗ್ರಾಮೋದ್ಧಾರ ಸಮಿತಿಯ ಸದಸ್ಯರಾಗಿದ್ದರು.

ಕೋರ್ಟಿನ ದೊಡ್ಡ ಬಿಡುವು ಬಂತು. 'ವಿಶ್ರಾಂತಿಯೂ ಆಯಿತು ದೇಶಸೇವೆಯೂ ಆಯಿತು' ಎಂದುಕೊಂಡು ತಮ್ಮ ಗೊತ್ತಿನದೊಂದು ಹಳ್ಳಿಗೆ ಹೋದರು. ಹೋದ ದಿನ ಗೌಡರ ಮನೆಯಲ್ಲಿ ಯೋಗ್ಯ ಆದರೋಪಚಾರ ಗಳಾದವು. ಬಂದ ಕಾರ್ಯವನ್ನು ಇವರು ತಿಳಿಸಿದರು. ಗೌಡರು ರೈತರನ್ನು ಕೂಡಿಸಿದರು. ಇವರೂ ಕೆಲಕೆಲವು ಮಾತುಗಳನ್ನು ಹೇಳಿದರು.

'ಹೊಲದಲ್ಲಿ ಮನಸುಗೊಟ್ಟು ದುಡಿಯಬೇಕು. ಒಕ್ಕಲತನ ಸುಧಾ ರಿಸಬೇಕು. ದನಗಳನ್ನು ಬೇರೆ ಕಟ್ಟಬೇಕು. ಮನೆಯಲ್ಲಿ ಗಾಳಿಯಾಡು ವಂತಿರಬೇಕು. ಆಡು, ಕೋಳಿ ಮೊದಲಾದವುಗಳನ್ನು ಸಾಕಿ ಉತ್ಪನ್ನ ಬೆಳಿಸಬೇಕು. ಮದುವೆಗಾಗಿ ಮಿತಿಮೀರಿ ವೆಚ್ಚಮಾಡಬಾರದು' ಎಂದು ಮುಂತಾಗಿ.

ರೈತರೂ ತಮ್ಮ ಕಷ್ಟಗಳನ್ನು ತೋಡಿಕೊಂಡರು. ಆದರಲ್ಲಿ ಮುಖ್ಯ ವಾಗಿ—ಇಳಿದ ಧಾರಣೆಯೊಂದು, ಹಿಂದಿನ ಸಾಲವೊಂದು. ಅವಕ್ಕೂ ಇವರು ಯೋಜನೆಯನ್ನು ತಿಳಿಸಿಹೇಳಿದರು. "ಈಗ ದಲಾಲರಲ್ಲಿ ಮೊದಲು

ನೀವು ಮುಂಗಡ ತರುವವರಿಂದ ಬಹಳ ಹಾನಿಯಾಗುವದು. ಅವರು ಹೇಳಿದಂತೆ ಕೊಟ್ಟು ಬರಬೇಕಾಗುವದು. ಸಹಕಾರೀ ಮಾರಾಟದ ಸಂಘ ವನ್ನು ಮಾಡಿಕೊಳ್ಳಿರಿ. ಇನ್ನು, ಹಿಂದಿನ ಸಾಲವನ್ನು ತೀರಿಸುವದಕ್ಕಾಗಿ ಲ್ಯಾಂಡ್ ಮಾರ್ಗೇಜ ಬ್ಯಾಂಕಿನಿಂದ ತೀರ ಕಡಿಮೆ ಬಡ್ಡಿಯಿಂದ ಸಾಲ ಸಿಗುವದು. ೨೦ ಕಂತುಗಳಿಂದ ಸಾವಕಾಶ ತೀರಿಸಬಹುದು. ನೀವೆಲ್ಲ ಊರಲ್ಲಿ ಎಷ್ಟೆಷ್ಟು ಸಾಲ ತಂದಿರುವಿರೆಂಬದನ್ನು ತಿಳಿಸಿ ಆ ಪ್ರಕಾರ ಅರ್ಜಿ ಮಾಡಿಕೊಳ್ಳಿರಿ. ಸಾವಕಾರನನ್ನು ಕರೆಸಿ ಕೊಡುವ ಹಣ ಕಡಿಮೆಮಾಡುವ ವ್ಯವಸ್ಥೆ ಸಹ ಮಾಡಿದೆ" ಎಂದು ಹೇಳಿದರು.

ಇಷ್ಟಾದ ಮೇಲೆ ಕೇಳುವದೇನು? ಇನ್ನು ತಮಗೆ ಸುದಿನಗಳು ಬರು ವದು ನಿಶ್ಚಯವೆಂದು ರೈತರು ನಂಬಿದರು. ಇಂಥ ಜನರು ತಮ್ಮ ವಿಷಯಕ್ಕೆ ಇಷ್ಟು ಸಹಾನುಭೂತಿ ತೋರಿಸಿ ಕಳಕಳಿಯಿಂದ ಸಹಾಯ ಮಾಡುವದನ್ನು ಕಂಡು ಅವರಿಗೊಂದು ಆತ್ಮವಿಶ್ವಾಸ, ಒಂದು ಬಗೆಯ ಹುರುಪು ಬಂದಿತು.

ರಾಯರು ವಕೀಲರೆಂದು ತಿಳಿದ ಮೇಲೆ ೩-೪ ಮಂದಿ ತಮ್ಮವೇನೋ ಕೆಲವು ನ್ಯಾಯದ ವಿಷಯ ಸಲಹೆ ಕೇಳಿದರು. ಇವರೂ ಯೋಗ್ಯವಾದು ದನ್ನು ಹೇಳಿದರು.

ಎಲ್ಲರೂ ಹೋದರೂ ಬಸವಂತಪ್ಪನು ಮಾತ್ರ ಕುಳಿತಿದ್ದನು. ಕೊನೆಗೆ ಏನು ವಿಶೇಷವೆಂದು ರಾಯರು ಕೇಳಿದರು.

'ನೀವು ಹೇಳಿದಿರೆಲ್ರಿ ಪಾ, ಆ ಬ್ಯಾಂಕಿನ್ಯಾಗ ಹ್ಯಾಂಗರೆ ಮಾಡಿ ನನಗಟ ಲಗ್ನಕ್ಕ ಸಾಲ ಸಿಗೋಹಾಂಗ ಮಾಡರೀಯಪಾ. ಈ ಸಾವುಕಾರ ಕಾಟ ಭಾಳ ಆಗ್ಯೆತಿ ಏನು ಅವರ ಸೊಕ್ಕ, ಏನು ಅವರ ಮಾತು ಏನ ಹೇಳೋ ಹಾಂಗಿಲ್ಲರಿ?'

'ಎನೋ ಅಂಥದೇನಾಯಿತೋ?'

"ಏನು ಹೇಳಲರಿ! ಇವತ್ತ ಹೊಲದಾಗ ಇದ್ದಾಗ ಬಂದು ಬಲು ಜಬರ್ದ ಮಾಡಿದರು. 'ಆದಾಗ ಆಥಾಂಗ ಕೊಟಕೋತ ಬಂದೆನ್ರೀ ಧಣೇರ, ನೀಗಿದಾಗ ಮುಟ್ಟಸತೇನರಿ ನಿಮ್ಮ ಗಂಟು' ಅಂದೆ. ನೀಗಿದಾಗ ಅಂತ ನೀಗಿದಾಗ! ನಿಮ್ಮಪ್ಪನ ಮನಿಗಂಟು. 'ನಾಚಿಕೆರ ಬರತೈತಿ ಹೇಳಾಕ' "ಅಪ್ಪಾ, ಅಪ್ಪನ ಮ್ಯಾಗ ಮಾತಾಡಬ್ಯಾಡ್ರಿ ಅಂದೆ. ಮತ್ತೀಟು

ಹೆಚ್ಚ ಮಾಡಿದರ್ರಿ, ಬಾಯಿಗೆ ಬಾಯಿ ಹತ್ತಿತರಿ. ಇನ್ನಟ ಆಗಿದ್ದರ ಏನಾಕ್ಕಿತ್ತೊ, ಶಿವನಬಲ್ಲ. ಗಂಟಿಗೆ ಹೊಲ ವತ್ತೀ ಬರ್ಸಿಕೊಂಡು ಬಡ್ಡಿ ತಗೋತ ಇದ್ದು ನೋಡಿರಿ ಅಂದೆ ಹ್ಯಾಂಗೈತಿವರ ಸೊಕ್ಕ."

ವಾಸ್ತವಿಕವಾಗಿ ಈ ಪ್ರಕಾರಗಳು ದಿನಾಲೂ ನಡೆಯುತ್ತವೆ. ಜನ ನೋಡಿ, ಸ್ವಲ್ಪ ಬಿರುಸು ಮಾತಾಡದೆ ಕೊಟ್ಟ ಹಣ ತಿರುಗಿ ಬರುವದಿಲ್ಲ. ಪ್ರತಿ ವ್ಯವಹಾರ ಕೋರ್ಟಿಗೆ ಒಯ್ಯುವದೆ? ವ್ಯವಹಾರ ಹೀಗೇ ಸಾಗುವದು. ಇಷ್ಟು ದಿವಸ ಬಸವಂತನಿಗೂ ಸಾವುಕಾರರ ನಡತೆಯಲ್ಲಿ ವಿಶೇಷ ವೇನೂ ಅನಿಸಿದ್ದಿಲ್ಲ. 'ಹೂನ್ರಿ, ದ್ಯಾವರೂ ಆಗಲಿ. ಸಾವುಕಾರ್ರು ನೀವ್ರು ಹೀಂಗ ಮಾಡಿದರ ಹ್ಯಾಂಗರೀ ಧನೇರ' ಅನ್ನುತ್ತ ಸಾಗಿದ್ದನು. ಆದರೆ ರಾಯರ ಮಾತಿನ ನವಜೀವನದ ಸೇಚನದಿಂದ ಬಂದ ಹೊಸ ಉತ್ಸಾಹದ ಹೊಸ ದೃಷ್ಟಿಯಲ್ಲಿ ಅವನಿಗೆ ಅವೇ ಮಾತುಗಳು ಸೊಕ್ಕಿನವೆನಿಸತೊಡಗಿದವು, ಅಪಮಾನಕಾರಕವೆನಿಸತೊಡಗಿದವು.

ರಾಯರೆಂದರು 'ಅವರು ಮತ್ತ್ಯಾವದಕ್ಕೂ ಬಗ್ಗೂದಿಲ್ಲ ಅವರ ಸೊಕ್ಕು ಮುರೀಲಿಕ್ಕೆ ಒಂದೇ ಹಾದಿ.'

'ಮಾಡ್ರಿಯಪಾ. ಒಂದೀಟು ಅದನ್ನ. ಅಂದ್ರ ಬೇಶಾಕ್ಕೈತಿ' ಎಂದು ಹುರುಪಿನಿಂದ ಕಳೆಗೊಂಡ ಮೊಗದಿಂದ ಅಂದನು.

'ನೋಡು ಇವರನ್ನು ಹಣ್ಣಿಗೆ ತರಾಕಂದರ ಫೌಜದಾರಿ ಖಟ್ಲೇ ಹಾಕಬೇಕು. ಐತೇ ನಿನ್ನ ತಯಾರಿ? ನಾಕು ಜನ ನಿನ್ನ್ಹಾಂಗ ಸಾಕ್ಷಿ ಹೇಳೋವರದಾರ?'

'ನಾಕು ಮಂದಿ ಯಾಕರಿ, ಏಸು ಬೇಕು ಆ್ಯಸು ಮಂದಿ ಅದಾರು'

'ಹಾಂಗಾರ ಇವತ್ತಿನ ನ್ಯಾಯದ್ದs ಒಂದು ಫಿರ್ಯಾದಿ ಹೆಟ್ಟು ಅಂದ್ರ ಹೇಳಿಧಾಂಗ ಕೇಳಿಕೋತ ಕಾಲ ಬೀಳತಾರನಿಂದು'

'ನೀವ್ವsಟು ಮನಸಿನವ್ಯಾಗ ತೊಗೊಂಡು ನಿಂತು ಮಾಡಿದರ ಆಕ್ಕೈತಿರಿ. ನೀವು ಇರಾಕ ಬೇಕರಿ. ಮತ್ತ ನಮ್ಮ ಬೆಂಬಾಲೆ'

ಗೌಡರಂದರು 'ಮಾಡತಾರ ಹೋಗೋ ಅದರ ಕಾಳಜೀ ಬಿಡು. ನಾಳಿ ಹೆನ್ಯಾಗ ರೂಪಾಯಿದ ಜ್ವಾಡ್ನಿ ಮಾಡಿಕೊಂಡು ಬಾ ನೀನು.'

ರಾಯರು ‘ ಮತ್ತ ಇದು ನೋಡು ಪಕ್ಕಾ ಆಗಬೇಕಾದರ ಅದಕ ಇನ್ನೊಂದು ಮಸಲತ್ತೈತಿ. ಸಾವಕಾರ ಕೂಡ ಅವರ ಆಳು ಇದ್ನಿಲ್ಲೋ? ’

‘ ಇದ್ದ ’

‘ ಅವನ್ನೂ ಎಳೀಬೇಕದರಾಗ. ಅವನ ಮ್ಯಾಗೂ ಖಟ್ಲೆ ಹಾಕಬೇಕು. ’

‘ ಅವನ ಮ್ಯಾಗ್ಯಾಕರಿ? ಪಾಪ, ಬಡವ ಅವೇನು ಮಾಡ್ಯಾನು. ’

‘ ಅದಕ ನೋಡನ್ನೋದು ನಿಮಗ. ನಾ ಹೇಳಿದ ಮಾತು ಸುಮ್ಮಗ ಕೇಳು. ಸರಕಾರದವರು ದೊಡ್ಡ ಖಟ್ಲೀದಾಗ ಮಾಫೀ ಸಾಕ್ಷೀದಾರಂತ ಮಾಡಿಕೋತಾರ ಗೊತ್ತೈತೆ. ಹಾಂಗ ಐತಿ ಇದು. ಅವನ್ನ ಬಿಡೋ ಹಾಂಗ ಮಾಡೋದು. ಆದರ ಅವನ್ನ ಉಪಯೋಗ ಮಾಡಿಕೊಂಬೋದು. ಯಾಕರೀ ಗೌಡರ, ಹ್ಯಾಂಗ ಐತಿ ಆ ಇಸಮು. ಸಾಧಿಸೀತೋ ಇಲ್ಲೋ ಇದು!

ಗೌಡರು ‘ ಹೋ ಹೋ, ನಾ ಮಾಡತೇನಿ ಬಿಡಿರಿ ಅದರ ವ್ಯವಸ್ಥಾ. ಕರೆಸಿ ನಾಕ ಬೆದರಕಿ ಹಾಕಿ ‘ ನಿನಗೇನು ಧಕ್ಕೆ ಇಲ್ಲ ನೀ ಹೀಂಗ ಜವಾಬು ಕೊಡಬೇಕು. ನಿನಗ ಫಾಯಿದೇನ ಐತಿ ’ ಅಂತ ಹೇಳಿ ಕಬೂಲ ಮಾಡಸತೇನಿ. ಅಟೇ ಐವತ್ತು ರೂಪಾಯದ ಒಳ ಹೊರಗ ಕೆಲಸ ಬಗೀಹರೀತೈತಿ. ’

ರಾಯರು ‘ ಅಷ್ಟಾದರ ಪಕ್ಕಾ ಬಂದೋಬಸ್ತು ಆಕ್ಕೈತಿ ನೋಡು ’

ಆಯಿತು ಎರಡು ದಿನಗಳಲ್ಲಿ ಹಂಚಿಕೆ ಹಾಕಿದಂತೆ ಸಾಕ್ಷೀದಾರರದು, ಆಳಿನದು, ಎಲ್ಲ ಸಿದ್ಧತೆಯಾಯಿತು. ತಾಲೂಕಿನ ಸ್ಥಳದಲ್ಲಿ ರಾಯರ ಗುರುತಿನ ಸಾವುಕಾರನೊಬ್ಬ ಸದ್ಯಕ್ಕೆ ಬೇಕಾಗುವ ಹಣವನ್ನು ಬಸವಂತಪ್ಪನಿಗೆ ಅಣಿ ಮಾಡಿದನು. ಬ್ಯಾಂಕಿನ ಹಣ ಮಂಜೂರಾಗಬೇಕಾದರೆ ಕಾಲಾವಧಿಯ ಮಾತು. ಅದರದೂ ಪ್ರಯತ್ನ ನಡೆಯಿತು. ಸರಕಾರೀ ಫೀ ದಿನಕ್ಕೆ ಇಪ್ಪತ್ತೆಂದಿದ್ದರೂ ಕೇವಲ ಬಸವಂತಪ್ಪನಿಗೆ ಉಪಕಾರವೆಂದು ಮುದ್ದತಿಗೆ ಹದಿನೈದು ತೆಗೆದುಕೊಂಡು ಕೆಲಸ ಮಾಡಲು ರಾಯರು ಒಪ್ಪಿಕೊಂಡರು. ಕೋರ್ಟಿನಲ್ಲಿಯು ಖಟ್ಲೆಯು ಕೆಲಸ ನಾಲ್ಕೈದು ಮುದ್ದತೂ ಬಿದ್ದವು. ಸಮಾಧಾನಕಾರಕವಾಗಿ ನಡೆದಿತ್ತು. ಇತ್ತ ಬ್ಯಾಂಕಿನ ಹಣದ ಬಗ್ಗೆ ಸಾಹಸವೂ ಹೆಚ್ಚಾಯಿತು. ಜನರ ಅರ್ಜಿ ಬಹಳ. ದೊಡ್ಡ ರಕಮಿನ ಕೆಲಸ. ನೂರಿನ್ನೂರು ಒಳಹೊಡತವಿದ್ದದ್ದೇ. ಆ ಊರೂ ಸಾವುಕಾರರಂತೆ

ದುಪ್ಪಟ್ಟು ಬೇರೆ ಅಲ್ಲಲ್ಲವೇ ಎಂದು ಬಸವಂತಪ್ಪನು ಸಮಾಧಾನ ಹಚ್ಚಿಕೊಂಡನು. ಏನಾದರೂ ಒಮ್ಮೆ ಹಿಂದಿನ ಅನೇಕ ಕಡೆಯ ಸಾಲವೆಲ್ಲ ಬಗೆಹರಿದು ಒಂದೇ ಕಡೆಯಲ್ಲಿ ಇಪ್ಪತ್ತು ಕಂತು ಕೊಡುವದು ಎಷ್ಟೋ ಹಗುರೆಂದುಕೊಂಡನು. ಮೇಲಾಗಿ ಸಾವುಕಾರರನ್ನು ಕರೆಸಿ ಕೋರ್ಟಿನಂತೆಯೇ ದುಪ್ಪಟ್ಟಿದ್ದ ರಕಮು ಅರ್ಧಕ್ಕಿಳಿಸುವದೂ ಬಡ್ಡೀ ದರ ಕಡಿಮೆ ಮಾಡುವದೂ ಇವೆಲ್ಲ ಸವಲತ್ತುಗಳು ರಾಯರ ಗುರ್ತಿನಿಂದ ಖರ್ಚಿಲ್ಲದೆ ಸಿಗುವದೆಂದಮೇಲೆ ಉಳಿತಾಯವೇ ಎಂದನು. ಮುಂದೆ ಆ ಕೆಲಸ ನಡೆದಾಗ ಕಡಿಮೆ ಮಾಡುವದಕ್ಕೆಂದು ಇವನ ಕಡೆಯಿಂದ ಕೆಲವು, ತೀರ ಕಡಿಮೆ ಮಾಡಬಾರದೆಂದು ಸಾವುಕಾರರಿಂದ ಕೆಲವು ಹಣ ಪಡೆದು ಇಬ್ಬರಿಗೂ ಸರ್ವಸಾಧಾರಣ ಸಮಾಧಾನವಾಗುವಂತೆ ಹಿಂದಿನ ಸಾಲವನ್ನೆಲ್ಲ ರಾಯರೆ ಬಗಿ ಹರಿಸಿದರು. ಅರಿಸ್ಟಾಟಲ್ಲನ (ಸುವರ್ಣ ಮಧ್ಯದ) ಮಹತ್ವವೂ ವ್ಯವಹಾರದಲ್ಲಿ ಅಷ್ಟಿಷ್ಟಲ್ಲ.

ಅತ್ತ ಖಟ್ಲೆಯೆಲ್ಲ ನಡೆಯಿತು ಆದರೆ ಯಶಸ್ವಿಯಾಗಲಿಲ್ಲ. ಇವರ ಸಾಕ್ಷಿಗಳೇ ಕೆಟ್ಟರೆ ರಾಯರೇನು ಮಾಡ್ಯಾರು! ಅವರು ಮಾಡುವ ಶ್ರಮವನ್ನೆಲ್ಲ ಮನಸ್ಸುಗೊಟ್ಟು ಮಾಡಿದರು. ದೇವರಿಚ್ಛೆ. ಆದರೂ ಒಂದಾದರೂ ಮಹತ್ವದ ಕೆಲಸವನ್ನು ಮಾಡಿಕೊಟ್ಟು ಕಲ್ಯಾಣ ಮಾಡಿದ್ದಕ್ಕಾಗಿ ಬಸವಂತಪ್ಪನು ರಾಯರಿಗೆ ಧನ್ಯವಾದಗಳನ್ನರ್ಪಿಸಿದನು.

ಕೆಲ ದಿನಗಳ ಮೇಲೆ ಇದೆಲ್ಲ ಸಂಗತಿಯು ಬಸವಂತಪ್ಪನಿಂದ ನನಗೆ ತಿಳಿದು ಬಂದಿತು. ನಾನು ಸಹಜವಾಗಿ ರಾಯರ ಕಡೆಗೆ ಹೋದಾಗ ಈ ಮಾತು ತೆಗೆದು ಕೇಳಿದಾಗ ಅವರೂ ನಕ್ಕು ಒಂದು ಕಥೆಯನ್ನು ಹೇಳಿದರು.

'ಜಗತ್ತಿನಲ್ಲಿಯ ಅತಿ ಚಿಕ್ಕದಾದ ಕತೆಯನ್ನು ಕೇಳಿದ್ದೀರಾ?' ಎಂದರು.

'ಇಲ್ಲ' ವೆಂದು ನಾನೆಂದೆ.

'ಅದು ರಶ್ಯನ್ ಭಾಷೆಯಲ್ಲಿದೆಯಂತೆ. ನಾನದರ ಭಾಷಾಂತರವನ್ನೋದಿದ್ದೇನೆ ಕೇಳಿರಿ. ಸಮುದ್ರದಲ್ಲಿ ಎರಡು ಮೀನುಗಳು ಭೆಟ್ಟಿಯಾದವಂತೆ, ಅದರಲ್ಲೊಂದು ದೊಡ್ಡದು, ಒಂದು ಸಣ್ಣದು. ದೊಡ್ಡ ಮೀನು ಸಣ್ಣ ಮೀನನ್ನು ನುಂಗಲು ತೊಡಗಿತು. ಸಣ್ಣ ಮೀನ ಪರಿಪರಿಯಾಗಿ ಬೇಡಿಕೊಂಡಿತು. 'ನಾನೂ ನೀನೂ ಒಂದೇ ಜಾತಿಯವರು ಒಂದೇ ಪ್ರದೇಶ

ದವರು, ಹೀಗೆ ಮಾಡುಬಾರದು ಬಿಡು ನನ್ನ ' ಎಂದಿತು. ' ಅಂತೂ ಬದುಕಬೇಕಲ್ಲ. ಒಳ್ಳೇದು, ಹಾಗಾದರೆ ನೀನು ನನ್ನನ್ನು ನುಂಗಿ ಬದುಕು. ಬಾ ನಾನು ನಿನಗೇನೂ ಮಾಡುವದಿಲ್ಲ ಅಂಜಬೇಡ ' ಎಂದು ದೊಡ್ಡ ಮೀನು ಹೇಳಿತು. ಸಣ್ಣ ಮೀನು ಧೈರ್ಯಗೊಂಡು ತನ್ನ ಪುಟ್ಟ ಬಾಯಲ್ಲಿ ಅದರ ಬಾಲವನ್ನು ಹಿಡಿದು ನುಂಗಲು ಯತ್ನಿಸಿತು ಸಾಧ್ಯವಾಗಲಿಲ್ಲ. ಬಹಳ ಶ್ರಮಪಟ್ಟು ಕೊನೆಗೆ ಸಾಕಾಗಿ, ' ಛೆ; ನನ್ನಿಂದಾಗದು. ನಾನು ಸೋತೆ. ನೀನೇ ನುಂಗು ? ಎಂದು ಸಮಾಧಾನದಿಂದ ಹೇಳಿತು. ದೊಡ್ಡ ಮೀನು ಅದನ್ನು ನುಂಗಿ ಮತ್ತೆ ಬೇರೆ ಆಹಾರ ಹುಡುಕಲು ಹೋಯಿತಂತೆ. ಏನಾದರೂ ಅದರ ಹೊಟ್ಟೆ ದೊಡ್ಡದು ಇಷ್ಟರಿಂದ ಅದಕ್ಕೇನಾಗಬೇಕು ? '

ಇದನ್ನು ಕೇಳಿದ ನಾನು ರಾಯರೊಬ್ಬರು ಶ್ರೇಷ್ಠ ಕಲಾವಿದರೆಂದು ಒಪ್ಪಿಕೊಂಡು ಮನೆಗೆ ಬಂದೆ.

ಇದೂ ಒಂದು ಸಣ್ಣ ಮೀನಗಳು ಮೇಲೆ ಬರುವ ಸುಗ್ಗಿಯ ಕಾಲ. ಅದಕ್ಕೆ ಅನುಕೂಲ ಗಾಳಿ ಬೀಸಿದೆಯೆಂದಂದುಕೊಂಡೆ.

ಜಲಶಿಲ್ಪಿ

"ಬರ್‍ರಿ ಜೋಯಿಸರೇ, ಹಾಗೇ ಹೊರಟಿರಲ್ಲ. ಬರ್‍ರಿ. ಎಲೆ ಅಡಿಕೆ ಹಾಕಿಕೊಳ್ಳಿರಿ, ಬರ್‍ರಿ ರಾಯರೇ ಕೂತುಕೊಳ್ಳಿರಿ." ಎಂದು ಭಟ್ಟರು ಕರೆದರು. ಜೋಯಿಸರೂ ಕೆಲಸದಲ್ಲಿ ಏನೋ ತಡೆಯುಂಟಾದವರಂತೆ ಬಂದು ಭಟ್ಟರ ಕಟ್ಟಿಗೆ ಕುಳಿತುಕೊಂಡರು. ತಾಂಬೂಲ ಸೇವನ ನಡೆದಾಗ ಭಟ್ಟರೇ ಕೇಳಿದರು. "ಎರಡು ಮೂರು ದಿನ ನಿಮ್ಮ ಸಂಗಡ ನೋಡುತ್ತೇನೆ, ಆಪ್ತರೊ." ಗೊತ್ತು ಮಾಡಿಕೊಡುವ ಪ್ರಸಂಗವೇ ಬಂದ ಮೇಲೆ ಜೋಯಿಸರೂ ಹೇಳತೊಡಗಿದರು. "ಇವರು ಹಿಂದೆ ಹನ್ನೊಂದು-ಹನ್ನೆರಡರಲ್ಲಿ ಡೆಪ್ಯೂಟಿ ಕಮಿಶನರ ಇದ್ದರಲ್ಲ ರಾಘವೇಂದ್ರರಾಯರು, ಅವರ ಮಕ್ಕಳು. ಎಂ. ಎ. ಆಗಿದೆ. ಇಲ್ಲಿ ಶಿಲಾ ಶಾಸನಗಳ ಹಾಗೂ ಹಳೇ ಕಟ್ಟಡಗಳಲ್ಲಿಯ ಶಿಲ್ಪಶಾಸ್ತ್ರದ ವಿಶೇಷ ಅಭ್ಯಾಸ ಮಾಡಬೇಕೆಂದು ಇಲ್ಲಿ ಬಂದಿದ್ದಾರೆ. ಅದೆಲ್ಲಕ್ಕೂ ಹಳೆಯ ರಾಜಧಾನಿ-ಇದೇ ಮುಖ್ಯ ಊರು. ತಿಂಗಳೊಪ್ಪತ್ತು ಇರುವರು. ಇವರ ತಂದೆಯ ಕಾಲದಿಂದ ಋಣಾನುಬಂಧ. ಇವರ ಮನೆಯೊಳಗಿನ ಜಾತಕಗಳೆಲ್ಲವನ್ನು ನನ್ನಿಂದಲೇ ಬರೆಸಿದ್ದಾರೆ. ರಾಯರೇ ಮತ್ತೆ ಈ ರಾಮಾಭಟ್ಟರೆಂದರೆ ಜೀವಂತ ಕಥಾಸಂಗ್ರಹವಿದ್ದ ಹಾಗೆ. ಸುತ್ತಲಿನ ಹಳೇ ಸ್ಥಳಗಳು. ಅವುಗಳ ಕಥೆಗಳು ಎಲ್ಲ ಇವರಲ್ಲಿ ಸಿಗುವದುಂಟು. ನೀವು ಏನು ಬೇಕಾದರೂ ಇಲ್ಲಿ ಕೇಳಿರಿ.

"ಯಾತರದು, ಯಾತರದು. ಹಿರೇರ ಕಾಲದಿಂದ ಕಟ್ಟೀ ಮೇಲೆ ಕೂತು ಹೇಳುವ ಗೊಡ್ಡು ಕಥೆಗಳು. ನಮ್ಮ ನಿಮ್ಮಂಥ ಹಳ್ಳಿಗಾಡರಿಗೆ ಸರಿಬೀಳಬಹುದು. ರಾಯರಂಥ ವಿದ್ವಾಂಸರಿಗೆ ಅದರ ಉಪಯೋಗವೇನು? ಹೌದಲ್ಲೋ, ರಾಯರ!" ಎಂದರು.

ರಾಯರಂದರು 'ಹಾಗೇನು ತಿಳಿಯಬೇಡಿರಿ. ಎಷ್ಟೋ ಸಾರಿ ಅನೇಕ ತಲೆಗಳವರೆಗೆ ನಡೆಯುತ್ತ ಬಂದ ಕಥೆಗಳಲ್ಲಿ ಎಷ್ಟೋ ತಥ್ಯಾಂಶವಿದ್ದದ್ದು ಕಂಡು ಬಂದಿದೆ. ಇತಿಹಾಸ ಸಂಶೋಧನೆಗೆ ಅವು ಮಹತ್ವದ ಸಾಧನೆಗಳಾಗಿವೆ. ಎಷ್ಟೋ ಶಾಸನಗಳಲ್ಲಿಯ ಉಲ್ಲೇಖಗಳು ಆಯಾ ಭಾಗದ ಪ್ರಚಲಿತ

ಕಥೆಗಳ ದೃಷ್ಟಿಯಿಂದಲ್ಲದೆ ಅರ್ಥವಾಗುವಂತಿಲ್ಲ. ನಿಮ್ಮ ಸಹಾಯವೂ ನನಗೆ ಅಗತ್ಯಬೇಕು.

' ಖರೇ–ಸುಳ್ಳು ಸೋಸಿ ನೋಡುವ ಕೆಲಸ ನಿಮ್ಮದು. ನಮ್ಮದೇನು ಸಂಗ್ರಹದಲ್ಲಿದ್ದದ್ದು ಹೇಳುವದು. ಜೋಯಿಸರೇ, ಚಂದ್ರಗುತ್ತಿಗೆ ಕರೆದು ಕೊಂಡು ಹೋಗಿದ್ದಿರೋ ಇವರನ್ನು ? '

' ಇನ್ನೂ, ಇಲ್ಲ ! ನಾಳೆ ನಾಡದು ಹೋಗಬೇಕೆನ್ನುತ್ತೇನೆ. ಈಹೊತ್ತು ಇಲ್ಲೇ ಸಮೀಪದಲ್ಲಿ ಅಡವಿಯ ಮಧುಕೇಶ್ವರ ದೇವಸ್ಥಾನಕ್ಕೆ ಹೊರಟಿದ್ದೇವೆ.

' ಹಾಗೆ ಹೆಸರು ಬರಲು ಏನು ಕಾರಣ? ಏನಾದರೂ ಗೊತ್ತುಂಟೇ ?' ಎಂದು ರಾಯರು ಕೇಳಿದರು.

" ಹಿಂದಕ್ಕೆ ಮಧುಕೇಶ್ವರನ ಭಕ್ತನಾದ ಸಾಹುಕಾರನೊಬ್ಬ ಆಸ್ಥಳ ದಲ್ಲಿ ದೇವನ ಮಹಿಮೆಯಿಂದ ಕಳ್ಳರ ಕೈಯೊಳಗಿಂದ ಪಾರಾದನು. ಆ ಸ್ಥಳ ದಲ್ಲಿ ಅವನು ಗುಡೀ ಕಟ್ಟಿಸಿದನು. ಮುಂದೆ ಮುಂದೆ ಅದು ಕಳ್ಳ–ಕಾಕರರಿಗೆ ಆಶ್ರಯಸ್ಥಾನವಾಯಿತು. ಇತ್ತೀಚಿಗೆ ಬ್ರಿಟಿಶ್‌ರ ರಾಜ್ಯದ ನಂತರವೇ ಅದು ಕಡಿಮೆಯಾಗಿದೆ. ಇಲ್ಲವಾದರೇನು ಕೇಳುವಂತಿದ್ದಿಲ್ಲ. ಹಗಲು ಸಹ ಆ ಗುಡಿಯ ಕಡೆಗೆ ಯಾರೂ ಸುಳಿಯುತ್ತಿದ್ದಿಲ್ಲ. ಹಿಂದಕ್ಕೆ ಈ ಭಾಗದಲ್ಲಿ ಪ್ರಸಿದ್ಧ ಪುಂಡನಾದ ಮಾರನಾಯಕನ ಬೀಡು ಅದೇ ಆಗಿದ್ದಿತು "

" ನೋಡಿದರೋ ನಾನು ಹೇಳಿದ್ದು ಸರಿ ಹೋಯಿತೋ ಇಲ್ಲೋ, ನಡೆಯಿರಿ ತಡವಾಯಿತು ಹೊರಡುವಾ ಇನ್ನು "

× × × ×

ಅನಂತರ ರಾತ್ರಿಯ ಊಟವಾದ ಮೇಲೆ ದಿನಾಲು ನಿಯಮದಿಂದ ಭಟ್ಟರ ಕಟ್ಟೆಗೆ ಹೋಗಿ ಎರಡು ಮೂರು ತಾಸು ಕಳೆಯುತ್ತಿದ್ದರು. ಭಟ್ಟರ ಹರಟೆಯು ತನ್ನ ನಾವೀನ್ಯದಿಂದ ರಾಯರ ಮನವನ್ನು ಸೆಳೆಯಿತು. ಭಟ್ಟರ ಕಥಾನಿರೂಪಣ ಶಕ್ತಿಯೂ ಅಪ್ರತಿಮವಾದುದು. ನಡುನಡುವೆ ಸರ್ವಜ್ಞ, ದಾಸರ ಪದಗಳು ಇಲ್ಲವೆ ಜೈಮಿನಿಯೊಳಗಿನ ಬಿಡಿ ಪದ್ಯಗಳನ್ನು ಮೇಲಿಂದ ಮೇಲೆ ಉದ್ಧರಿಸುವರು. ಮಲೆನಾಡಿನ ಜೀವನಸೌಂದರ್ಯವನ್ನು ಬಣ್ಣಿಸುವ

ಪದ್ಯಗಳು ಅವರಲ್ಲಿ ತುಂಬಿದ್ದವು. ಸಹಜವಾಗಿಯೇ ರಾಯರ ಮೇಲೆ ಅದರ ಪರಿಣಾಮವಾಯಿತು. ಘಟ್ಟದ ಮೇಲಿನವರಿಗೆ ಘಟ್ಟದ ಕೆಳಗೆ ಹೋದೊಡನೆ ಆ ದರಿಗಳು, ಅಲ್ಲಿಯ ವನಶ್ರೀ, ಅಲ್ಲಿಯ ತೋಟ-ಪಟ್ಟಿಗಳು ಅಲ್ಲಿಯವರ ಸರಲಜೀವನ, ಹಸನ್ಮುಖವೃತ್ತಿ ಇವೆಲ್ಲವುಗಳು ಒಂದು ಬಗೆಯ ಮೋಹವನ್ನುಂಟು ಮಾಡುವವು. ತಿರುಗಿ ಬರಬೇಕಾದರೆ ಮರುಗದ ಜೀವವಿಲ್ಲ.

ನದೀ ತೀರದ ರಮ್ಯಸ್ಥಾನ. ಅಲ್ಲಿಯೇ ವಾಸ್ತವ್ಯಮಾಡುವ ವಿಚಾರ ವನ್ನು ರಾಯರು ಭಟ್ಟರೆದುರಿಗೆ ಮಾತಿನ ಓಘದಲ್ಲಿ ವ್ಯಕ್ತಮಾಡಿದರು. ಭಟ್ಟರೂ ತಮ್ಮ ಆನಂದವನ್ನು ತೋರ್ಪಡಿಸಿದರು.

"ರಾಯರೇ, ನಮ್ಮ ನಾಡೇ ಹಾಗಿದೆ. ಯಾರದಾದರೂ ಮನಸು ಸೆರೆ ಹಿಡಿಯುವಂತಹದು. ಸುಮ್ಮನೆ ಅಲ್ಲ. ಆದಿಕವಿ ಪಂಪನು ಸಹ ಅಂದಿದ್ದಾನೆ "ಆರಂಕುಶವಿಟ್ಟೊಡಂ ನೆನೆವುದೆನ್ನಮನಂ ಬನವಾಸಿದೇಶಮಂ" ಎಂದು.

ಮರುದಿನ ರಾಯರು ಬಂದು ಕೇಳಿದರು. "ಅಲ್ಲರೀ, ಅಡವಿಯ ಮಧು ಕೇಶ್ವರ ದೇವಸ್ಥಾನದ ಬಲಬದಿಗೆ ಇರೋ ಹಾಳು ಗದ್ದೆ ಯಾರದರಿ?

"ಯಾಕೆ" ಎಂದು ಭಟ್ಟರು ಕೇಳಿದರು.

"ಮನೆ ಕಟ್ಟಿಕೊಂಡಿರಲಿಕ್ಕೆ ಚನ್ನಾಗಿದೆ. ಹಾಳು ಬಿದ್ದಿದೆ ಏನೋ ಯೋಗ್ಯ ಬೆಲೆ ಕೊಟ್ಟು ಕೇಳಬೇಕೂ ಅಂತ"

"ನಮ್ಮದೇ" ಎಂದು ಭಟ್ಟರು ಹೇಳಿದರು.

"ಹಾಗಾದರೇನು? ನಿಶ್ಚಿಂತೆಯಾಯಿತು ಬಿಡಿರಿ. ನೀವೇನು ನಮ್ಮೊಳಗಿನವರಾದಿರಿ ಬಿಡಿರಿ. ಇರಬೇಕೆನ್ನುವವರಿಗೆ ಅನುಕೂಲ ಮಾಡಿಕೊಡುವ ಕರ್ತವ್ಯವೇ ನಿಮ್ಮದಾಗಿದೆ"

ಒಡಕು ಕಾಸು ಸಹ ಪ್ರಾಪ್ತಿಯಿಲ್ಲದ ಆ ಹಾಳು ಗದ್ದೆಗೆ ಈ ತರದಿಂದ ಗಿರಾಕಿ ಬಂದದ್ದು ನೋಡಿ ಭಟ್ಟರ ಬಾಯಿಗೆ ನೀರೊಡೆಯಿತು. 'ನಿಮಗೆಲ್ಲ ಕೊಡಬಹುದಾಗಿತ್ತು. ಆದರೆ ಅದು ನಮ್ಮ ಮನೆತನದಲ್ಲಿ ಬಹಳ ತಲೆಗಳಿಂದ ಇದೆ. ನಮಗೇನು ಅದು ಭಾರವಾಗಿಲ್ಲ. ಹಾಗೂ ದುಡ್ಡಿನ ಅಗತ್ಯವೂ ಇಲ್ಲ" ಎಂದರು.

“ ಅಗತ್ಯವಿಲ್ಲದಿದ್ದರೆ ಹಾಗೇ ಕೊಟ್ಟು ಬಿಡಿರಿ. ”

“ ತಕ್ಕೊಳ್ಳಿರಿ ” ಎಂದು ಭಟ್ಟರೆಂದರು.

“ ಚೇಷ್ಟೆ ಒತ್ತಟ್ಟಿಗಿರಲಿ. ಒಂದು ಮಾತು ಹೇಳಿರಿ. ಬಹಳಾದರೇನು ನೂರಿನ್ನೂರು ಹೆಚ್ಚು ಬೀಳಬಹುದು.

ಹೀಗೆ ಜಗ್ಗಾಟವಾಗಿ ಕೊನೆಗೆ ೬೦೦ ರೂಪಾಯಿಗಳಿಗೆ ಗದ್ದೆ ಒಪ್ಪಿತು. ರಾಯರು ಸಂಚಕಾರವೆಂದು ೫೦ ರೂ. ಆಗಲೇ ಕೊಟ್ಟು ಮರುದಿನ ಕರಾರುಪತ್ರ ಮಾಡುವದಾಗಿ ಹೇಳಿದರು. ಹದಿನೈದು ದಿನಗಳಲ್ಲಿ ಉಳಿದ ಹಣ ಕೊಟ್ಟು ವ್ಯವಹಾರ ಪೂರ್ತಿಮಾಡಿಕೊಳ್ಳಬೇಕು. ಭಟ್ಟರು ತಮ್ಮ ರೀತಿಯಂತೆ ಮರುದಿನ ಕರಾರುಪತ್ರದ ಕಚ್ಚಾಪ್ರತಿ ಓದಿ ತೋರಿಸಿದರು. ರಾಯರೆಂದರು ‘ ಮಾತು ಆದ ಹಾಗೆ ಬರೆದು ಬಿಟ್ಟೀರಲ್ಲ. ಕಾಯದೇದಿಂದ ದಸ್ತೈವಜಿನ ರೂಪ ಬರಬೇಕಾದರೆ ಕೆಲವು ನಿಯಮಿತ ಶಬ್ದಗಳು ಬರಲೇಬೇಕು. ಜಲತರು-ತೃಣ-ಕಾಷ್ಟ ನಿಧಿ-ನಿಕ್ಷೇಪ ಸಹಿತ, “ ನನ್ನದು ನನ್ನ ವಾರಸದಾರದೂ ಇಲ್ಲವೆ ವ್ಯುತ್ಯಪತ್ರ ನಡೆಸುವವರದು ಹಕ್ಕು ಇಲ್ಲ ” “ ಅಕ್ಕಲಹುಷಾರಿಯಿಂದ ಆತ್ಮಸಂತೋಷದಿಂದ ಬರಕೊಟ್ಟದ್ದು ” ಹೀಂಗೆಲ್ಲ ಶಬ್ದ ಇರಬೇಕು ಎಂದು ಹೇಳಿ ಆ ಪ್ರಕಾರ ಬರೆಸಿ ರಜಿಸ್ಟರ ಮಾಡಿಸಿದರು. ಆ ಮೇಲೆ ಹಣದ ವ್ಯವಸ್ಥೆ ಮಾಡುವದರ ದೆಸೆಯಿಂದ ಊರಿಗೆ ಹೋದರು. ಮುಂದೆರಡು ದಿನಗಳಲ್ಲಿ ಜೋಯಿಸರು ಭಟ್ಟರನ್ನು ಭೆಟ್ಟಿಯಾಗಿ ಮಾತಾಡಿಸಿದರು. ‘ ಯಾಕೆ ಭಟ್ಟರೇ, ಅಂತೂ ಹಿಡಿದರಲ್ಲ ದೊಡ್ಡ ಬೇಟೆಯನ್ನು ’

‘ ಯಾಕೆ, ನಿಮ್ಮ ಬಲೆಗೆ ಬೀಳಲಿಲ್ಲೆಂದು ಹೊಟ್ಟೆಕಿಚ್ಚೇ ? ’

‘ ಛೇ, ಛೇ, ಛೇ. ಎಂಥ ಮಾತಿದು. ಅನ್ಯಾಯ ಅನ್ಯಾಯ. ನಾವು ಯಾವಾಗಲೂ ‘ ಸರ್ವೇ ಜನಾಃ ಸುಖಿನೋ ಭವಂತು ’ ಎನ್ನುವವರು. ಹಾಗಿಲ್ಲದಿದ್ದರೆ ನಿಮಗೆ ಗುರುಬಲ ನೆಟ್ಟಗಿದೆ. ನಿಮಗೆ ವಿವಾಹಯೋಗವಿದೆ ಹೀಗೆಲ್ಲ ಹೇಳುತ್ತಿದ್ದೆವೇ? ನಿಮಗೇ ಹೇಳಿದ್ದಿಲ್ಲವೇ, ಈ ವರ್ಷ ನಿಮಗೆ ಅಕಸ್ಮಾತ್ ಧನಲಾಭವಿದೆಯೆಂದು ನೋಡಿರಿ. ಹೇಗೆ ನಮ್ಮ ಭವಿಷ್ಯ ನಿಜವಾಗುತ್ತಿದೆ ? ’

‘ ಇದೆಂಥದರಿ ? ಹೊಲಮನೆ ಮಾರಿದರೆ ಬರುವ ರೊಕ್ಕೆಲ್ಲ ಧನಲಾಭವೆಂದರೆ ತೀರಿಹೋಯಿತು. ಒಳ್ಳೇ ಭವಿಷ್ಯ. ’

'ನೋಡಿರಿ. ಮಾರುವದರಲ್ಲಿಯೂ ಇದೆ. ೫೦ಕ್ಕೆ ಯಾರೂ ಕೇಳದಿದ್ದ ಹಾಳುಗದ್ದೆ ೬೦೦ ಕ್ಕೆ ಹೋಗುವದೆಂದರೆ ಲಾಭವಲ್ಲದೆ ಮತ್ತೇನು.'

ಭಟ್ಟರು ಇಷ್ಟಕ್ಕೆ ಸೋಲುವವರೇ. ಏನಾದರೂ ಜೋಯಿಸರಿಗೆ ಶ್ರೇಯ ಕೊಡಬಾರದೆನ್ನುವವರು.

'ಕಸ್ಮಾತ್ ಎಂಬದು ಗೊತ್ತಿದ್ದ ಮೇಲೆ ಅಕಸ್ಮಾತ್ ಧನಲಾಭವು ಹೇಗಾದೀತು? ನನ್ನದಂತೂ ಗದ್ದೆ ಮಾರಿದ ಹಣ.'

'ಅಕಸ್ಮಾತ್ ಎಂದರೆ ಅನಪೇಕ್ಷಿತ ಎಂದರ್ಥ. ಹಾಗೆಂದರೆ ತೋರಿಕೆಗೊಂದು ಕಾರಣ ಇದ್ದೇ ಇರುವದು. ದೇವರು ಕೊಡುವದಕ್ಕೂ ಒಂದು ನಿಮಿತ್ತಬೇಕು. ಗಣಪ್ಪ ಭಕ್ತನಿಗೆ ಹೊನ್ನು ಕೊಟ್ಟ ಕಥೆ ನಿಮಗೆ ಹೇಳಬೇಕೇ ನಾನು'

'ಯೋಗ್ಯವಾದದ್ದನ್ನೇ ಹೇಳಿದಿರಿ. ಸೋಡತಿಯುವರ ಅಪ್ರತ್ಯಕ್ಷ ಎಜಂಟರು ನೀವು. ಸಾವಿರ ಮಂದಿಗೆ ಧನಲಾಭಯೋಗ ಹೇಳುವದು. ಉಳಿದವರಿಗಾಗಲಿ ಬಿಡಲಿ ನಿಮಗಂತೂ ಅಲ್ಪ ಲಾಭವಾದರೂ ಕಟ್ಟಿಟ್ಟಂತೇ. ಆ ಮೇಲೆ ಕೇಳಿದರೆ ಹೇಳಲಿಕ್ಕೆ ನೀವು ಸಿದ್ಧರೇ, ನಿಮಗೂ ಯೋಗವಿತ್ತು. ಆದರೆ ಮೊದಲನೆಯ ನಂಬರು ಬಂದವನಿಗೆ ನಿಮಗಿಂತ ಬಲವತ್ತರ ಯೋಗವಿತ್ತು' ಎಂದು.

'ಶಾಸ್ತ್ರ ಹೇಳಿದ್ದನ್ನು ನಾವು ಹೇಳುವೆವು. ನಮಗಂತೂ ವಿಶ್ವಾಸವಿದೆ. ಫಲ ಸಿಕ್ಕೇ ಸಿಗುವದು. ಇಷ್ಟಕ್ಕೇ ಏನಾಯಿತು, ನಿಮಗಿನ್ನು ಕಂಡು ಬಂದೀತು. ನೀವು ನಂಬಿರಿ ಬಿಡಿರಿ. ಬಲವಾನ್ ಯೋಗವಿದೆ. ಲಕ್ಷ್ಮಿ ಬರುವ ಕಾಲವಿದ್ದಾಗ ನೀವು ಮುಂಚೆಯ ಬಾಗಿಲ ಮುಚ್ಚಿದರೆ ನೆಲದಿಂದೆದ್ದು ಬರುವಳು. ಏನು ಹೇಳಲಿ ನಿಮಗೆ. ಮತ್ತೆ 'ಸಿರಿ ಬಂದ ಕಾಲಕ್ಕೆ ಕೊಟ್ಟುಂಬುವ ಜ್ಞಾನಿ' ನಮ್ಮ ಮಧುಕೇಶ್ವರಿಗೇನಾದರೂ ಸೇವೆ ಸಲ್ಲಿಸಿರಿ'

'ನೋಡಿದಿರಾ, ದಾಸರ ಪದದ ನಿಜವಾದ ಪಲ್ಲವಿಯೆಂದರೆ ಅವರು ಬೇಡುವ ದುಡ್ಡು.'

'ಮಹಾರಾಯಾ, ಆ ಅಖಿಲಕೋಟಿ ಬ್ರಹ್ಮಾಂಡನಾಯಕಗೇನು ಕಡಿಮೆಯಿದೆ' ನೀನು ಕೊಡು ಇಲ್ಲವೆ ಬಿಡು. ಈ ಜನ್ಮದಲ್ಲಿಯಂತೂ ನಿನಗೆ

ಕಡಿಮೆ ಇಲ್ಲ. ಮುಂದಿನ ಜನ್ಮಕ್ಕೆ ಬುತ್ತೀ ಕಟ್ಟೆಂದು ಹೇಳುವರು ಇಷ್ಟೇ.'

'ಇಚ್ಛೆಯೆಲ್ಲ ಇದೆ. ಅನುಕೂಲ ಇಲ್ಲರಿ' ಎಂದು ಎಂದಿನಂತೆ ಭಟ್ಟರು ಅತ್ತರು.

'ಯಾವಾಗಲೂ ನಿಮ್ಮದು ಇದೇ ಹಾಡು. ಈಗ ಅನಾಯಾಸ ಬಂದಿದೆಯಲ್ಲ ಸಂಚಕಾರದ ಹಣ. ಪರಸ್ಪರ ಕೊಟ್ಟು ಬಿಡಿರಿ ನೋಡೋಣ. ಉಳಿದ ಹಣ ನಿಮ್ಮ ಗೃಹಕೃತ್ಯಕ್ಕೆ ಬಳಿಸುವಿರಂತೆ.'

'ಎಲ್ಲಿದೆರೀ, ಅದಾದರೂ ಕೈಯಲ್ಲಿ. ನಿನ್ನೆಯೇ ಕಳಿಸಿದೆ ಮಗನ ಕಾಲೇಜ ಖರ್ಚಿಗೆಂದು.'

ಹೆಚ್ಚು ಹಿಚುಕಿ ನೋಡುವದರಲ್ಲೇನೂ ಅರ್ಥವಿಲ್ಲೆಂದು ತಿಳಿದು ಜೋಯಿಸರೂ ಅಷ್ಟಕ್ಕೇ ಬಿಟ್ಟರು.

× × × ×

ಅವರು ಹೋದ ನಾಕೆಂಟು ದಿನಗಳಲ್ಲಿ ಮತ್ತೊಬ್ಬ ಗೃಹಸ್ಥರು ಬಂದು ಅದೇ ಜಮೀನು ಮಾರುವದಿದೆಯೇನೆಂದು ಕೇಳಹತ್ತಿದರು. ಇಷ್ಟು ದಿನವಿಲ್ಲದೆ ಈಗ್ಗೇ ಧಾರಣಿ ಬಂದಹಾಗಿದೆ, 'ಯಾಕೆ, ಎಂತು' ಎಂದು ವಿಚಾರ ಮಾಡಿದರು. ಅವರಿಗೂ ಅಲ್ಲಿ ವಾಸ್ತವ್ಯ ಮಾಡಬೇಕೆಂಬ ಅಪೇಕ್ಷೆಯಂತೆ. ರಾಯರಂತೆ ಇವರೇನು ೧೦–೧೨ ದಿವಸವಿದ್ದು ಆನಂತರ ವ್ಯಕ್ತಪಡಿಸಿದ ಇಚ್ಛೆಯಿಲ್ಲ. ಏನೋ ವಿಚಿತ್ರವೆನಿಸಿತು.

'ಒಂದು ೮ ದಿನ ಮುಂಚೆ ಬಂದಿದ್ದರೆ ಒಳಿತಾಗುತ್ತಿತ್ತು. ೬೦೦ ಕ್ಕೆ ಒಪ್ಪಿ ಆ ಪ್ರಕಾರ ಕರಾರು ಪತ್ರ ನೋಂದ ಕೂಡಾ ಆಗಿದೆ.

'ಕಿಮ್ಮತ್ತಿನ ಪ್ರಶ್ನೆಯಿರಲಿಲ್ಲ. ಈಗೇನು ಮಾಡುವದು ಉಪಾಯವಿಲ್ಲ' ಎಂದು ಸೊಟ್ಟ ಮೋರೆ ಮಾಡಿ ರಾಯರಂದರು.

'ನಿಮಗೆ ಸ್ವಲ್ಪ ಬೆಲೆಯಲ್ಲಿ ಇಲ್ಲಿಯೇ ಮತ್ತೊಂದಾವುದಾದರೂ ನೋಡುವಾ. ಕೆಲವು ದಿನ ಇಲ್ಲೇ ಇರುವಿರಲ್ಲ ?'

'ಛೇ, ಛೇ. ಎರಡನೆಯದಾವುದೂ ಬೇಡ. ಅದೇ ಬೇಕಿತ್ತು.'

'ಅದೇಕೆ ? ಅಂಥದೇನಿದೆ ಅದರಲ್ಲಿ ?'

ಈ ಪ್ರಶ್ನೆಗೆ ಉತ್ತರ ಕೊಡಲೋ ಬೇಡೋ ಎಂದು ಕ್ಷಣಹೊತ್ತು ವಿಚಾರ ಮಾಡಿದರು. ಆಮೇಲೆ 'ನೋಡಿರಿ, ನನಗಿಲ್ಲವೆಂದ ಮೇಲೆ ನೀವು

ಆದರ ಒಡೆಯರು. ನಿಮಗಾದರೂ ಅದರ ಲಾಭವಾಗಲಿ. ಏನು ಬೇಕಾದ್ದು ಮಾಡಿರಿ. ಗದ್ದೆ ಮಾರಬೇಡಿರಿ.'

'ಈ ವ್ಯಾಪಾರ ಮುರಿಯುವದು ಹೇಗೆ? ಒಳ್ಳೇ ಬೆಲೆ ಬಂದಿದೆ.'

'ಆರು ನೂರೇಕೆ—ಆರು ಸಾವಿರಕ್ಕಿಂತ ಹೆಚ್ಚಿದೆ ಅದರಲ್ಲಿ. ಅದರಲ್ಲಿ ಒಂದು ನಿಧಿಯಿದೆ. ಒಂದು ಶಿಲಾಲೇಖದ ಮೇಲಿಂದ ತಿಳಿದು ಬಂತು.'

'ಆಂ. ಅಂತೇ ಹಾಗೆ ಶಬ್ದ ಹಾಕಿಸಿದರು ರಾಯರು ಅಂತ ಕಾಣಿಸುತ್ತದೆ.'

'ಏನೆಂತ'

"ಜಲ–ತರು–ತೃಣ–ಕಾಷ್ಠ–ನಿಧಿ–ನಿಕ್ಷೇಪ ಸಹಿತ ಎಂದು ಶಬ್ದ ಹಾಕಿಸಿದರು."

'ಛೇ, ಹಾಗೇನು ಲಕ್ಷಣ ಕಾಣುವದಿಲ್ಲರಿ. ಯಾಕಂದರೆ ಅವರ ಕೂಡ ಮೊನ್ನೆ ಮೊನ್ನೆ ಅದೇ ಶಿಲಾಲೇಖದ ವಿಷಯವಾಗಿ ಮಾತಾಯಿತು. ಅವರು ಅದನ್ನು ಬೇರೆ ವಿಧವಾಗಿ ಅರ್ಥಮಾಡಿದರು. ಬೇರೆ ಬೇರೆ ಶತಮಾನದ ವರ್ಣಮಾಲೆಗಳ ಸ್ವೀಕೃತ ಪದ್ಧತಿಗನುಸರಿಸಿ ಅವರು ಅರ್ಥಮಾಡಿದರು. 'ವಿಧಿವಿಹಿತ ಪೂಜಾದಶೆಗೆ ವಿನಿಯೋಗವಾಕ್ಕು' ಎಂದು ಅವರು ಓದಿದರು. ನಾನು ಅದನ್ನು ಸೂಕ್ಷ್ಮವಾಗಿ ಅಭ್ಯಾಸಿಸಿದ್ದೇನೆ. ಶಿಲ್ಪಿಯ ತಪ್ಪುಗಳಿಗೆ ಎಡೆಕೊಟ್ಟು, ಬ್ರಾಹ್ಮೀಲಿಪಿಯ ಸಂಬಂಧವನ್ನು ಅನುಲಕ್ಷಿಸಿದರೆ 'ನಿಧಿ ಸಹಿತ ಪೂರ್ವದಿಶೆಗೆ'—ಎಂದೇ ಸ್ಪಷ್ಟವಾಗುವದು. ನಡುವೆ ಅಸ್ಪಷ್ಟವಾದ ಒಂದು ಸಾಲು ಆದರ ಸ್ಥಳ ನಿರ್ದೇಶವೇ ಇರಬೇಕು.'

'ಇದೆಲ್ಲ ಸರಿ. ಆದರೆ ಈ ಕರಾರುಪತ್ರ ಪೊಂದಿದೆಯಲ್ಲ ಇದರ ಬಗೆಯೇನು? ಕೋರ್ಟಿಗೆಳೆದರೆ ಗದ್ದೆ ನಮ್ಮ ಕೈಬಿಡುವದೇ ನಿಶ್ಚಿತ.'

'ಹಾಗೆಯೇ ಅವರನ್ನು ಮಾತಾಡಿಸಿ ನೋಡಿರಿ. ನಿಧಿಯ ಸುಳಿವು ಹತ್ತಿದ್ದರೆ ಲವರು ತಮ್ಮ ಹಟವನ್ನೇ ಸಾಧಿಸುವರು. ಮನೆತನದಲ್ಲಿ ಬಹು ದಿವಸವಿದ್ದದ್ದು; ಗೌರವಾರ್ಥವಾಗಿ ರಾಜನಿಂದ ದೊರೆತ ಭೂಮಿಯೆಂದು ಮಾರುವ ಇಚ್ಛೆಯಿಲ್ಲವೆಂದು ತಿಳಿಸಿರಿ. ನೋಡೋಣ. ಬಿಡುಗಡೆಗಾಗಿ ಹಣ ಕೊಡುವೆವೆಂದು ಹೇಳಿರಿ. ಮನೆತನದ ಮರ್ಯಾದೆಯನ್ನಿರಿ. ಇನ್ನೊಂದು ತೋಟ ಇಲ್ಲವೆ ನಗದ ಹಣ ೨ಸಾವಿರದ ವರೆಗೂ ಅನುಮಾನವಿಲ್ಲದೆ

ಕೊಡಿರಿ. ಏನೂ ಹಾನಿಯಿಲ್ಲ. ಅವರು ಬಿಗಿ ಹಿಡಿದರೆ ಉಪಾಯವಿಲ್ಲ. ಅವರಿಗೂ ತಿಳಿದಿದೆಯೆಂದು ಕೈ ಬಿಡಿರಿ. ಅದೇ ಚಿನ್ನ. ಅವರು ಒಪ್ಪಿಕೊಂಡರೆ ನೀವು ಬದುಕಿದಿರಿ.' 'ಅಹುದರಿ. ಇಷ್ಟಾದರೂ ನಾನು ಮತ್ತೆ ಕುರುಡನೇ ಅಲ್ಲ. ನಮಗೇನು ತಿಳಿಯುವದು ಶಾಸನಗಳಲ್ಲಿ. ನಿಮ್ಮಂಥ ತಜ್ಞರ ಸಹಾಯ ನಮಗೆ ಬೇಕು.'

'ಅರ್ಧ ಪಾಲು ಕೊಟ್ಟರೆ ನಾವು ಅದನ್ನು ಕೊಡಲು ಸಿದ್ಧರಿದ್ದೇವೆ.' ಅರ್ಧಕ್ಕರ್ಧ ಕೊಡುವದೆಂದರೆ ಇವರ ಪ್ರಾಣ ಹೋದಂತಾಯಿತು.

'ಅದು ನನ್ನದೋ, ನಿಮ್ಮದೋ' ಎಂದು ರೇಗಿದರು ಭಟ್ಟರು.

'ಇದೆಯೆಂಬುದು ನಿಮಗೆ ಗೊತ್ತು ಕೂಡ ಇರಲಿಲ್ಲ. ಈಗ ತಿಳಿದರೂ ನನ್ನದೇ ಸಹಾಯವಿಲ್ಲದೆ ಏನೂ ಸಾಗದು. ನೋಡಿರಿ. ಏನೋ ಸ್ವಾಮಿತ್ವವೆಂದು ನಿಮ್ಮ ಪಾಲು. ವಸ್ತುತಃ ಶ್ರೇಯವೆಲ್ಲ ನನ್ನದೇ.'

'ಒಳ್ಳೇ ನ್ಯಾಯ. ನಿಮ್ಮ ವಿದ್ವತ್ತೆಯ ಸಹಾಯಕ್ಕೆ ಪ್ರತಿಫಲವೆಂದು ನಿಮಗೆ ಕೊಡುತ್ತೇನೆ. ಏನು ನಿಮ್ಮ ಫೀ ಹೇಳಿರಿ. ಪಾಲೇನು ಕೇಳಬೇಡಿರಿ.'

ಅಂತೂ ಇಂತೂ ಜಗ್ಗಾಟವಾಗಿ ಕೊನೆಗೆ ೫೦೦ ರೂ. ರೋಖು ಹಾಗೂ ನಿಧಿಯ ⅓ ಪಾಲು ಎಂದು ನಿರ್ಣಯವಾಯಿತು. ಎಷ್ಟು ಅರೆದಾಡಿದರೂ ತಮ್ಮ ಪಾಲು ಬಿಡಲಿಕ್ಕೆ ಒಪ್ಪದಿದ್ದದ್ದನ್ನು ನೋಡಿ ಭಟ್ಟರಿಗೆ ನಿಧಿಯ ಅಸ್ತಿತ್ವ ವಿಷಯಕ್ಕೆ ಸಂಶಯಪಟ್ಟುಕೊಳ್ಳಲು ಆಸ್ಪದವೇ ಇರಲಿಲ್ಲ. ಭಟ್ಟರು ಹೊನ್ನಿನ ವರಹಗಳ ಕನಸು ಕಾಣತೊಡಗಿದರು.

ನಾಲ್ಕೈದು ದಿನಗಳು ಹಾಗೆಯೇ ಸಂದುವು. ಮೊದಲಿನ ರಾಯರು ಈ ವರೆಗೂ ಬರಲಿಲ್ಲ. ಇನ್ನು ೨-೩ ದಿನ ಅವಧಿ ಉಳಿದಿತ್ತು. ಬಾರದೇ ಇದ್ದರೆ ಬಹಳೇ ಗುಣವೆನ್ನುತ್ತಿದ್ದರು. ೨ ದಿನವೂ ಕಳೆದುಹೋದವು. ಆದರೆ ಭಟ್ಟರ ದುರ್ದೈವ. ೩ ನೇ ದಿನ ಹಣ ತಕ್ಕೊಂಡು ರಾಯರು ಸಿದ್ಧರಾದರು. ಖರೀದಿ ಪತ್ರವಾಗಲಿ ಎಂದರು. ಭಟ್ಟರು ರೊಳ್ಳೀ ತೆಗೆದರು. ಅಜ್ಜ ಆರು ತಲೆ, ಮುತ್ಯಾ ಮೂರು ತಲೆ ನಡೆದುಬಂದುದೆಂದು ಹೇಳಿದರು. ರಾಜ್ಯಾಭಿಷೇಕದ ವೇದಘೋಷಕ್ಕಾಗಿ ದೊರೆತ ಉಂಬಳಿ, ರಾಜವೈಭವದ ಚಿನ್ಹವೆಂದು ಹೇಳಿದರು. ಯಾವುದಕ್ಕೂ ಮನ ಕರಗಲಿಲ್ಲ. ಹಣ ಕೊಡುವ

ಮಾತನ್ನು ನಿರ್ವಾಹವಿಲ್ಲದೆ ಭಟ್ಟರೇ ತೆಗೆಯಬೇಕಾಯಿತು. ಮೊದಮೊದಲು ರಾಯರು ಇಲ್ಲೆಂದರು. ಕೊನೆಗೆ ಸಾವಿರದ ವರೆಗೆ ಅಂಕಿ ಮುಟ್ಟಿದಾಗ ಒಪ್ಪಿಕೊಂಡರು. ಆದರೂ ಸಂಚಕಾರದ ಹಣ ೫೦ ಆದರಲ್ಲಿ ಹಿಡಿಯಕೂಡದು ಎಂದು ಟಿಪ್ಪಣಿ ಜೋಡಿಸಿದರು. ಭಟ್ಟರ ಮನ ಮರಗುತ್ತಿತ್ತು, ತಿಂಗಳೊಪ್ಪತ್ತು ತಡೆಯಲಿಲ್ಲೇಕೋ ಎಂದು. ಆದರೂ ಹೊನ್ನಿನ ಕೊಪ್ಪರಿಗೆಯ ಕಡೆಗೆ ಲಕ್ಷವಿಟ್ಟು ಹೇಗೋ ಅದನ್ನು ನುಂಗಿಕೊಂಡರು. ರಾಯರು ಸಾವಿರದ ಐವತ್ತು ರೂಪಾಯಿ ತಕ್ಕೊಂಡರು. ಆ ವ್ಯವಹಾರ ಸ್ವಸಂತೋಷದಿಂದ ಬಿಟ್ಟುಕೊಟ್ಟ ಬಗ್ಗೆ ಆ ಮಿತಿಗೂ ಒಂದು ಲೇಖ ಬರಕೊಟ್ಟರು. ಅರ್ಥಾತ್ ಅದರಲ್ಲಿಯ ತಕ್ಕೊಂಡ ಹಣದ ಬಗ್ಗೆ ಏನೂ ಉಲ್ಲೇಖವಿರಲಿಲ್ಲ ಇದಾದ ಮೇಲೆ ಭಟ್ಟರು ಒಂದು ನಿಶ್ವಾಸ ಬಿಟ್ಟು ಮುಂದಿನ ಉದ್ಯೋಗಕ್ಕೆ ತೊಡಗಿದರು. ಒಪ್ಪಿದ ಮೇರೆಗೆ ಸಂಶೋಧಕರಿಗೆ ೫೦೦ ಕೊಟ್ಟು ಲೇಖವನ್ನು ಓದಿಸಿಕೊಂಡರು. ಅವರ ಕೊನೆಗೆ ದೇವತಾಶಾಂತಿ ಹೇಳಿತ್ತು. ಆ ಪ್ರಕಾರ ವಿಪ್ರಸಂತರ್ಪಣೆಯೂ ಆಯಿತು.

ಆ ಮೇಲೆ ನಿಧಿಯನ್ನು ವಶಪಡಿಸಿಕೊಳ್ಳುವದು. ಅದಕ್ಕೆ ಅಂಜನ ಹಚ್ಚುವವನೊಬ್ಬನನ್ನು ತರಬೇಕಲ್ಲ. ಅದಕ್ಕೇನೋ ಕಾಲು ಮುಂದಾಗಿ ಹುಟ್ಟಿದವರಿರಬೇಕಂತೆ. ಗುಪ್ತವಾಗಿ ಶೋಧವಾಗಬೇಕು. ಸರಕಾರದ ವರೆಗೆ ಹೋಯಿತೆಂದರೆ ಬಹುಭಾಗ ಬೊಕ್ಕಸಕ್ಕೆ ಹೋಗುವದು. ಯಾರಿಗೂ ಸುಳಿವಿಲ್ಲದಂತೆ ಸಾಗಿತು. ರಾಯರು, ಭಟ್ಟರು ಇಬ್ಬರೇ ಒಳಗುಟ್ಟಿನವರು. ಅಂಜನದವನು ಮೊದಲನೇ ಬಾರಿಗೆ ಕೋಣದ ಕಾವಲಿದೆಯೆಂದು ಹೇಳಿದನು. ಆಯಿತು ಮಂತ್ರಜ್ಞನನ್ನು ಕರೆತಂದರು. ರಾತ್ರಿಯ ಹೊತ್ತು ಅಗಿಯಲಿಕ್ಕೆ ಸುರುವಾಯಿತು. ಬೆಳ್ಳಬೆಳಕೂ ಮಂತ್ರ-ತಂತ್ರಗಳ ವ್ಯಾಪ ನಡದೇ ಇತ್ತು. ಈ ಗದ್ದಲದಲ್ಲಿ ಸಂಶೋಧಕರೆಲ್ಲಿಯೋ ನುಸಿಳಿ ಹೊರಟುಹೋಗಿದ್ದರು. ೧-೧॥ ಆಳುದ್ದ ತೆಗ್ಗು ಮಾತ್ರ ಆಯಿತು. ಬೆಳಕು ಹರಿಯುವದರೊಳಗೆ ಮಂತ್ರದವರು, ಅಂಜನದವರೂ ತಂತಮ್ಮ ಊರಿಗೆ ಹೊರಟರು. ತಮ್ಮ ಪಾಲಿನ ಮೇಲಿನ ಆಶೆಯನ್ನು ಬಿಟ್ಟೇ ಹೋಗಿದ್ದರು.

ಭಟ್ಟರು ತಮ್ಮ ಮೂರ್ಖತನವನ್ನು ಮುಚ್ಚಿಕೊಳ್ಳುವದಕ್ಕಾಗಿ ಭಾವಿ ಅಗಿಯುವದನ್ನು ಮುಂದಕ್ಕೆ ಸಾಗಿಸಿದರು.

ದುಡ್ಡು ಹೋದರೂ ಸೈ–ಇದ್ದೂರವರಿಗಾರಿಗೂ ತಿಳಿಯಲಿಲ್ಲವಲ್ಲ–ನಗೆಯಾಗಲಿಲ್ಲವಲ್ಲ ಎಂದು ಅಷ್ಟೇ ಸಮಾಧಾನ ಹಚ್ಚಿಕೊಂಡರು.
ಆದರೆ ಇದೂ ಅವರಿಗೆ ಬಹಳ ದಿನ ಲಭಿಸಲಿಲ್ಲ. ಜೋಯಿಸರು ಒಂದು ದಿನ ಕೇಳಿದರು.

"ಏನು ಭಟ್ಟರೇ, ಗದ್ದೆಯ ಸಾಗುವಳಿ ಪುನಃ ಸುರುಮಾಡುವ ವಿಚಾರವಾದಂತೆ ಕಾಣುತ್ತದೆ. ತಜ್ಞರ ಸಲಹೆಯೂ ಸಿಕ್ಕಂತೆ ತೋರುತ್ತದೆ. ನಮಗೆ ಹೇಳಬಾರದೇನು? ಇಷ್ಟು ದಿನ ನಿಮ್ಮ ಮನೆಯಲ್ಲಿದ್ದವರೇನು ವಾಟರ ಡಿವೈನರರೋ? ನಾವೂ ಅಷ್ಟು ಅವರ ಸಲಹೆ ಕೇಳುತ್ತಿದ್ದೆವು."

ಭಟ್ಟರು ಸ್ವಲ್ಪ ಜಂಬದಿಂದಲೇ ಉತ್ತರಕೊಟ್ಟರು 'ಅದು ನಿಮ್ಮ ತುತ್ತಲ್ಲ.'

"ಹಾಂ. ಹಾಂ. ನಾನೂ ಹಾಗೆಯೇ ಏನೋ ಸುದ್ದಿ ಕೇಳಿದೆ. ಅವರ ರುಸುಂ (ಫೀ) ಭಾರಿಯೆಂದು. ಸಾವಿರ, ಐನೂರರ ಕೆಳಗೆ ಮಾತೇ ಇಲ್ಲವಂತೆ. ಅವರಾದರೂ ಹೇಳಿದುದಿಷ್ಟೇ ಅಲ್ಲವೇ? ನೀರು ಎಲ್ಲಿ, ಎಷ್ಟು ಕೆಳಗೆ ಹತ್ತುತ್ತದೆಂಬುದು. ನಾನು ಹೇಳಿದಂತೆ ಮಾಡಿ ನನ್ನದೊಂದು ಮಾತು ಕೇಳಿದ್ದರೆ ನಾನೇ ಹೇಳುತ್ತಿದ್ದೆನಲ್ಲ. ಇಷ್ಟೆಲ್ಲ ತೊಂದರೆಯೇಕೆ ಪಟ್ಟುಕೊಂಡಿರಿ."

ನೋಡಿರಿ. ನಮ್ಮಲ್ಲಿಯೂ ಆ ಶಾಸ್ತ್ರವಿದೆ. ಪೂರ್ವಾಪರ ಹೇಳುತ್ತ ಬಂದಿದ್ದೇವೆ. ಆದರೂ ನಿಮಗೆ ಈ ಹೊಸ ಕಾಲದ ತಜ್ಞರೇ ಬೇಕಲ್ಲವೇ? ಮಾಡುವದೇನು? ಕಾಲವೆಂದ. ಉಗುರಿನಿಂದ ಹೋಗುವುದಕ್ಕೆ ಕೊಡಲಿ

ಹೇಳಬೇಕೆಂದರೆ ಭಟ್ಟರ ಭಾವಿಗೆ ನೀರು ಕೂಡ ಹತ್ತಲಿಲ್ಲ.

ಅಸತ್ಯನಾರಾಯಣ

ಶ್ರೀನಿವಾಸರಾಯರು ಕರ್ನಾಟಕದ ಸುಪ್ರಸಿದ್ಧ ಕಥೆಗಾರರು; ಕವಿಗಳು. ಅವರಲ್ಲಿ ಪ್ರತಿಭೆಯ ಹಿತಶತ್ರುವಾದ ಓರಣದ ಅಭಾವವಿತ್ತು. ಅವರ ಕೋಣೆಯೆಂದರೆ ಅವ್ಯವಸ್ಥೆಯ ಪೊಟ್ಟಿ. ಪುಸ್ತಕಗಳು, ಬಿಡಿ ಕಾಗದಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುತ್ತಿದ್ದವು. ಮಸಿಯ ಕಲೆಗಳಿಂದ ಮೂಲ ವರ್ಣವನ್ನು ಬಹುಶಃ ಮರೆಮಾಡಿದ ಮಾಸಿದ ಜಮಖಾನಿಯೊಂದರ ಮೇಲೆ ಅಭ್ಯಾಗತರಿಗೆಂದು ೨-೩ ಲೋಡುಗಳಿರುತ್ತಿದ್ದವು. ಆದರೆ ಅವಕ್ಕೆ ಆತುಕೊಂಡು ಕುಳಿತುಕೊಳ್ಳಬೇಕಾದರೆ ಹರವಿದ ಕಾಗದಗಳನ್ನೆತ್ತಿ ಇಡದೆ ಅವಕಾಶವಾಗುತ್ತಿರಲಿಲ್ಲ. ಇಂಥ ಕೋಣೆಯಲ್ಲಿ ಬೆತ್ತದ ಆರಾಮ ಕುರ್ಚಿಯ ಮೇಲೆ ಒರಗಿದರೇ ಅವರಿಗೆ ಸಮಾಧಾನ. ತಾನು ವಿಧಿಸಿದ ಶಾಸನಗಳಂತೆ ನಡೆದಿರುವ ರಾಜ್ಯದ ರಾಜನಿಗಿರುವ ಸಮಾಧಾನ. ಆ ಕುರ್ಚಿಯ ಹಿಂದಿನ ಎರಡೂ ಕಾಲುಗಳು ಅವರು ಆರಿಸಿದ ಸಿಗರೇಟುಗಳ ತಪ್ತಮುದ್ರೆಗಳಿಂದ ಅಂಕಿತವಾಗಿದ್ದವು. ಊಟ ಉಡಿಗೆಗಳಲ್ಲಿಯೂ ಅವರಿಗೆ ಮಿತಿಮೀರಿದ ಅಲಕ್ಷ್ಯ. ಪಲ್ಲೆ ತರುವೆನೆಂದು ಪೇಟೆಗೆ ಬರಿ ಶರಟಿನ ಮೇಲೆ ಮುಂಜಾನೆ ಹೋದವರು ಸಂಜೆಯ ಊಟಕ್ಕೆ ಮನೆಗೆ ಬಂದರೆ ಅವರ ಮಗಳ ಪುಣ್ಯ. ಎರಡು ಹೊತ್ತು ವೇಳೆಗೆ ಸರಿಯಾಗಿ ಊಟವಾಗುವದು ಅಪರೂಪ. ಒಮ್ಮೊಮ್ಮೆ ಮಧ್ಯಾಹ್ನ ೩-೪ ಗಂಟೆಯ ಸುಮಾರಿಗೆ ಒಮ್ಮೆಲೆ ಎರಡೂ ಹೊತ್ತಿನ ಊಟವಾಗುತ್ತಿತ್ತು. 'ಮಾಡಿದ ಅನ್ನವೆಲ್ಲ ಆರಿ ಹೋಯಿತು, ಎಷ್ಟು ಹೊತ್ತು ದಾರಿ ಕಾಯಬೇಕು' ಎಂದರೆ 'ಪರವಾ ಇಲ್ಲ. ಅದರಲ್ಲೇನು' ಎಂದು ಉತ್ತರ ಕೊಡುತ್ತಿದ್ದರು. ರಾಯರ ಮನೆ ಊರಿಸಿಂದೆರಡು ಮೈಲು ದೂರ. ಅಪರಾತ್ರಿ ಮಾಡಿಕೊಂಡು ಚಳಿಗಾಳಿಯಲ್ಲಿ ಬಂದರೆ ಜಡ್ಡು ಬಿದ್ದೀರೆಂದು ಅನೇಕ ಸಾರೆ ಮಗಳು ಹೇಳಿದ್ದರೂ ಇಳಿಯುವ ಸೂರ್ಯನಿಗೆ ಅವರು ಮನೆ ಸೇರುವದನ್ನು ನೋಡುವ ಭಾಗ್ಯವೊಮ್ಮೆಯೂ ಒದಗಿರಲಿಲ್ಲ. ಸ್ನಾನ ಮಾಡಬೇಕೆಂದು ದುಂಬಾಲ ಬಿದ್ದಾಗಲೇ ಇವರ ಸ್ನಾನವಾಗುವದು.

ಒಟ್ಟಾರೆ ಒಂದು ಸಣ್ಣ ಕೂಸಿನಂತೆ ಅವರ ಹೊಟ್ಟೆನೆತ್ತಿ ನೋಡಿಕೊಳ್ಳದಿದ್ದರೆ ಈಗಾಗಲೇ ರಾಯರು ಎಷ್ಟೋ ಶ್ರಾದ್ಧಗಳನ್ನು ಕಂಡಿರುತ್ತಿದ್ದರು.

ರಾಯರ ಹೆಂಡತಿಯು ೧೪ ವರ್ಷಗಳ ವರೆಗೆ ಈ ವನವಾಸವನ್ನನುಭವಿಸಿ ಅವರನ್ನು ಸಲುಹುವ ಭಾರವನ್ನು ತಮ್ಮ ೧೦ ವರ್ಷದ ಕಮಲೆಯ ಮೇಲೆ ನೂಕಿ ಹೋಗಿದ್ದಳು. ಅಂದಿನಿಂದ ಈಗ ೫ ವರ್ಷ ಮಗಳಾದರೂ ಅದನ್ನು ದಕ್ಷತೆಯಿಂದ ಸಾಗಿದ್ದಳು

ಮಗಳ ಮೇಲೆ ರಾಯರ ಪ್ರೀತಿ ಬಹಳ. ಅವಳ ಸುಖದ ಬಗ್ಗೆ ಅವರ ಆಸ್ಥೆಯೂ ಹಾಗೆಯೇ ಸುಖವು ಮಾತ್ರ ಮನದ ಸಿರಿವಂತಿಕೆಯ ಮೇಲೆಯೇ ಅವಲಂಬಿಸಿರುತ್ತದೆಂಬದು ಅವರು ಕಂಡುಂಡ ಮಾತು. ಈ ವೈಭವವು ಸಾಹಿತಿಗಳಲ್ಲಿಯೇ ಇರುವದೆಂಬದು ಅವರಿಗೊಂದು ಅಭಿಮಾನದ ಸಂಗತಿ. ದಾರಿದ್ರ್ಯವಿಲ್ಲದಲ್ಲಿ ಅದು ಸಿಗುವದು ಅಪರೂಪ- ಆದ್ದರಿಂದ ತಮ್ಮ ಅಳಿಯನು ಬಡವನಿದ್ದರೂ ಚಿಂತಿಯಿಲ್ಲ, ಅದೇಕೆ ಬಡವನೇ ಇರಬೇಕು; ಕವಿಯಿರಬೇಕೆಂದು ಅವರು ನಿಶ್ಚಯಿಸಿಕೊಂಡಿದ್ದರು. ತಮ್ಮ ಒರೆಗೆ ಇಳಿದವರನ್ನು ಕರೆದುಕೊಂಡು ಬಂದು ಕೆಲ ದಿನ ಮನೆಯಲ್ಲಿಟ್ಟುಕೊಳ್ಳುವದು, ಸಹಜ ಸ್ನೇಹದಿಂದ ಮನೋಮೀಲನವಾದರೆ ಅವನಿಗೆ ಧಾರೆಯೆರೆದು ಕೊಟ್ಟು ಕೈತೊಳೆದುಕೊಳ್ಳಬೇಕೆಂದು ಅವರ ಸಂಕಲ್ಪ. ಅವರು ಆರಿಸಿದ ವರಸಂಶೋಧನದ ಈ ಮಾರ್ಗದ ಫಲವೆಂದರೆ ಈಗ ೩ ವರ್ಷಗಳಿಂದಲೂ ಅವರ ಮನೆಯು ಅನೇಕ ಬಡ ವಿದ್ಯಾರ್ಥಿಗಳಿಗೆ ಆಶ್ರಯಸ್ಥಾನವಾಗಿ ಹೋಗಿತ್ತು. ಧರ್ಮಶಾಲೆಯಂತಾಗಿತ್ತು. ಹೀಗೆ ತಂಗಿದವರಲ್ಲಿ ಕಿಟ್ಟಯೇ ಕಡೆಯವನಾದನು.

'ಕಿಟ್ಟ' ಶ್ರೀನಿವಾಸರಾಯರ ಪರಿಚಯವಾದದ್ದು ಮೊದಲು ವಾಚನಾಲಯದಲ್ಲಿ. ದಿನಾಲೂ ಬಾಗಿಲಿಕ್ಕುವವರೆಗೆ ಓದುತ್ತ ಕೂಡುವ ಹುಡುಗನಲ್ಲಿ ವಾಙ್ಮಯಾಭಿರುಚಿ ಇದ್ದೇ ಇರಬೇಕು. ಹದಿನೈದು ದಿನ ಒಂದೇ ಸಮನೆ ನೋಡಿ ಕೊನೆಗೊಂದು ದಿನ ಮಾತನಾಡಿಸಿದರು, 'ತಮ್ಮಾ, ಏನು ಓದುತ್ತಿದ್ದಿ?' ಯೆಂದು. ಕರ್ಮಧರ್ಮ ಸಂಯೋಗದಿಂದ ಅವನು ಇವರದೇ ಒಂದು ಕಥೆಯ ಹೆಸರು ಹೇಳಬೇಕೇ! ಸಾಲದುದಕ್ಕೆ 'ಚೆನ್ನಾಗಿತ್ತು. ಅರ್ಧಕ್ಕೇ ನಿಲ್ಲಿಸಬೇಕಾಯಿತು.' ಎಂದ.

‘ ನಿನ್ನದಷ್ಟು ಲವಲವಿಕೆಯಿದ್ದರೆ ನನ್ನ ಸಂಗಡ ಬಾ. ನನ್ನಲ್ಲೊಂದು ಪ್ರತಿಯಿದೆ. ’ ಎಂದರು. ಕೃತಿ ಚೆನ್ನಾಗಿದೆಯೆಂದರೆ ಮೈಮೇಲಿನ ಕೋಟನ್ನಾದರೂ ಕೊಡುವ ಸ್ವಭಾವ ರಾಯರದು.

ಹುಡುಗನು ವಾರದ ಮನೆಗೆ ಹೋಗಲಿಕ್ಕೆ ತಡವಾಗುವದೆಂದನು.

ವಾರ ಹಚ್ಚಿಕೊಂಡು ಕಲಿಯುವನೆಂದು ತಿಳಿದ ಕೂಡಲೆ ರಾಯರ ನಿಶ್ಚಯವಾಯಿತು.

‘ ಅಷ್ಟೊಂದು ಬಳಲಬೇಡ. ನಮ್ಮ ಮನೆಯಲ್ಲಿಯೇ ಇರುವಿಯಂತೆ ನಡೆ. ವಾರದ ಮನೆ ಬಿಟ್ಟು ಬಿಡು ಇನ್ನು. ’ ಎಂದರು.

‘ ಮನೆ ಎಲ್ಲಿ ? ’ ಎಂದು ಕಿಟ್ಟಿ ಕೇಳಿದ.

‘ ನಮ್ಮ ಮನೆ ಗೊತ್ತಿಲ್ಲವೆ ಆ—ಪೇಟೆಯಲ್ಲಿ ? ’

‘ ಓಹೋ ! ಹಾಗಾದರೆ ಈ ಕಥೆ ಬರೆದ ಶ್ರೀನಿವಾಸರಾಯರು ತಾವೆಯೋ ? ’

ಆ ಪ್ರಶ್ನೆಯಲ್ಲಿ ಅವರ ವಿಷಯಕ್ಕೆ ಅವನಿಗಿದ್ದ ಆದರವು ಒಡೆದು ಕಾಣುತ್ತಿತ್ತು.

‘ ಹೂಂ ’ ಎಂದು ರಾಯರು ಮುಂದೆ ಸಾಗಿದರು.

‘ ಬಹಳ ದಿನಗಳಿಂದ ತಮ್ಮನ್ನು ಕಾಣಬೇಕೆಂದು ಬಯಸುತಿದ್ದೆ. ಏನೋ ಧೈರ್ಯ ಸಾಲದು. ’

‘ ಅದೇನು ಕಾರಣ ? ’

‘ ನಾನೂ ಕೆಲವು ಕವಿತೆಗಳನ್ನು ಬರೆದಿದ್ದೇನೆ. ತಮ್ಮ ಅಭಿಪ್ರಾಯ ಕೇಳಬೇಕೆಂದಿದ್ದೆ. ’ ತಪ್ಪು ಒಪ್ಪಿಕೊಳ್ಳುವವನ ದನಿಯಲ್ಲಿ ಕಿಟ್ಟಿ ನುಡಿದ.

ರಾಯರಿಗೆ ತಮ್ಮ ತರ್ಕವು ನಿಜವಾದದದ್ದಕ್ಕಾಗಿ, ತಮ್ಮ ಮನೀಷೆಯಂತೆ ಒದಗಿ ಬಂದದ್ದಕ್ಕಾಗಿ ಆನಂದವಾಯಿತು.

‘ ಆಗಬಹುದು, ಆಗಬಹುದು. ’ ಎಂದು ಮೆಲ್ಲಗೆ ನುಡಿದರು. ಅಂದಿನಿಂದ ಕಿಟ್ಟಿ ಅವರ ಮನೆಯವನಾದ.

ಮಾರನೆಯ ರವಿವಾರ ಕಿಟ್ಟಿಯ ಕವಿತಾ ವಾಚನವಾಯಿತು. ರಾಯರು ವಾಡಿಕೆಯಂತೆ ನಾಲ್ಕು ಉತ್ತೇಜನ ಮಾತು ಹೇಳಿದರು. ಹಾಗೆಯೇ ೪-೫ ತಿಂಗಳು ಕಳೆದವು.

× × × ×

ಇತ್ತೀಚೆಗೆ ಕಿಟ್ಟಿ ಕಮಲೂ ಕೂಡಿಯೇ ಸಂಜೆಯ ಮುಂದೆ ತಿರುಗಾಡಲಿಕ್ಕೆ ಹೋಗುವ ಪರಿಪಾಠವಿತ್ತು. ಆಗ ಕಿಟ್ಟಿಯು ತನ್ನವೆಂದು ಕೆಲವು ಕವಿತೆಗಳನ್ನು ಹಾಡಿ ತೋರಿಸುವನು. ಶಬ್ದಗಳೇನೂ ಸ್ಪಷ್ಟವಾಗಿ ಕೇಳ ಬರುತ್ತಿರಲಿಲ್ಲ. ದನಿಯು ಮಾತ್ರ ಇಂಪಾಗಿರುತ್ತಿತ್ತು. ಅವನ ಆಗ್ರಹಕ್ಕೆ ಕಮಲೆಯೂ ಒಮ್ಮೊಮ್ಮೆ ಹಾಡು ಅನ್ನುವಳು. ಅವಳಂತೂ ನಾಡಹಬ್ಬದ ಉತ್ಸವದಲ್ಲಿ ಕವಿತಾಗಾಯನಕ್ಕಾಗಿ ಪಾರಿತೋಷಕವನ್ನು ಪಡೆದವಳು. ಕಿಟ್ಟಿಯು ಮುಗ್ಧನಾಗುತ್ತಿದ್ದನೆಂದರೆ ಆಶ್ಚರ್ಯವಲ್ಲ.

ಈ ಕ್ರಮವಿಟ್ಟ ಮೂಲಕ ಕಿಟ್ಟಿಯು ಈಗ ಸಂಜೆಯ ಮುಂದೆ ವಾಚನಾಲಯಕ್ಕೆ ಹೋಗುತ್ತಿರಲಿಲ್ಲ. 'ಅದೇಕೆ ಬರುವದಿಲ್ಲವೆ'ಂದು ರಾಯರು ಕೇಳಿದರೆ 'ಮನೆಯಲ್ಲಿಯೇ ಬೇಕಾದ ಪುಸ್ತಕಗಳೂ ಪತ್ರಿಕೆಗಳೂ ಸಿಗುವವಲ್ಲ!' ಎಂದು ನೆವ ಹೇಳುವನು. ರಾಯರಿಗೂ ಅದರ ಮರ್ಮ ತಿಳಿಯದೇ ಇರಲಿಲ್ಲ.

ಮೊದಮೊದಲು ಕಿಟ್ಟಿಯು ಊಟವಾದಮೇಲೆ ಶಾಲೆಗೆಂದು ಹೇಳಿ ಬಗಲಲ್ಲಿ ಪುಸ್ತಕಗಳನ್ನು ಹಿಡಿದುಕೊಂಡು ಹೊರಗೆ ಹೋಗುತ್ತಿದ್ದನು. ಒಂದು ದಿನ ಕೋಣೆಯಲ್ಲೇ ಕುಳಿತ. 'ಯಾಕೆ ಈ ಹೊತ್ತು ಶಾಲೆಗೆ ಹೋಗುವದಿಲ್ಲವೇ?' ಎಂದು ಕಮಲೆ ಕೇಳಿದಳು.

'೪ ತಿಂಗಳ ಫಿ ಕೊಟ್ಟಿಲ್ಲ. ಫೀ ತರದೆ ಶಾಲೆಗೆ ಬರಬೇಡೆಂದು ಹೇಳಿರುವರು' ಎಂದು ಮೋರೆ ಸಪ್ಪಗೆ ಮಾಡಿ ಕಿಟ್ಟಿಯು ಉತ್ತರ ಕೊಟ್ಟನು.

ತಂದೆಯ ಮನಸ್ಸು ದೊಡ್ಡದಾದರೂ ಆದಾಯವು ಆ ಮಾನದಿಂದಿಲ್ಲವೆಂಬುದನ್ನು ಕಮಲೆ ತುಂಬಾ ಬಲ್ಲಳು. ಆದ್ದರಿಂದ ಅವರಿಗೆ ತಿಳಿಯಗೊಡದಂತೆ ಏನಾದರೂ ಮಾಡಬೇಕೆಂದು ಯೋಚಿಸಿದಳು. ನೆರೆಮನೆಯ ಗೆಳತಿಗೆ ಹೇಳಿ ಅವಳ ತಮ್ಮಂದಿರಿಗೆ ಪಾಠ ಹೇಳುವಂತೆ ಅನುಕೂಲ ಮಾಡಿಕೊಟ್ಟಳು. ಕಿಟ್ಟಿಯು ಸಂಜೆಯ ತಿರುಗಾಡುವ ವೇಳೆಯಲ್ಲಿ ಪಾಠ ಹೇಳುವದಿಲ್ಲವೆಂದನು.

ತನ್ನ ಅಭ್ಯಾಸಕ್ಕೇನು ಅಷ್ಟು ತೊಂದರೆಯಾಗುವದಿಲ್ಲ; ಬೆಳಿಗ್ಗೆ ಹೇಳಿಕೊಡುವೆ ಎಂದನು. ದಿನದ ಅವಳ ಸಹವಾಸದ ಆನಂದವನ್ನು ಕಳೆದುಕೊಳ್ಳಬಾರದೆಂದು ಅವನ ಹವಣಿಕೆ. ಕಮಲೆಗೂ ಅದೇನು ಬೇಡಾಗಿರಲಿಲ್ಲ.

ಮುಂದೊಂದು ದಿನ ರಾಯರು ತಮ್ಮ ಮಗಳ ಕೂಡ ಮಾತು ತೆಗೆದರು. 'ಕಿಟ್ಟಿಗೆ ಆಶ್ರಯ ಕೊಟ್ಟದ್ದಕ್ಕೆ ಶ್ರೇಯಸ್ಸೇನು ಬರುವಂತೆ ತೋರುವದಿಲ್ಲ. ಶಾಲೆಗೂ ನಿಯಮಿತವಾಗಿ ಹೋಗುವದಿಲ್ಲ; ಮನೆಯಲ್ಲಿಯೂ ಅಭ್ಯಾಸ ಮಾಡುವದಿಲ್ಲ. ಆಯಿತು. ಹೇಗೂ ಪರೀಕ್ಷೆ ಸಮೀಪ ಬಂದಿದೆ. ಆದರ ಪರಿಣಾಮ ನೋಡಿಕೊಂಡು ಮುಂದಿನ ದಾರಿ ತೋರಿಸಿದರಾಯಿತು.'

ಕಮಲೆಗೆ ಕಿಟ್ಟಿಯ ಅಗಲಿಕೆಯ ಕಲ್ಪನೆಯೂ ಸಹನವಾಗಲಿಲ್ಲ. ಆದರೆ ಸಮರ್ಥನೆ ಮಾಡುವದು ಹೇಗೆ? ಅವರನ್ನುವದು ವಾಸ್ತವವಿತ್ತು. ಆದರೂ ಒಂದು ಮಾತು ಹೇಳಬೇಕೆಂದು ಅಂದಳು. 'ಇಲ್ಲಿಂದ ಹೊರಡಿಸಿದರೆ ಅವನಿಗೆ ಕಠಿಣ. ಪಾಸು ನಾಪಾಸಿನ ಮೇಲೆಯೇ ಮನುಷ್ಯನ ಯೋಗ್ಯತೆಯವಲಂಬಿಸಿರುವದಿಲ್ಲ.'

ಮಗಳು ಕಿಟ್ಟಿಯ ಪಕ್ಷವನ್ನು ವಹಿಸಿದ್ದನ್ನು ಕಂಡು ರಾಯರು ತಮ್ಮ ಮನಸಿನಲ್ಲಿಯೇ ನಗಹತ್ತಿದರು. ಆ ನಗೆಯಲ್ಲಿ ಪ್ರಾಸ್ಪೆರೋನ ಗೆಲುವಿನ ನಗೆಯ ಝುಳುಕು ಇತ್ತು.

ಆ ದಿನ ತಿರುಗಾಡಲಿಕ್ಕೆ ಹೋದಾಗ ಕಮಲೆಯು ತಂದೆಯವರಾಡಿದ್ದನ್ನು ಕಿಟ್ಟಿಗೆ ತಿಳಿಸಿದಳು. ಅದಕ್ಕವನು 'ಅವರು ಹಾಗೆಂದರೆ ನಾನು ಮಾಡುವದೇನು? ಧರೆಯು ಧರಿಸುವದಿಲ್ಲವೆಂದರೆ ಯಾರೇನು ಮಾಡುವದು?' ಎಂದನು. ಆ ಮೇಲೆ ಏನೋ ಒಂದು ವಿಚಾರಮಾಡಿ ಕಮಲೆಗೆ ಕೇಳಿದನು.

'ಇದು ಅವರ ಸೂಚನೆಯೋ ನಿನ್ನದೋ?'

'ಅವರದೇ. ನನ್ನದೇಕಿದ್ದೀತು!'

'ಅದಕ್ಕೆ ನಿನ್ನ ಸಮ್ಮತಿಯೋ? ನಿನ್ನ ಇಚ್ಛೆಯೇನು?'

'ನನ್ನ ಮನಸ್ಸೆಲ್ಲ ನೀನು ನಮ್ಮಲ್ಲಿರಬೇಕೆಂದಿದೆ'

'ನಾನೂ ಅದೇ ಅನ್ನುವೆನು. ನೀನು ನಮ್ಮಲ್ಲಿರಬೇಕೆಂದು.'

ಶಬ್ದಸಾಮ್ಯದ ಮೂಲಕ ಅವನ ಮಾತಿನ ಅರ್ಥ ತಿಳಿಯಲು ಅರ್ಧಕ್ಷಣ ಹತ್ತಿತು.

ಹೇಳಿದಕೂಡಲೇ ಕಮಲೆಯ ಮುಖ ಕೆಂಪೇರಿತು. ಆ ಕೆಂಪು ಲಜ್ಜೆಯದೋ, ಕೋಪದ್ದೋ, ಎರಡರ ಸಂಮಿಶ್ರಣದ್ದೋ, ನಿರ್ಣಯಿಸುವ, ಗೋಜಿಗೆ ಕಿಟ್ಟಿಯು ಹೋಗಲಿಲ್ಲ.

ಪ್ರಿಯಕರನ ಹೃದಯ ನಿವೇದನದ ಕ್ಷಣದಲ್ಲಿ ಯಾವ ಮಾನಿನಿಯೂ ಸ್ಥಿರಚಿತ್ತಳಾಗಿರಲಾರಳು. ಆದರೆ ಕಮಲೆಯು ಕಥಾ ಪುಸ್ತಕಗಳಲ್ಲಿ ಕಂಡು ಬರುವ ನಾಯಿಕೆಗಿಂತ ತೀರ ಭಿನ್ನವರ್ಗದವಳಾಗಿದ್ದಳು.

ಕಮಲೆಯು ಸುಪ್ರಸಿದ್ಧ ಕವಿಯ ಮಗಳಾಗಿದ್ದರೂ ಅವಳ ಜಗತ್ತಿನ ಅನುಭವವು ವ್ಯವಹಾರವನ್ನು ಮರೆಮಾಡಗೊಟ್ಟದ್ದಿಲ್ಲ. ತಾನು ಗಂಡನ ಮನೆಗೆ ಹೋಗಬೇಕಾಗುವದೆಂಬದರ ಅರಿವು ಅವಳಿಗಿತ್ತು. ಆದರೆ ತಂದೆಯನ್ನು ಅಸಹಾಯ ಸ್ಥಿತಿಯಲ್ಲಿ ಬಿಟ್ಟು ಹೋಗಲೊಲ್ಲಳು. ತನ್ನ ಗಂಡನ ಶ್ರೀಮಂತನಾಗಿದ್ದು ಮುಪ್ಪಿನ ತಂದೆಯನ್ನು ಮನೆಯಲ್ಲಿಟ್ಟುಕೊಂಡು ಅವರ ಸೇವೆಶುಶ್ರೂಷೆಗಳಿಗೆ ಅನುಕೂಲನಾಗಿರಬೇಕೆಂದು ಅವಳು ಎಂದೋ ನಿರ್ಧರಿಸಿದ್ದಳು. ಪ್ರೇಮವಿಲ್ಲದಲ್ಲಿ ದುಡ್ಡಿಗಾಗಿ ಮದುವೆಯಾಗುವವಳಲ್ಲ. ಆದರೆ ದುಡ್ಡಿಲ್ಲದಲ್ಲಿ ತನ್ನ ಪ್ರೇಮವನ್ನು ಅರ್ಪಣ ಮಾಡಲಿಕ್ಕಿಲ್ಲೆಂದು ನಿಶ್ಚಯಿಸಿ ಆ ಪ್ರಕಾರ ತನ್ನ ಮನಸ್ಸಿಗೆ ಶಿಕ್ಷಣ ಕೊಟ್ಟಿದ್ದಳು.

ಪ್ರಸ್ತುತ ಪರಿಸ್ಥಿತಿಯಲ್ಲಿ ನಕಾರವಲ್ಲದೆ ಬೇರೊಂದು ಉತ್ತರವಿದ್ದಿಲ್ಲ. ಹಾಗು ಅದನ್ನು ಧೈರ್ಯದಿಂದ ಕಿಟ್ಟಿಗೆ ತಿಳಿಸಿದಳು.

ಮಾನಸಶಾಸ್ತ್ರದ ಆಧಾರದಿಂದ ಆ ನಕಾರದ ಅರ್ಥವನ್ನು ಸಂಮತಿಯೆಂದು ಸಿದ್ಧಮಾಡಿಕೊಂಡು ತನ್ನ ಮನಸ್ಸಿಗೆ ಸಮಾಧಾನ ಹಚ್ಚಿಕೊಳ್ಳಬೇಕೆಂದು ಕಿಟ್ಟಿಯು ಬಯಸಿದನು. ಕೊನೆಗೆ ಮತ್ತೊನ್ಮೆ ಕೇಳಿ ವ್ಯಾಕರಣದ 'ದ್ವೌನಞೌ ಪ್ರಕೃತಾರ್ಥಂ ಗಮಯತಃ' ಎಂಬ ಸೂತ್ರದ ಆಧಾರವನ್ನಾದರೂ ಅವಲಂಬಿಸಬೇಕೆಂದಿದ್ದನು. ಆದರೆ ಕಮಲೆಯ ಮುಖಮುದ್ರೆಯೂ ನಿಶ್ಚಿತ ಸ್ವರವೂ ಇದಾವುದಕ್ಕೂ ಆಸ್ಪದ ಕೊಡಲಿಲ್ಲ.

'ಅದೇಕೆ ನನ್ನ ಮೇಲೆ ನಿನ್ನ ಪ್ರೇಮವಿಲ್ಲವೇ?' ಎಂದು ಕೇಳಿದನು.

ಕೇಳುವಾಗಲೇ ಅದೊಂದು ಮೂರ್ಖ ಪ್ರಶ್ನೆಯೆಂದು ಅವನಿಗನಿಸಿತು.

'ಇದೆ. ಆದರೆ ನಿನ್ನನ್ನು ನಾನು ಮದುವೆಯಾಗಲಾರೆ.' ಎಂದು ಕಮಲೆಯಂದಳು.

ಈ ಉತ್ತರವನ್ನು ಕೇಳಿ ಅವನು ಸ್ತಂಭಿತನಾದನು. ಅವನೋದಿದ ಯಾವ ಕಥೆಯ ನಾಯಿಕೆಯೂ ಈ ಬಗೆಯ ಉತ್ತರವನ್ನು ಕೊಟ್ಟದ್ದಿಲ್ಲ.

'ಹಾಗಾದರೆ ಆತಂಕವೇನು?' ಎಂದು ಉತ್ಸಾಹದಿಂದ ಕೇಳಿದನು.

'ತಂದೆಯವರನ್ನು ಹೆಚ್ಚಾಗಿ ಪ್ರೀತಿಸುತ್ತೇನೆ.'

'ಅದಕ್ಕೆ ಯಾರು ಬೇಡವೆನ್ನುವರು? ಆದರೆ ಅದಕ್ಕೂ ಮದುವೆಗೂ ಸಂಬಂಧವೇನು?'

'ಇದೆ ಇನ್ನೊಮ್ಮೆ ಈ ಮಾತೆತ್ತಬಾರದು ನೀನು, ಎಂದರೆ ಕಾರಣ ವನ್ನು ಹೇಳುತ್ತೇನೆ.

'ಅದರ ಮಾತು ಹಿಂದುಗಡೆ. ಮೊದಲು ಕಾರಣವನ್ನಂತೂ ತಿಳಿಸು.'

ಕುತೂಹಲದಿಂದ ಅವಳ ವಿವೇಚನೆಯನ್ನು ಕೇಳಿಕೊಂಡನು. ಇನ್ನೊಮ್ಮೆ ಮಾತೆತ್ತ ಕೂಡದೆಂದುದರ ರಹಸ್ಯವೂ ಹೊಳೆಯಿತು. ತಾನು ದರಿದ್ರನಿದ್ದುದರಿಂದ ಮದುವೆಯಾಗಲಾರೆನೆಂದು ಹೇಳಬೇಕಾದರೆ ಅವಳ ಹೃದಯಕ್ಕೆ ಅಸಹ್ಯವೇದನೆಯಾಗುತ್ತಿತ್ತು.

ಕೊನೆಗೆ ಕಿಟ್ಟಿಯು ಮೃದುವಾಗಿ ನಕ್ಕು 'ಇಷ್ಟೇ ತಾನೇ?' ಎಂದನು. ಕತ್ತಲೆಯಾಗುತ್ತ ಬಂದದ್ದರಿಂದ ಇಬ್ಬರೂ ಮನೆಗೆ ಹೊರಟರು.

ಕಿಟ್ಟಿಯು 'ಇಷ್ಟೇ ತಾನೆ' ಎಂದುದನ್ನು ಕೇಳಿ ಕಮಲೆಯು ಗೊಂದ ಲದಲ್ಲಿ ಬಿದ್ದಳು.

ದಾರಿದ್ರ್ಯವು ತನ್ನ ಪ್ರೇಮಪೂರ್ತಿಗೆ ವಿಘ್ನವಾದುದನ್ನು ಕಂಡು ಈ ಬಗೆಯ ಉತ್ತರವನ್ನು ಯಾವ ಪ್ರೇಮಿಯೂ ಕೊಡನು. ಸಂಸಾರದ ಅಸಾರತೆಯನ್ನು ಸಾರುವ ಶಂಕರಾಚಾರ್ಯರಿಗಿಂತ ಒಂದು ತೂಕ ಹೆಚ್ಚಾಗಿಯೇ 'ಅರ್ಥಮನರ್ಥಂ ಭಾವಯ ನಿತ್ಯಂ' ಎಂದು ಇಂಥವನು ಹೇಳುವನು.

'ಇಷ್ಟೇ ತಾನೆ!' ಎಂದು ಇಷ್ಟು ಸಹಜವಾಗಿ ಅನ್ನಬೇಕಾದರೆ ಅವನು ಈ ವರೆಗೂ ತೋರಿದಂತೆ ಬಡವನಾಗಿರಲಿಕ್ಕಿಲ್ಲವೇ? ಮನಸ್ಸಿನಲ್ಲಿ ಸಂಶಯದ ಮೊಳಿಕೆಯೊಡೆದ ಕೂಡಲೆ ಅವಳ ಗೆಳತಿಯು ಹಿಂದೆ ಹೇಳಿದ ಕೆಲವು ಸಂಗತಿಗಳಿಗೆ ಬೇರೆ ಅರ್ಥವಾಗಹತ್ತಿತು. ಪಾಠ ಹೇಳಿದ ಸಂಬಳವನ್ನು ೧-೨ ತಿಂಗಳು ಕೊಡದಿದ್ದರೂ ಕಿಟ್ಟಿಯೇನು ದುಂಬಾಲ ಬೀಳುತ್ತಿರಲಿಲ್ಲ.

ವಾರಕ್ಕೆ ಎರಡು ಮೂರು ಬಾರಿಯಾದರೂ ತನ್ನ ಶಿಷ್ಯರಿಗೆ ಮಿಠಾಯಿ ಕೊಡುವದು. ಇವೆಲ್ಲಕ್ಕೂ ಕಾರಣದ ಏನೋ ಒಂದು ಎಳೆ ಸಿಕ್ಕಂತಾಯಿತು. ಇದರ ನಿಷ್ಕರ್ಷ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿ ಸಂಧಿಗಾಗಿ ಕಾದು ಸುಮ್ಮನಿದ್ದಳು.

ಮುಂದೆ ೨-೩ ದಿನಗಳ ಮೇಲೆ ಕಿಟ್ಟಿಯು ತನ್ನ ಕೋಣೆಯಲ್ಲಿ ಏನೋ ಓದುತ್ತ ಕುಳಿತಿದ್ದನು. ಆಗ ಕಮಲೆಯು ಸತ್ಯನಾರಾಯಣನ ಪ್ರಸಾದವನ್ನು ತಂದು ಅವನ ಮುಂದಿಟ್ಟಳು. ಅವನು 'ನಾನೊಲ್ಲೆ. ಬಾಯಲ್ಲಿ ಎಲೆಯಡಿಕೆಯದೆ' ಎಂದನು.

'ಪ್ರಸಾದ ಒಲ್ಲೆನಬಾರದು. ಸಾಧು ವಣಿಜನ ಗತಿ ಏನಾಯಿತು ಗೊತ್ತಿಲ್ಲವೇ?'

'ನಾನು ಅವನ ಮೇಲಧಿಕಾರಿಯಾಗಿದ್ದರೆ ಸತ್ಯದೇವನನ್ನು ಮೊದಲು ಡಿಸ್‌ಮಿಸ್ ಮಾಡಿ ಜೇಲಿಗೆ ಕಳಿಸುತ್ತಿದ್ದೆ.'

'ಅದೇಕೋ?'

'Customs ಅಧಿಕಾರಿಯು ಬಹಳವಾದರೆ ಕಾಯದೇ ಪ್ರಕಾರ ದಂಡವೆಂದು 5 percent ಹೆಚ್ಚಿಗೆ ವಸೂಲ ಮಾಡಬೇಕಾಗಿತ್ತು. ಅದೆಲ್ಲ ಬಿಟ್ಟು ಎಲೆ ಬಳ್ಳಿಗಳೇ ಆಗಲಿ ಎನ್ನುವದು, ಹಡಗ ಮುಣಿಗಿಸುವದು, ಇವು ಅನಧಿಕೃತ ಅನನ್ವಿತ ಕೃತ್ಯಗಳು.'

'ಅವನು ಮೊದಲು ಸುಳ್ಳೇಕೆ ಹೇಳಬೇಕು?'

'ಸುಳ್ಳು ಹೇಳಿದರೆ ಇಷ್ಟು ದೊಡ್ಡ ಶಿಕ್ಷೆಯೇ?'

'ಅದೇಕಿಷ್ಟು ವಕೀಲಿ ನಡೆಸಿರುವಿ? ನೀನೂ ಅದೇ ಅಪರಾಧವನ್ನು ಮಾಡಿರುವೆಯಾ?' ಎಂದು ಭೇದಕ ದೃಷ್ಟಿಯಿಂದ ನೋಡಿದಳು.

ಕಿಟ್ಟಿಗೆ ಉತ್ತರ ಕೊಡುವದಾಗಲಿಲ್ಲ.

'ಸುಳ್ಳು ಹೇಳಿದಂತೆಯೇ ಇದ್ದದ್ದೆಲ್ಲ ಇಲ್ಲದಂತಾಗಲೆಂದು ಶಾಪ ಕೊಡುವ ಶಕ್ತಿಯೂ ನನಗಿಲ್ಲ. ಇಚ್ಛೆಯೂ ಇಲ್ಲ.'

'ದೇವನಂತೆ ನಾಶ ಮಾಡದೆ ನಿನ್ನ ವಶ ಮಾಡಿಕೊಳ್ಳುವದಾದರೆ ನಾನು ಸಿದ್ಧನೇ ಇದ್ದೇನೆ.'

'ಹಾಗಾದರೆ ಮೊದಲು ಸುಳ್ಳೇಕೆ ಹೇಳಬೇಕಾಗಿತ್ತು?'

‘ ಏನು ಮಾಡಲಿ ! ದರಿದ್ರನೆಂದು ಸೋಗು ಹಾಕದಿದ್ದರೆ ನಿನ್ನ ಸಹವಾಸದ ಈ ಸಂಧಿಯೇ ದೊರೆಯುತ್ತಿದ್ದಿಲ್ಲ. ನಾಡಹಬ್ಬದಲ್ಲಿ ನಿನ್ನನ್ನು ನೋಡಿದಾಗಲೇ ನಿನಗಾಗಿ ಇದೆಲ್ಲ ಮಾಡಲು ಸಿದ್ಧನಾದೆ. All is fair in Love and War. ’

\+ + + +

ಕಮಲೆಯು ಈಗ ಕಿಟ್ಟಿಯ ಹೆಂಡತಿ. ಶ್ರೀನಿವಾಸರಾಯರು ಸಮ್ಮತಿ ಕೊಟ್ಟರೂ ಅಳಿಯನು ದರಿದ್ರನಲ್ಲವೆಂಬುದನ್ನು ಕಂಡು ನೊಂದುಕೊಂಡರು.

ಕಮಲೆಯು ‘ ಇಲ್ಲಿ ನಿಮ್ಮನ್ನು ನೋಡಿಕೊಳ್ಳುವವರಾರೂ ಇಲ್ಲ. ನಮ್ಮಲ್ಲಿಗೇ ಬರ್ರಿ ’ ಎಂದು ಕರೆದಳು. ಅದಕ್ಕೆ ರಾಯರು ‘ ಇಷ್ಟು ದಿನ ನಿನ್ನದೊಂದು ಹೊಣೆಯಿತ್ತು; ಕಾಟವಿತ್ತು. ಈಗ ನಿಶ್ಚಿಂತನಾದೆ. ನಿಮ್ಮಷ್ಟಕ್ಕೆ ನೀವು ಸುಖದಿಂದಿರಿ. ’ ಎಂದು ಹೇಳಿಬಿಟ್ಟರು. ಕಮಲೆಗೆ ಇದರಿಂದ ಅಸಮಾಧಾನವಾಯಿತು. ಜೀವನದ ಆನಂದದಲ್ಲಿ ಇಬ್ಬರೂ ಬೇಗನೆ ಅದನ್ನು ಮರೆತರು.

ಮಧುಮತಿ

ಪರೀಕ್ಷೆ ಸಮೀಪ ಬಂದಿತ್ತು. ಎಲ್ಲ ದಕ್ಷ ವಿದ್ಯಾರ್ಥಿಗಳಂತೆ ಮಾಧವ ರಾಯನಾದರೂ ಸಂಜೆಯ ೫|| ಗಂಟೆಯಾದರೂ ಇನ್ನೂ ಓದುತ್ತ ಕುಳಿತಿದ್ದನು. ಲಾ ಕಾಲೇಜದ ದಿನಚರಿಯ ಅಭ್ಯಾಸಬಲದಿಂದಲೋ ಬೇಸಗೆಯಲ್ಲಿಯ ಭೋಜನೋತ್ತರ ಜಾಡ್ಯದ ಪ್ರಭಾವದಿಂದಲೋ ಮಧ್ಯಾಹ್ನದ ನಿದ್ದೆಯೇನು ತಪ್ಪಿರಲಿಲ್ಲ. ಈ ಅಕ್ಷಮ್ಯ ಕಾಲಾಪಹಾರವನ್ನು ಬಾಯಿಗೂಡಿಸಲೆಣಿಸಿ, ಎದ್ದಾಗಿನಿಂದ ಈಗ ೧-೧|| ತಾಸಿನಿಂದಲೂ ಏಕಾಗ್ರಚಿತ್ತದಿಂದ ಓದತೊಡಗಿದ್ದನು. ಇಷ್ಟರಲ್ಲಿ ಮಿಂಚು ಮೂಡಿತು. ಅಡ್ಡಮಳೆಯ ಬರವನ್ನು ಸೂಚಿಸುವ ಮಿಂಚಲ್ಲ-ಕೋಣೆಯಲ್ಲಿ ಪ್ರವೇಶಿಸಿದ ಮಧುಮತಿಯ ಮುಖದ ಮೇಲಿನ ಸ್ಮಿತ. ಯಾರದಾದರೂ ಕಣ್ಣು ಸೆಳೆದು ಕುಕ್ಕಿಸುವಷ್ಟು ಮೆರಗು ಅದರಲ್ಲಿತ್ತು. ಆದರೆ ಬೆನ್ನು ತಿರುವಿ ಕುಳಿತ ಕುರಡನ ಮೇಲೆ ಏನಾಗಬೇಕು ಅದರ ಪರಿಣಾಮ! ಮೆಲ್ಲಗೆ ಬಂದು ಕೊನೆಗೆ ಭುಜದ ಮೇಲೆ ಕೈ ಇಟ್ಟು ಮಾತನಾಡಿಸುವವರೆಗೆ ಮಾಧವರಾಯನಿಗೆ ಎಚ್ಚರವೇ ಇದ್ದಿಲ್ಲ.

" ನಾನು ಬಂದು ೧೦ ಮಿನಿಟಾದರೂ ನನ್ನ ಕಡೆಗೆ ಹೊರಳಿ ಸಹ ನೋಡದಷ್ಟು ಅದಾವ ಪುಸ್ತಕ ಓದುವದರಲ್ಲಿ ಮಗ್ನರಾಗಿದ್ದೀರಿ ? "

ಕುಳಿತಲ್ಲಿಯೇ ಮೋರೆ ತಿರುವಿ ಸ್ವಾಗತವನ್ನು ಸೂಚಿಸಿ ಮಾಧವ ರಾಯನು " Law of Trust ಎಂದಿಷ್ಟೇ ಉತ್ತರ ಕೊಟ್ಟನು.

Law of Trust ಓದುವದಕ್ಕಿಂತ ಮೊದಲು Law of distrust ಅಭ್ಯಾಸ ಮಾಡುವ ಅಗತ್ಯವಿದೆ ನಿಮಗೆ! ನೀವು ಈ ಹೊತ್ತು ಮಧ್ಯಾಹ್ನ ನಮ್ಮ ಮನೆಗೆ ಚಹಕ್ಕಾಗಿ ಬಂದು ಆ ಮೇಲೆ ಇಬ್ಬರೂ ಕೂಡಿ ಆ ಗಮಕಿಗಳ ಕವಿತಾ ಗಾಯನಕ್ಕೆ ಹೋಗುವದಾಗಿ ಒಪ್ಪಿಕೊಂಡಿದ್ದು, ಈಗ ಕೋಣೆಯಲ್ಲಿಯೇ ಕುಳಿತುಕೊಂಡರೆ ನಿಮ್ಮ ಮೇಲೆ ವಿಶ್ವಾಸ ವಾದರೂ ಹೇಗೆ ಉಳಿಯಬೇಕು ? "

“ಕ್ಷಮಿಸಿರಿ. ನಿದ್ದೆಯಿಂದೆದ್ದ ಕೂಡಲೇ ಮೊದಲು ಕಣ್ಣು ಮುಂದೆ ನಿಲ್ಲುವದು ಎದೆಯ ಮೇಲೆ ಬಂದ ಪರೀಕ್ಷೆ. ಹಿಡಿದ ಪುಸ್ತಕದಲ್ಲಿಯೇ ಮುಳುಗಿದ್ದೇನೆ. ಇನ್ನೂ ನೆಲೆ ಹತ್ತಲೊಲ್ಲದು.”

“‘ಕಾಯಿದೇಭಂಗ’ ಮಾಡುವದನ್ನು ಬಿಟ್ಟು ಕಾಯುದೆಯ ಅಭ್ಯಾಸಕ್ಕೆ ಸಗಿದರೆ ಅವರ ಅವಸ್ಥೆ ಹೀಗೆಯೇ!”

“ಅದಕ್ಕಾದರೂ ಕಾರಣರಾದವರಾರು? ನೀವೇ ಅಲ್ಲವೇ? ನಿಮ್ಮ ತಂದೆಯವರಿಂದ ನಮ್ಮ ತಂದೆಯವರಿಗೆ ಪತ್ರ ಬರೆಯಿಸಿ ದಾಂಡಿಯಾತ್ರೆ ಯನ್ನು ತಪ್ಪಿಸಿದ ಪುಣ್ಯವನ್ನು ಕಟ್ಟಿಕೊಂಡವರಾರು? ಈಗ ಮತ್ತೆ ಹಂಗಿಸಲಿಕ್ಕೆ ಎಲುಬಿಲ್ಲದ ನಾಲಿಗೆಯು ಸಿದ್ಧವೇ?”

“ಹೇಳುವವರೇನು, ಎಲ್ಲವನ್ನೂ ಹೇಳುವರು. ಮಾಡುವವರ ಮನಸ್ಸು ಗಟ್ಟಿ ಇದ್ದರೆ ಮಾಡಬೇಕಾದ್ದನ್ನು ಮಾಡಿಯೇ ತೀರುವರು. ಅದನ್ನು ಬಿಟ್ಟು ಈಹಾದಿ ಹಿಡಿಸಿದ ದೋಷವು ಅನ್ಯರ ಮೇಲೇಕೆ ಸುಮ್ಮನೆ? ಪ್ರತಿಯೊಂದು ಆಂದೋಲನದ ತೆರೆಗಳ ಮೇಲಿನ ಭಾವನೆಯ-ಶಬ್ದಗಳ ನೊರೆಯಿಂದ ಆಕರ್ಷಿತರಾಗಿ, ಜನಜಂಗುಳಿಯ ಭಾವೋದ್ರೇಕದ ಹುಚ್ಚು ಹೊಳೆಯಿಂದ ಕೊಚ್ಚಿಹೋಗಿ, ಮುಂದಾಳುಗಳೆಂದೆನಿಸಿಕೊಂಡು ಮೆರೆಯು ವವರ ಪ್ರತಿಯೊಂದು ಶಬ್ದದ ಉಸುರಿನಿಂದ ತೂರಲ್ಪಡುವವರು ತಮ್ಮ ಜೀವನದ ಹೊಣೆಯನ್ನು ಅನ್ಯರ ಮೇಲೆ ಹಾಕುವದೇ ಅನ್ಯಾಯ. ದಾಂಡಿಗೆ ಹೊರಡುವ ಉತ್ಸಾಹದ ಭರವನ್ನು ತಡೆದದ್ದೊಂಪೇ ತಡ. ಜೂನಕ್ಕೆ ಪುನಃ ಕಾಲೇಜಿಗೆ ಬಂದಿರಿ”

“ಇದೊಂದು ವರ್ಷ ಅಭ್ಯಾಸಕ್ರಮವನ್ನು ಮುಗಿಸು, ಒಂದು ಮಟ್ಟಿಗೆ ಮುಟ್ಟಲಿ. ಆ ಮೇಲೆ ನಿನಗೆ ಬೇಕಾದ ‘ಕಾರ್ಯವನ್ನು ಮಾಡುವಿಯಂತೆ’ ಎಂದು ತಂದೆಯವರು ಹೇಳಿದರು. ಅದಕ್ಕಾಗಿ ಬಂದೆ.”

“ಅದೇಕೋ? ದೇಶದ ಕೂಗು ಇಷ್ಟರಲ್ಲಿಯೇ ಕೇಳಬರದಂತಾಯಿ ತೇನೋ! ಸುಮ್ಮನೆ ಇಲ್ಲದ ಜಂಭವೇಕೆ? ಮೊದಲಿನಿಂದಲೂ ಬಲ್ಲೆ ನಿಮ್ಮೀ ಭ್ರಮರವೃತ್ತಿ, ಎದುರಿಗಿರುವ ಹೂವಿನಿಂದ ಸೆಳೆಯಲ್ಪಟ್ಟು ಅದರಲ್ಲಿಯೇ ರಮಮಾಣನಾಗುವದು. ಬಡವರ ಉಪ್ಪಿನ ಮೇಲಿನ ಕರ ಅನ್ಯಾಯದ್ದು

ಅದನ್ನು ಮುರಿದೊಗೆಯುಬೇಕೆಂದರೂ ಆಗ ಅದಕ್ಕೆ ಹೂಂ, ಈಗ ಜೀವನ ಕ್ಕೊಂದು ಸ್ಥಿರತೆ ತಂದುಕೊಂಡು ಆ ಮೇಲೆ ಬೇಕಾದ ಹಾಗೆ ದೇಶಸೇವೆ ಮಾಡಬೇಕೆಂದರೆ ಇದಕ್ಕೂ ಹೂಂ.''

"ನೀವನ್ನುವದಾದರೂ ಏನು ?"

"ಏನಿಲ್ಲ; ಮುಗಿಸಿರಿ, ಮುಗಿಸಿರಿ ನಿಮ್ಮದು ಬೇಗ. ಇದರಲ್ಲಿಯೇ ಹೊತ್ತಾಯಿತು. ಹೊರಗಾದರೂ ಹೊರಡೋಣವಿನ್ನು ತಿರುಗಾಡಲಿಕ್ಕೆ."

"ಆಯಿತು; ಇಟ್ಟೇ ಬಿಟ್ಟೆ. ಚಹಾ ತೆಗೆದುಕೊಂಡು ಬಂದಿರುವೆನು."

"ನಾನು ಬರಲಿಲ್ಲವೆಂದುದರ ಸೇಡು ತೀರಿಸಿಕೊಳ್ಳುವ ವಿಚಾರ ಕಾಣುವದಿದು! ಬೇಕಾದರೆ Penalty ಎಂದು ಹೊಸದೊಂದು ಬಿಸ್ಕೀಟಿನ ಡಬ್ಬಿ ಒಡೆಯುತ್ತೇನೆ.'' ಅಂತೂ 'ರಾಜೀ' ಆಗಿ ಕೊನೆಗೊಮ್ಮೆ ಇಬ್ಬರೂ ಚಹ ತೆಗೆದುಕೊಂಡು ಹೊರಟರು. ಆಂಫಿಥಿಯೇಟರದ ಹತ್ತರ ಹಾಯು ವಾಗ ಗಮಕಿಗಳ ದನಿಯು ಮೃದುಲವಾಗಿ ಸ್ಪಂದಿಸುತ್ತಿತ್ತು. ಅದರ ಕರೆ ಯನ್ನು ತಡೆಯುವದು ಅದಾವ ಕಾವ್ಯಪ್ರಿಯ ಕನ್ನಡಿಗನಿಂದಾಗುವದು! ಇಬ್ಬರೂ ಒಳಗೆ ಹೊಕ್ಕರು. ಜನ ಕಿಕ್ಕಿರಿದು ತುಂಬಿತ್ತು. ನಿಲ್ಲಲು ಸ್ಥಳವು ದೂರ ಅದೆತ್ತೋ ಒಂದು ಮೂಲೆಯಲ್ಲಿ ದೊರೆಯಿತು. ೫ ಮಿನಿಟಾಯಿತು, ೧೦ ಮಿನಿಟಾಯಿತು, ಹಾಡು ಕೇಳಿ ಬರುತ್ತಿದ್ದರೂ ಸಭಾಗೃಹದ ಮಧ್ಯಕ್ಕೆ ಹೋಗಲು ಅನುವಾಗಲೊಲ್ಲದು. ವಿಷಯವು ಶ್ರಾವ್ಯವೇ ಆಗಿದ್ದರೂ ಹೇಳುವವನ ಸಮಕ್ಷವು ಅವಶ್ಯವೆನಿಸುವದು ಮನುಷ್ಯನ ಸಹಜವೃತ್ತಿ. 'ಇಂಥ ಪರಿಯಿಂದ ಈಗೇಕೆ ನಿಲ್ಲುವದು? ಮತ್ತೆ ಯಾವಾಗಲಾದರೂ ಕೇಳೋಣವಂತೆ ನಡೆಯಿರೆಂ'ದು ಹೇಳಿ ಮಧುಮತಿಯನ್ನು ಹೊರಡಿಸಿ ಕೊಂಡು ಮಾಧವರಾಯನು ಹೊರಟನು. ಇನ್ನೂ ಪೋರ್ಚು ದಾಟಿರಲಿಲ್ಲ. ಇಷ್ಟರಲ್ಲಿ ಮಧುಮತಿಗೆ ಬಹುಕಾಲದ ಮೇಲೆ ಆಕಸ್ಮಿಕವಾಗಿ ಒಬ್ಬ ಗೆಳತಿಯು ಭೆಟ್ಟಿಯಾದಳು. ಮುಂದೆ ಹೋಗಿ ಆನಂದದಿಂದ ಅವಳ ಕೈ ಕುಲುಕಿಸಿ 'ಕುಸುಮಾ ಇದೇನಿದು ಅಲಭ್ಯಲಾಭ. ಇಷ್ಟು ವರ್ಷಗಳ ಮೇಲಿನ ಭೆಟ್ಟಿ' ಎಂದು ಕೇಳಿದಳು.

"Mountain—Mohemed ನ್ಯಾಯವಂತೂ ನಿನಗೆ ಗೊತ್ತೇ ಅದೆ. ಆದರದೇ ಪರಿಣಾಮವಿದು. ಕುಸುಮುವಿದ್ದೆಡೆಗೆ ಮಧುಮತಿಯು ಬರದಿದ್ದರೆ ಮಧುಮತಿಯಿದ್ದೆಡೆಗೆ ಕುಸುಮವಾದರೂ ಬರಬೇಕಷ್ಟೇ ?"

“ ನಿನ್ನ ಹಾಳು compliments ಸಾಕು ಬಿಡೆ. ಎಲ್ಲಿಂದ ಬಂದಿ ? ಬಂದದ್ದೇತಕ್ಕೆ ? ಇರುವದೆಲ್ಲಿ ? ಇನ್ನೂ ಮಿಸ್ಸೋ ಈಗಾಗಲೇ ಮಿಸೆಸ್ಸೋ?”

“ ತಡೆ, ತಡೆ. ಹೀಗೆ ಪ್ರಶ್ನೆಗಳ ಅಡ್ಡಮಳೆ ಹೊಡೆದರೆ ನನ್ನ ಗತಿ ಏನಾಗಬೇಕು ? Marriage Bureau ತೆಗೆದಿರುವಿಯೋ ಏನು ? ಕೇಳಿ ಬಿಡು ಅದಕ್ಕವಶ್ಯವಾದ ಇನ್ನೆರಡು ಪ್ರಶ್ನೆಗಳನ್ನು ‘ವಯಸ್ಸೆಷ್ಟು? ಕಲಿಯುವದೇನು ? ಅಣ್ಣತಮ್ಮಂದಿರೂ ಅಕ್ಕತಂಗೆಂದಿರೂ ಎಷ್ಟು” ಮಂದಿ,’ ಎಂದು.

“ ಹೌದು. ಆದರೆ ಆ ಪ್ರಶ್ನೆಗಳನ್ನು ವಾಡಿಕೆಯಂತೆ ಅವರೇ ಕೇಳಲೆಂದು ಬಿಟ್ಟದ್ದೇನೆ. ಹೂಂ; Meet the Bridegroom. ಇವರು ನಮ್ಮ ವಕೀಲ ರಾಮರಾಯರ ಮಕ್ಕಳಾದ ಮಾಧವರಾಯರು; ಮಾಧವರಾವ, ಇವಳು ನನ್ನ ಗೆಳತಿ ಕುಸುಮಾ. ”

“ ಇರಲಿ ಬಿಡೆ, ಸಾಕು. ”

“ ನಾನೇನೀಗ ಅಂಥಾದ್ದು ಮಾಡಿದೆನವ್ವ! ತಿಳಿಯಿತು ಬಿಡು ಲಕ್ಷಣ. ನಿನ್ನಿಂದ ಇವರನ್ನು ದೂರದೂರೇ ಇಡಬೇಕಾಯಿತು ! ಮಾಧವರಾವ, ನಡೆಯಿರಿನ್ನು ತಿರುಗಾಡಲಿಕ್ಕೆ ಹೋಗುವಾ ”

“ ನಿಲ್ಲೇ, ಸೋಗಲಾಡಿ, ಇಷ್ಟೇಕೆ ಗಾಬರಿಯಾಗುವಿ ? ನಾನೇನು ನಿನ್ನ ಎಡೆಗೆ ಕೈಹಾಕುವವಳಲ್ಲ. ”

ಮಾಧವರಾಯ “ ಚೆನ್ನಾಗಿದೆ. ಇಬ್ಬರೂ ಸಿಂಹಿಣಿಯರು, ಯಾರ ಭಕ್ಷ್ಯವೆಂಬದನ್ನು ನಿರ್ಣಯಿಸುವ ವರೆಗೂ ಬಡ ಪ್ರಾಣಿ ನಾನಿಲ್ಲಿ ಸುಮ್ಮನೆ ಕಾದಿರುವೆನು. ಸಾಂಗವಾಗಿ ಸಾಗಲಿ ನಿಮ್ಮ ಚರ್ಚೆ. ”

ಕುಸುಮಾ “ ನೋಡಿದಿಯೊ ಇಲ್ಲವೋ? ನಿನ್ನ ಹುಡುಗಾಟಿಕೆಯ ಪರಿಣಾಮವನ್ನು. ಪರಿಚಯವಿರಲಿ, ಇರದಿರಲಿ ಮಂದಿಯ ಮುಂದೆ ಯಾವಾಗಲೂ ನನ್ನ ಫಜೀತಿ ಮಾಡುವದರಲ್ಲಿಯೇ ಇರುವಿ.”

ಮಧುಮತಿ “ ಹೋಗಲಿ ಹೇಳುವೆನು ಬಿಡು, ನಾನವರಿಗೆ. ಬಂದರೆ ನಮ್ಮ ಮನೆಯಲ್ಲಿಳಿಯಬಾರದೇ? ಎಂಥವಳೇ ನೀನು ! ”

ಕುಸುಮಾ “ ನೋಡಿರಿ ಮಾಧವರಾವ ಹೇಗಿದೆ! ಅಲ್ಲೇ, ನಾನು ಊರು ಬಿಟ್ಟಾಗಿನಿಂದ ನಿನ್ನಿಂದ ಒಂದಾದರೂ ಸುದ್ದಿ, ಇಂಥಲ್ಲಿರುವೆನು ಎಂಬದನ್ನಾದರೂ ತಿಳಿಸುವಷ್ಟು ಒಂದು ಪತ್ರ. ಉಂ ಹೂಂ ಕೇಳಬೇಡ. ಮತ್ತೆ ಮನೆಗೆ ಬರಬೇಕಂತೆ! ಎಲ್ಲಿ ಕೇಳಿದರೂ ಕೇಳದಿದ್ದರೂ ಜನರು

ನಿನ್ನ ಸುದ್ದಿಯನ್ನು ಮಾತಾಡುತ್ತಿರುವಷ್ಟು ಪ್ರಸಿದ್ಧ ಪುರುಷ-ಅಲ್ಲ-ಸ್ತ್ರೀ ಆಗಿರುವೆಯೆಂಬದು ನನಗೆ ಗೊತ್ತಿಲ್ಲ ಬಿಡು."

"ಇರಲಿ, ಬಿಡು. ಸದಾಶಿವ ಪೇಠೆಯ........ವರ ವಾಡೆಯಲ್ಲಿ ನಮ್ಮ ಮನೆ. ಇನ್ನಾದರೂ ಯಾವಾಗ ಬರುವಿಯೆಂಬದನ್ನು ಹೇಳು."

"ಕೆಲ ದಿನ ಇಲ್ಲಿದ್ದು ಕಾರ್ಲೆಯ ಗವಿಗಳಿಗೂ, ಸಿಂಹಗಡಕ್ಕೂ ಹೋಗಿ ಬರಬೇಕೆಂದಿರುವೆನು. ಆ ಮೇಲೆ ನಿನ್ನ ಮನೆಗೆ ಬರುವೆನು. ಈಗ ಹೊತ್ತಾಯಿತು. ಚತುಃಶೃಂಗಿಗೆ ಹೋಗಿ ಬರಬೇಕು ನಾನಿನ್ನೂ. ಅಪ್ಪಣೆ ಕೊಡು."

"ಬೇಸಿಗೆಯ ಸೂಟಿಯಲ್ಲಿಲ್ಲೇ ಇದ್ದು ಬಿಡು ನನ್ನ ಕೂಡ."

"ಇಲ್ಲ; ಅಬಚಿಯ ಮನೆಗೆ ಹೋಗಬೇಕು. ಅಲ್ಲಿ ಬರುವದಾಗಿ ಒಪ್ಪಿಕೊಂಡಿರುವೆನು. ಮೇಲಾಗಿ ಇಲ್ಲಿಯ ಬಿಸಿಲೇನೇ ನಮ್ಮವ್ವಾ! ನನ್ನಿಂದಾಗದು ಇಲ್ಲಿರುವದು."

"ಒಳ್ಳೇದು. ಹೋಗುವಾಗ ಬೆಟ್ಟಿಯಾದರೂ ಆಗಿ ಹೋಗು."

ಇತ್ತ ಕುಸುಮೆಯು ತನ್ನ ಉದ್ದಿಷ್ಟ ಸ್ಥಳದ ಕಡೆಗೆ ಹೊರಟಳು. ಮಧುಮತಿ ಮಾಧವರೂ ಕಾಲೇಜದ ಹಿಂದಿನ ದಿನ್ನೆಯ ಕಡೆಗೆ ಹೊರಟರು. ಹಾದಿಯುದ್ದಕ್ಕೂ ಇಬ್ಬರೂ ಬಹುಶಃ ಸುಮ್ಮನೆ ಹೋದರು. ಯಾವಾಗಲಾದರೊಮ್ಮೆ ಮಾಧವರಾಯನು ಗುಣುಗುಣಿಸುತ್ತಿದ್ದನು. ನಡುವೇ ಏನೋ ಮಾತನಾಡಬೇಕೆಂದು ಕೇಳಿದ ಒಂದೆರಡು ಪ್ರಶ್ನೆಗಳಿಗೆ ಉತ್ತರವಾಗಿ ಕುಸುಮೆಯ ವೃತ್ತಾಂತ ತಿಳಿಯಿತು. ಅವಳು ಪೋಸ್ಟ್ ಮಾಸ್ತರರ ಮಗಳೆಂದೂ, ತಾನೂ ಅವಳೂ ಶಾಲೆಗೆ ಕೂಡೇ ಹೋಗುತ್ತಿದ್ದೆವೆಂದೂ ಮುಂದೆ ವರ್ಗವಾದ್ದರಿಂದ ಊರು ಬಿಟ್ಟ ಮೇಲೆ ಅವಳ ಸುದ್ದಿಯೇ ಇದ್ದಿಲ್ಲವೆಂದೂ ಮಧುಮತಿಯು ಹೇಳಿದಳು. ಸಭಾಗೃಹದಲ್ಲಿ ಕೇಳಬಂದ ಹಾಡಿನ ಪಲ್ಲವಿಯು ಮೀಟಿದ ಸ್ವರದಲ್ಲಿಯೇ ಮಾಧವರಾಯನ ವಿಚಾರಲಹರಿಯು ನಡೆದಿತ್ತು.

'ನೋಡ ನೋಡ್ತ ದಿನಮಾನಾ ಆಡಾಡ್ತ ಆಯುಷ್ಯ ನಡದsದ ನಡದsದ ನಡದsದ ಕಾಣದ ಕಡಲ್ಹಾದಿ ಹಿಡಿದsದ.'

ದಿನಾಲೂ ಕೂಡುವ ಪ್ರಶಾಂತ ಸ್ಥಳಕ್ಕೆ ಬರುವ ಹೊತ್ತಿಗಾಗಲೇ ಚಂದ್ರೋದಯವಾಗಿತ್ತು. ಚಂದ್ರನ ಕಡೆಗೆ ನೋಡುತ್ತ ಹುಲ್ಲಿನ ಮೇಲೆ ಒರಗಿ ತನ್ನ ಆಯುಷ್ಯದ ನೌಕೆಯನ್ನು ತೂರಿದ ಗಾಳಿಗಳ, ಆದರಿಂದ

ಕ್ರಮಿಸಿದ ಅಂತರದ ಸ್ಥೂಲ ನಕ್ಷೆಯೊಂದನ್ನು ತನ್ನಷ್ಟಕ್ಕೆ ತಾನೇ ಚಿತ್ರಿಸ ಹತ್ತಿದನು. ಮೊದಲು ತನಗೆ ಸಂಸ್ಕೃತ ಕಲಿಸುತ್ತಿದ್ದ ಗುರುಗಳು. ಹಚ್ಚಡ ದರಿವೆ (ಖಾದಿ) ಯನ್ನು ಹೊರುವ ಗುರುಗಳು ಹೇಳಿದ ಕಥೆಯಿಂದ ಉದ್ದೀಪಿತನಾಗಿ ದೇಶಕಲ್ಯಾಣಕ್ಕಾಗಿ ಆಯುಷ್ಯವನ್ನು ಕಳೆಯುವ ಅವನ ಪ್ರತಿಜ್ಞೆ; ಅನಂತರ ಪುನಃ ೪-೫ ವರ್ಷ ಶಾಲೆಯ ಅಭ್ಯಾಸಕ್ರಮ ಅವ್ಯಾಹತವಾಗಿ ಸಾಗಿದ್ದು; ಅಷ್ಟರಲ್ಲಿ ಅಸಹಕಾರತೆಯ ಬಿರುಗಾಳಿ; ದಾಸ್ಯವೃತ್ತಿಯನ್ನು ಪೋಷಿಸುವ ಶಿಕ್ಷಣನೆಂದು ಬಿಟ್ಟು ೧-೨ ವರ್ಷ ರಾಷ್ಟ್ರೀಯ ಶಿಕ್ಷಣ; ಸ್ವಯಂಸೇವಕನಾಗಿ ಹಳ್ಳಿಗಳಲ್ಲಿಯೂ ಜನಾಂಗದ ಸಂದೇಶ ಕಾರ್ಯಕ್ರಮಗಳನ್ನು ತಿಳುಹಿಸುವದಕ್ಕಾಗಿ ತಿರುಗಾಡಿದ್ದು; ಆ ಮೇಲೆ ಮತ್ತೆ ಆಂದೋಲನವು ನೆನೆಗುದಿಗೆ ಬಿದ್ದ ಮೇಲೆ ತಂದೆಯ ಒತ್ತಾಯದ ಮೂಲಕ ಕಾಲೇಜ ಸೇರಿದ್ದು; ಇಂಟರ ಪರೀಕ್ಷೆಯ ನಂತರ ಬಿಡುವಿನಲ್ಲಿ ಸ್ವಾಮಿ ವಿವೇಕಾನಂದರ ಚರಿತ್ರೆ, ಪ್ರವಚನಗಳನ್ನು ಓದಿ ಅಂಥದೊಂದು ಸಂಸ್ಕೃತಿ ಸೇವಕರ, ದೇಶ ಸೇವಕರ ವರ್ಗವನ್ನು ನಿರ್ಮಾಣ ಮಾಡುವ ಆಕಾಂಕ್ಷೆ; ಲೌಕಿಕ ಪ್ರಘಾತದ ಪ್ರಾಬಲ್ಯದಿಂದ, ತುಳಿದ ದಾರಿಯನ್ನೇ ತುಳಿಯಲು ಪುನಃ ಹೊರಟು ಅವೆಲ್ಲವೂ ಕನಸುಗಳಾಗಿ ಪರಿಣಮಿಸಿದ್ದು; ಇದ್ದುದರಲ್ಲಿಯೇ ಸ್ವತಂತ್ರ ವೃತ್ತಿಯೆಂದು ವಕೀಲಿಯ ಅಭ್ಯಾಸಕ್ಕೆ ಬಂದದ್ದು; ಉಪ್ಪಿನ ಸತ್ಯಾಗ್ರಹದ ಕಾಲಕ್ಕೆ ತಂದೆಯವರ ಆಗ್ರಹವನ್ನು ಮನ್ನಿಸಬೇಕಾಗಿ ಬಂದದ್ದು; ಎಲ್ಲವನ್ನೂ ಒಂದೊಂದಾಗಿ ವಿವೇಚಿಸಿದನು. ದೇಶದ ಕೂಗು ಕೇಳಿದೊಡನೆ ಭಾವನೆಯ ಭರದಿಂದ ಸರ್ವಸ್ವವನ್ನೂ ಧಾರೆಯೆರೆದು, ಉಳಿದವರು ಮೂರ್ಖನೆಂದರೂ, ತನ್ನ ಮನಸ್ಸಿಗಾದರೂ ಕರ್ತವ್ಯಪಾಲನೆಯ ಸಮಾಧಾನವನ್ನು ಗಳಿಸಿಕೊಂಡ ವರ್ಗಕ್ಕೂ ತಾನು ಸೇರಲಿಲ್ಲ; ಇತ್ತ ಯಾವ ಗೊಡವೆಗೂ ಹೋಗದೆ ಸುಖವಾಗಿ ನಿಶ್ಚಿತ, ಸುರಕ್ಷಿತ ಮಾರ್ಗದಿಂದ ಜೀವನವನ್ನು ಸಾಗಿಸುವವರ ವರ್ಗಕ್ಕೂ ಸೇರಲಿಲ್ಲವೆಂಬದು ಅವನಿಗೆ ಮನದಟ್ಟಾಯಿತು. ಹೀಗೆ ತನ್ನ ಆಯುಷ್ಯವು ಗೊತ್ತುಗುರಿಯಿಲ್ಲದೆ ಸಾಗಿದೆಯೆಂದು ಅವನು ನಿಷ್ಕರ್ಷಿಸಿದಾಗ ಒಂದು ಬಗೆಯ ಅಸಹಾಯತೆಯು ಅವನನ್ನಾವರಿಸಿತು.

ಅವನ ಮನಃಸಂಸ್ಕಾರಗಳಲ್ಲಿ ಒಲವಾಗಿ ನೇಯ್ದಿದ್ದ ಇನ್ನೊಂದು ಒಲವೆಂದರೆ ಮಧುಮತಿಯ ಸಹವಾಸ. ಸ್ವರಾಜ್ಯ ಫಂಡು ಕೂಡಿಸಲು ಹೊರ

ಟಾಗ ಕೈಯಲ್ಲಿ ಬಿಲ್ವರಗಳನ್ನು ಕೊಟ್ಟು, ಆಗ ಆರು ವರ್ಷದ ಬಾಲಿಕೆಯು ಇವನನ್ನಾಕರ್ಷಿಸಿದ್ದಳು. ಆ ನಂತರದ ಅವರ ಸಾಹಚರ್ಯವೂ ಸ್ನೇಹಕ್ಕೆ ಆದರಕ್ಕೆ ಪ್ರೋಷಕವಾಗಿಯೇ ಆಗಿದ್ದಿತು. ಒಮ್ಮೆ ಸ್ವೀಕರಿಸಿದ ಸ್ವದೇಶೀ ವ್ರತ ಸ್ವತಃ ನೂಲುವದು ಇವೆರಡಕ್ಕೂ ಮಧುಮತಿಯು ಈ ವರೆಗೂ ಭಂಗ ತರಗೊಟ್ಟಿದ್ದಿಲ್ಲ. ಆಚೆಯ ದೀವಳಿಗೆಯಲ್ಲಿ ಪುಣೆಯಲ್ಲಿಯೇ ಇವನು ಜಡ್ಡಾಗಿ ಮಲಗಿದಾಗ ಅವಳು ತೋರಿಸಿದ ಆಸ್ಥೆ, ಅವಳು ಮಾಡಿದ ಉಪಚಾರ ಇವುಗಳು ಪರಸ್ಪರರಿಗೂ ತಿಳಿಯದಂತೆ ಇಬ್ಬರಲ್ಲಿಯೂ ಯಾವದೋ ಒಂದು ನಿಕಟತರ ಬಂಧನವನ್ನುಂಟು ಮಾಡಿದ್ದವು. ದೇಶಕಾಲ ಪರಿಸ್ಥಿತಿಗಳ ಕಟ್ಟುಗಳ ಪರಿವೆಯಿಲ್ಲದೆ ತನ್ನ ಜೀವನದಲ್ಲಿ ಸುಖವನ್ನು ಸೂಸುವ ಶಕ್ತಿಯು ಮಧುಮತಿಯದೆಂದು ಮಾಧವರಾಯನು ಮನದಲ್ಲಿಯೇ ನಂಬಿದ್ದನು. ಈ ಅಸಹಾಯ ಕ್ಷಣದಲ್ಲಿ ಕಾಣದ ಕಡಲಹಾದಿಯನ್ನು ಹಿಡಿದು ಹೊರಟ ತನ್ನ ಆಯುಷ್ಯದ ನೌಕೆಯನ್ನು ಸುರಕ್ಷಿತವಾಗಿ ಒಂದು ಸ್ಥಾನಕ್ಕೆ ಮುಟ್ಟಿಸುವದಕ್ಕಾಗಿ ಅವಳನ್ನು ಮೊರೆಯಿಟ್ಟನು. ಈ ಹೊತ್ತಿನ ವರೆಗೆ ಸ್ತಬ್ಧನಾಗಿ ಮಲಗಿದ್ದವನು ಒನ್ಮೆಲೆ ಎದ್ದು ತಲೆಯ ಹತ್ತಿರವೇ ಕುಳಿತ ಮಧುಮತಿಯ ಕೈಯನ್ನು ಹಿಡಿದು

> "ಮುಳುಗಾಂವ ಬೆಂಡಿಗೆ ತೆಕೆಮುಕ್ಕಿ ಬಿದ್ಹಾಂಗ
> ನನ್ನ ಕಿನ್ನರಿ ನಿನ್ನ ಹಿಡದೇನs
> ನಿನ್ನ ಜೀವದ ತಂತಿ ಮಿಡದೇನs"

ಎಂದನು.

ಮರೆವೈಲಿದ್ದ ಮಧುಮತಿಯು ಮೊದಲು ದಂಗುಬಡಿದಳು. ಮನಃಪೂರ್ವಕವಾಗಿ ಹಾರಯಿಸುತಿದ್ದ, ಜೀವನದ ಅಂತರಾಳವು ಹಾತೊರೆಯುತ್ತಿದ್ದ ಕ್ಷಣವು ಒದಗಿ ಬರಲು ಅದರ ಭಾವದಲ್ಲಿ ತಾನೂ ತೇಲಿಹೋದಳು. ತನ್ನ ಭುಜದ ಮೇಲೆ ಒರಗಿದ್ದ ಮಾಧನನ ತಲೆಗೆ ತನ್ನ ಗದ್ದವನ್ನು ಊರಿ ಸ್ವರ್ಗಸುಖವನ್ನನುಭವಿಸಿದಳು.

"ಈ ಯೋಗವಿದ್ದೀತೆಂದು ನನಗನಿಸಿರಲಿಲ್ಲ" ಎಂದಳು.

"ಹಾಗೆ ನಿನ್ನ ಮನವು ಕಾತರವಾಗಲು ನಾನಂತೂ ಅವಕಾಶ ಕೊಟ್ಟಿಲ್ಲ. ಮಧುಮತಿ, ನೀನು ನನ್ನ ಜೀವನದಲ್ಲಿ ಕಾಲಿಟ್ಟ ದಿನದಿಂದ ಆ

ಸ್ಥಾನವನ್ನು ಆಕ್ರಮಿಸಿರುವಿ. ಇಂದು ಆ ಬಯಕೆಗೆ ಮಾತಿನ ಮೊಳಕೆ ಯೊಡಿಯಿತಿಷ್ಟೇ."

ತೃಪ್ತಿಯನ್ನು ಹೊಂದಿದ ಮನಸು ಅದರ ಮದವಿರುವ ವರೆಗೆ ಮೂಕವಾಗಿರುವದು.

ಎಷ್ಟೋ ಹೊತ್ತಿನ ಮೇಲೆ ಎಚ್ಚತ್ತು ಕೊನೆಗೆ ಇಬ್ಬರೂ ಮನೆಯ ಕಡೆಗೆ ಹೊರಟರು. ಹೋಗುವಾಗ ದಾರಿಯುದ್ದಕ್ಕೂ ಮುಂದಿನ ಆಯುಷ್ಯ ಕ್ರಮದ ಸ್ಥೂಲಸೂಕ್ಷ್ಮ ವಿಶದಗಳನ್ನು ಚರ್ಚಿಸುವದರಲ್ಲಿ ಮಧುಮತಿಯ ಮನೆ ಬಂದದ್ದೇ ಗೊತ್ತಾಗಲಿಲ್ಲ. ಬಾಗಿಲಲ್ಲಿಯೇ ಗುಡ್ ನಾಯಿಟ್ ಎಂದು ಮಾಧವರಾಯನು ಮರಳಿ ತನ್ನ ಕೋಣೆಗೆ ಬಂದನು.

೨

ಪರೀಕ್ಷೆ ತೀರಿಸಿಕೊಂಡು ಮಾಧವರಾಯನು ಊರಿಗೆ ಹೊರಟಿದ್ದನು. ಸ್ಟೇಶನಿನಲ್ಲಿ ಕುಸುಮೆಯ ಭೆಟ್ಟಿಯಾಯಿತು. ಅವಳೂ ಧಾರವಾಡಕ್ಕೆ ಬರುವ ವಳಾಗಿ ತಿಳಿದುಬಂತು. ಇಬ್ಬರೂ ಹರಿಜನಕಾರ್ಯಕ್ಕಾಗಿ ಸಹಾನುಭೂತಿ ಯುಳ್ಳವರು; ಸಹಕಾರಿಗಳೂ ಆದರು.

ಕುಸುಮೆಯು ಎಲ್ಲದರಲ್ಲಿಯೂ ತನ್ನದೊಂದು ಬೇರೆ ಹಾದಿ ತೆಗೆ ಯುವವಳೇ. ಅವಳು ಹರಿಜನಕಾರ್ಯವನ್ನಾರಂಭಿಸಿದ್ದು ಸವರ್ಣರ ಸಭೆ ಕೂಡಿಸಿ ಕೊಡುವ ಪ್ರವಚನಗಳಿಂದಲ್ಲ; ಸಾಬೂನು, ಪಾಟಿ ಪುಸ್ತಕ, ಮೇವು ಮಿಠಾಯಿ ತಕ್ಕೊಂಡು ಹೊಲಗೇರಿಯನ್ನು ಹೊಕ್ಕು, ಹಾಗೂ ಅದು ಯಶ ಸ್ವಿಯಾಗಿಯೂ ಪರಿಣಮಿಸಿತು. ಹತ್ತು ಅಹಂಮನ್ಯ 'ಧರ್ಮಸ್ತಂಭ' ಗಳ ಕೂಡ ತಲೆತಲೆ ತಿಕ್ಕಾಡುವದಕ್ಕಿಂತ ಐದು ಹುಡುಗರ ಪ್ರೈಮರಿ ಶಿಕ್ಷಣದ ರಿಂದ ಹರಿಜನ ಕಾರ್ಯವು ಮುಂದುವರಿಯುವದೆಂದು ನಂಬಿ ನಡೆದವಳವಳು ಅವಳ ಕಾರ್ಯತತ್ಪರತೆ ಉತ್ಸಾಹಗಳನ್ನು ನೋಡಿ ಮಾಧವರಾಯನಲ್ಲಿ ಅವಳ ವಿಷಯಕ್ಕೆ ವಿಶೇಷ ಆದರಬುದ್ಧಿಯುಂಟಾಯಿತು. ಅವಳ ಕಲ್ಪನೆಯ ಬಗ್ಗೆ ಅಭಿಮಾನವುಂಟಾಯಿತು. ಅವಳ ಸಾಹಚರ್ಯದಲ್ಲಿ ಅವನಿಗೆ ಆನಂದ ವೆನಿಸಹತ್ತಿತು. ತಾನು ಮಾಡಬೇಕೆಂದಿಟ್ಟುಕೊಂಡಿರುವ ದೇಶಕಾರ್ಯ ಸಮಾಜಕಾರ್ಯಗಳಿಗೆ ಅವಳಿಂದ ವಿಶೇಷ ಪುಷ್ಟಿ ಸಹಾಯಗಳು ದೊರೆ ಯುವವೆಂದು ಅವನು ಮನಗಂಡನು. ಕೈಕೊಂಡಿರುವ ಹರಿಜನಕಾರ್ಯ

ವಲ್ಲದೆ ಶಿಶುಸಪ್ತಾಹ, ವಸಂತೋತ್ಸವಗಳಲ್ಲಿ ಅವಳು ತೋರ್ಪಡಿಸಿದ ಚಟು ವಟಿಕೆಯು, ಕಾರ್ಯನಿರ್ವಾಹ ಶಕ್ತಿಯು ಅವಳು ಅವನ ಮನ ತುಂಬು ವಂತೆ ಮಾಡಿತು. ಅವನ ಸದ್ಯದ ಮನಃಸ್ಥಿತಿಯಲ್ಲಿ ಸ್ವಾಭಾವಿಕವಾಗಿ ಮಧುಮತಿಯು ಮರೆಯಾಗಿದ್ದಳು. ಅವಳ ಶಾಂತ ಸ್ಥಿರಜೀವನದ ವಿಚಾರ ಗಳು ಅವನ ತ್ರಸ್ತ ಮನೋರಂಗಕ್ಕೆ ಸಮಾಧಾನ ಕೊಡುವಂತಹವಾಗಿ ದ್ದವು. ಆದರೆ ತಾರುಣ್ಯದ ಬಿಸಿ ರಕ್ತಕ್ಕನುಗುಣವಾದ ಉತ್ಸಾಹಪೂರಿತ ಆಯುಷ್ಯಕ್ಕೆ ಪ್ರಚೋದಕವಾದ ಕಲ್ಪನಾ ವೈಭವ, ಧ್ಯೇಯದ ಸಾಧನೆ ಗಾಗಿ ಕಷ್ಟಸೋಸುವ ಸಿದ್ಧತೆ ಇವುಗಳ ಪರಿಣಾಮವು ಈ ಕಾಲದಲ್ಲಿ ಅವನ ಮೇಲೆ ಬಹಳವಾಯಿತು. ಅವನ ೧೨-೧೪ ವರ್ಷಗಳ ಪ್ರಬುದ್ಧ ಆಯುಷ್ಯ ದಲ್ಲೆಲ್ಲ ಉತ್ಕಟ ತ್ಯಾಗಬುದ್ಧಿಯು ಗುಪ್ತಗಾಮಿನಿಯಾಗಿ ಹರಿಯುತ್ತಿದ್ದಿತು. ೨-೩ ಪ್ರಸಂಗಗಳಲ್ಲಿ ಪ್ರಕಟವೂ ಆಗಿದ್ದಿತು. ಅವನ ಈ ವರೆಗಿನ ಆಯುಷ್ಯ ವೆಂದರೆ ಏರಿಳಿತಗಳುಳ್ಳ ವಕ್ರ ರೇಷೆ. ಮಧುಮತಿಯ ಸಂಬಂಧವು ಅದರಲ್ಲಿ ಹಾಯ್ದು ಹೋಗುವ ಸರಳರೇಷೆಯೆಂತಿತ್ತು. ಇದಕ್ಕೆ ಬೇರೆಯಾಗಿ ಕುಸು ಮೆಯ ಮನೋವೃತ್ತಿಯಿತ್ತು. ಅವಳೆಂದರೆ ಒಂದೊಂದು ಬಾರಿ ಸಹಗಾಮಿ ಯಾಗಿ ಮತ್ತೊಂದು ಬಾರಿ ಪೂರಕವಾಗಿ ಸಾಗುವ ಮತ್ತೊಂದು ವಕ್ರರೇಷೆ. ಅವನ ಜೀವನದ ಕಡಲಿಗೆ ಹುಣ್ಣಿವೆ ಅಮಾವಾಸ್ಯೆಗಳಲ್ಲಿ ಏರಿಳಿತಗಳನ್ನು ತೋರಿಸುವ ಚಂದ್ರನೇ ಬೇಕೆನಿಸಿತು. ಉತ್ಸಾಹ ಜಲವನ್ನು ತೆಕ್ಕೆತೆಕ್ಕೆಗ ಳಿಂದ ಪೂರೈಸುವ ನದಿಯು ಬೇಕೆನಿಸಿತು. ಕುಸುಮೆಯು ಅವನ ಈ ಆಕಾಂಕ್ಷೆಗಳನ್ನು ಪೂರೈಸತಕ್ಕವಳಾಗಿದ್ದಳು. ಮಧುಮತಿಯು ಪರ್ವತ ದಂತೆ ಸ್ಥಿರ, ಅಚಲ. ಅದರ ಅಡಿಗಳನ್ನು ಏನೋ ಒಂದು ಕಾಲಕ್ಕೆ ತೆರೆಗಳಿಂದ ತೊಳೆದದ್ದಾಯಿತು. ಈಗ ಹಿಂದಕ್ಕೆ ಸರಿದ ಸಮುದ್ರದ ಚಿತ್ತವು ಅತ್ತ ತೊಡ ಗಲಿಲ್ಲ. ನಿಸರ್ಗತಃ ಸಮುದ್ರವನ್ನು ಸೇರುವ ನದಿಯನ್ನು ಅದು ಸ್ವೀಕರಿಸುವ ದಾದರೆ ಆತಂಕವೆಲ್ಲಿ? ಮಾಧವ ಕುಸುಮೆಯರ ಮನೋಮಿಲನವಾಯಿತು.

೩

ಒಂದು ದಿನ ಮಧುಮತಿಯು ಪುಣೆಯಿಂದ ಬಂದಳು; ಕುಸುಮೆಯ ಮನೆಯಲ್ಲಿಳಿದಳು. ಆಗ ಕುಸುಮೆಯು ಮನೆಯಲ್ಲಿರಲಿಲ್ಲ. ಊಟ ಉಡಿಗೆ ಯಾದ ಮೇಲೆ ಮಾಧವರಾಯನ ಮನೆಯ ಕಡೆಗೆ ಹೋದಳು. ಮಹಡಿಯ

ಮೇಲಿಬ್ಬರೂ ಇರುವದಾಗಿ ತಿಳಿಯಬಂತು. ಇವಳು ಪ್ರವೇಶಿಸಿದಾಗ ಕುಸುಮೆಯ ಕೈಯು ಮಾಧವರಾಯನ ಕೈಗಳಲ್ಲಿತ್ತು. ಮುಖವು ಲಜ್ಜೆ ಯಿಂದ ಆರಕ್ತವಾಗಿತ್ತು. ಕಪೋಲಗಳ ಮೇಲಿನ ಗುಲಾಬೀ ಛಾಯೆಗೆ ಬೇರೆ ಅರ್ಥವನ್ನು ಕಲ್ಪಿಸಲು ಅವಕಾಶವೇ ಇರಲಿಲ್ಲ. ಪ್ರಾಚೀನ ಅರ್ವಾ ಚೀನ ಮಾನಸಶಾಸ್ತ್ರದಿಂದಲೂ, ಯಾವದೇ ಜನಾಂಗದ ಅಲಿಖಿತ ಕಾನೂ ನಿನಿಂದಲೂ ಅದು ಪ್ರಸ್ತಾವ ಹಾಗೂ ಸಮ್ಮತಿಯ ಮುದ್ರೆ (Seal of proposal and acceptance) ಯಾಗಿತ್ತು. ಆ ಕ್ಷಣಕ್ಕೆ ಮೂವರು ಚಕಿತರಾದರು. ಮಾಧವರಾಯನಿಗಂತೂ ಹಿಡಿಯಬೇಕೆಂದಿದ್ದ ಮಾರ್ಗ ವನ್ನು ಆರಿಸಿ ಹೊರಡಲಿರುವಾಗ ಹೊಂದಬೇಕಾಗಿರುವ ವಿಶ್ರಾಮಸ್ಥಾನ ವಾವುದೆಂಬದನ್ನು ಇನ್ನೊಮ್ಮೆ ತಿಳಿದು ನೋಡೆಂದು ಹೇಳಿದಂತಾಯಿತು. ಮಾರ್ಗಕ್ರಮಣದಲ್ಲಿ ಈ ಬಗೆಯ ಕವಲ್ಬಟ್ಟೆಗೆ ಹೇಗೆ ಬಂದೆನೆಂಬದು ಅವನ ದವನಿಗೇ ಆಶ್ಚರ್ಯವೆನಿಸಿತು.

ಮಧುಮತಿ ಕುಸುಮೆಯರ ನಡುವೆ ಅವನ ಜೀವನದ ಆಕಾಂಕ್ಷೆಯು ಹೊಯ್ದಾಡ ಹತ್ತಿ ಗೊಂದಲದಲ್ಲಿ ಬಿದ್ದನು. ಮೊದಲು ಸಾವರಿಸಿಕೊಂಡ ವಳು ಕುಸುಮೆ. ಅವಳ ಮನಃಸ್ಥಿತಿಯು ಅಷ್ಟು ತೊಡಕಿನದಿರಲಿಲ್ಲ. "ಪುಣೆ ಯಿಂದೇನು ಮೇಲಿಗೆ ಬಂದೆಯಾ? ಮೊದಲು ಒಂದು ಪತ್ರ ಹಾಕಬಾರ ದಿತ್ತೆ? ಸ್ಟೇಶನಿಗೆ ಬರುತ್ತಿದ್ದೆವು" ಎಂದು ಅಂದಳು.

ಜೋಲಿ ತಪ್ಪಿದ ಎಲ್ಲರ ಮನೋಯಂತ್ರಗಳು ಸಾಮಾನ್ಯ ಮಾತಿನ ಸುರಕ್ಷಿತ ದಾರಿಯನ್ನು ಕೂಡಿ ಸಮಾಧಾನದಿಂದ ಮತ್ತೆ ನಡೆದವು. ಯಾರಿಗೂ ಅಷ್ಟು ಅಗತ್ಯವಿಲ್ಲದಿದ್ದರೂ ಎಲ್ಲರೂ ಮಾತಾಡಬಹುದಾದ ವಿಷಯಗಳನ್ನು ಮಾತಾಡುತ್ತ ಹಾಗೂ ಹೀಗೂ ಮನೆಗೆ ಹೋಗುವ ಹೊತ್ತಿನ ವರೆಗೆ ಕಾಲಕಳೆದರು.

ಮನೆಗೆ ಬಂದ ಮೇಲೆ ಅಂದಿನ ರಾತ್ರಿ ಮಧುಮತಿಯು ಪ್ರಸ್ತಾಪ ವೆತ್ತಿದಳು. ಕುಸುಮೆಯು ಪೂರ್ವವೃತ್ತಾಂತವನ್ನೇನೂ ಅರಿಯದವಳಾದ್ದ ರಿಂದ ಜೀವದ ಗೆಳತಿಯಾದ ಮಧುಮತಿಯ ಮುಂದೆ ನಿಃಸಂಕೋಚವಾಗಿ ಎಲ್ಲವನ್ನೂ ಹೇಳಿದಳು. ಮಧುಮತಿಗೆ ಅಂದಿನ ರಾತ್ರಿ ನಿದ್ದೆ ಬರಲಿಲ್ಲ. ವಿಚಾರ ಮಾಡಿಮಾಡಿ ಕೊನೆಗೊಂದು ನಿರ್ಣಯಕ್ಕೆ ಬಂದಳು. ಇಷ್ಟು ದಿನ ಆಸ್ಥೆಯಿಂದ ಶೇಖರಿಸಿದ ಜೇನು ಹುಟ್ಟನ್ನು ಅನ್ಯರ ವಶಕ್ಕೊಪ್ಪಿಸಿ

ಹೊರಟು ಹೋಗುವದಾಗಿ ನಿಶ್ಚಯಿಸಿದಳು. ಮರುದಿನ ಅಸ್ವಸ್ಥಳಿದ್ದೇನೆಂದು ಮನೆಯಲ್ಲುಳಿದವಳು ಕುಸುಮೆಯು ಹೊರಗಿನಿಂದ ತಿರುಗಿ ಬರುವ ಹೊತ್ತಿಗೆ ಮಧುಮತಿಯು ಊರಿಗೇ ಹೊರಟು ಹೋಗಿದ್ದಳು. ಅವಳ ವರ್ತನದ ರಹಸ್ಯವು ಕುಸುಮೆಗೆ ಹೊಳೆಯಲಿಲ್ಲ. ಮಾಧವರಾಯನೂ ಅದರ ವಿಶೇಷ ಚರ್ಚೆಯ ಗೋಜಿಗೆ ಹೋಗಲಿಲ್ಲ. ಯಥಾಕಾಲಕ್ಕೆ ಮಾಧವ ಕುಸುಮೆಯರು ಪತಿಪತ್ನಿಯರಾದರು.

೪.

ಮಧುಮತಿಯು ಮಾತ್ರ ಕುಲಗುರುಗಳ ಆಶ್ರಮದಲ್ಲಿ ಶಿಷ್ಯತ್ವವನ್ನು ವಹಿಸಿ ಸೇವಾನಿರತಳಾದಳು. ಜೀವನದ ಸಾರ್ಥಕ್ಯವನ್ನು ಬಯಸಿದವಳ ಮನೋರಥವು ಒಂದು ರೀತಿಯಿಂದ ಭಂಗಹೊಂದಲು ಆಯುಷ್ಯಕ್ರಮವನ್ನೇ ಬದಲಿಸಿದಳು. ಮೊದಲಿನ ಪಾತ್ರವು ಇಲ್ಲದಂತಾದರೂ ನೀರಿನ ಝರಿಯ ಸೆಲೆಯ ಕಸುವು ಕುಗ್ಗುವದು ಅಷ್ಟರಲ್ಲಿಯೇ ಇದೆ. ಸಮಾಜದ ಮಾನ್ಯ ಘಟಕವಾದ ಕುಟುಂಬದ ಅಧಿಷ್ಠಾತ್ರೀದೇವತೆಯಾಗಿ ಉದಯೋನ್ಮುಖ ರಾಷ್ಟ್ರದಲ್ಲಿ ಮಾತೃಸ್ಥಾನವನ್ನಲಂಕರಿಸಿ, ಭಾವೀ ಜನಾಂಗದ ಭಾಗ್ಯವಿಧಾತ ಳಾಗಿ ನಿಯತಕ್ರಮದಲ್ಲಿ ಆಯುಷ್ಯವನ್ನು ಕಳೆಯಬೇಕೆಂಬ ಅವಳ ಆಕಾಂಕ್ಷೆಯು ಭಂಗವಾಯಿತು. ಇದರಿಂದ ಅದು ಕುಗ್ಗದೆ ಮತ್ತಿಷ್ಟು ಹೆಚ್ಚಿತು. ಆದರೆ ಗುರುಗಳ ಸನ್ನಿಧಿಯಿಂದ ಕೆಲವರ್ಷಗಳ ಮೇಲೆ ಅವಳಿಗೆ ಜೀವನದ ಬೇರೆ ಶಕ್ತಿಗಳ ಪರಿಚಯವಾಯಿತು. ಸಾಧನಬಲದಿಂದ ಒಂದು ಮೇಲ್ಮೆಟ್ಟಲಿಗೆ ಬಂದ ಅವಳಿಗೆ ವಿಸ್ತೃತ ಕ್ಷೇತ್ರ ಕ್ಷಿತಿಜಗಳು ಕಾಣತೊಡಗಿ ದವು. ಈವರೆಗೆ ಸ್ವಾತಂತ್ರ್ಯಕ್ಕಾಗಿ ನಡೆದ ಪ್ರಯತ್ನಗಳ ಸಂಘಟನೆಯು ಮಾರ್ಗದಲ್ಲಿಯ ತಡೆಗಳು, ಆದರಲ್ಲಿಯ ದೋಷಗಳು ಒಡೆದು ಕಾಣಹತ್ತಿ ದವು. ಆ ಮಾರ್ಗದ ಮೇಲಿನ ಅವಳ ವಿಶ್ವಾಸವು ಇಲ್ಲದಂತಾಯಿತು. ಆ ಯೋಜನೆಯಲ್ಲಿ ಸಂಖ್ಯಾಬಲವು ಮುಖ್ಯ. ಸಂಘಟನೆಯು ಅವಶ್ಯಕ. ಆ ಯೋಜನೆಯಲ್ಲಿ ತನ್ನ ಸಂತಾನವು ಲಕ್ಷದಲ್ಲೊಬ್ಬ ದಂಡಾಳಾಗಬಹುದು, ಇಲ್ಲವೆ ಲಕ್ಷ ದಂಡಾಳುಗಳನ್ನು ನಂಬಿ ನಡೆಯುವ ದಂಡನಾಯಕನಾಗ ಬಹುದು. ಆಗ ಅವಳ ಮನಸಿನ ನವೀನ ಕ್ಷೇತ್ರದಲ್ಲಿ ಉದಯಿಸುತ್ತಿದ್ದ ಶಕ್ತಿಯ ಮುಂದೆ ಇದು ಕ್ಷುದ್ರವೇ ಸರಿ. ಈ ದಾಸ್ಯಾಪಹಾರದ ಕಾರ್ಯಕ್ಕೆ

ಕ್ಷಣದಲ್ಲಿ ಪ್ರತಿಸೃಷ್ಟಿಯನ್ನೇ ನಿರ್ಮಾಣ ಮಾಡಬಲ್ಲ ಅದ್ಭುತ ಶಕ್ತಿಯುಳ್ಳವನ ಜನ್ಮವಾಗಬೇಕು. ವಿಶ್ವಕುಟುಂಬಿಯಾದ ಅವಳ ಮನಸ್ಸಿನಲ್ಲಿ ಈ ನಂಬಿಗೆಯು, ಅದರೊಡನೆ ಅದರ ಹಂಬಲವು ದಿನ ದಿನಕ್ಕೆ ಬೆಳೆಯತೊಡಗಿತು. ೧೦ ಸಾವಿರ ವರ್ಷ ತಪಸ್ಸನ್ನಾಚರಿಸಿದರೂ ಚಿಂತೆಯಿಲ್ಲ. ಆದರೆ ದಾಸ್ಯಾಪಹಾರವಾಗುವದು ಗರುಡನಂಥವನೊಬ್ಬನಿಂದಲೇ. ಆ ವಿಮೋಚಕನ ಅವತಾರವನ್ನು ಹಾರಯಿಸುವದು, ಅದರ ಧ್ಯಾನದಲ್ಲಿಯೇ ಇರುವದು ಇದೇ ಅವಳ ಜೀವಿತದ ಸಾರವಾಗಿತ್ತು. ವಿನತೆಯ ಭಾಗ್ಯವನ್ನು, ದೇವಕಿಯ ಭಾಗ್ಯವನ್ನು ದಯಪಾಲಿಸೆಂಬದು ಅವಳ ನಿತ್ಯದ ಪ್ರಾರ್ಥನೆಯಾಗಿತ್ತು. ಆ ಪ್ರಾರ್ಥನೆ ಸಫಲವಾಗುವ ಪೂರ್ವಚಿನ್ಹಗಳು ತೋರಹತ್ತಿದವು. ಅವಳ ದೃಷ್ಟಿಯಲ್ಲಿ ಮಾಧವನ ಹೊರತು ಅನ್ಯರಾರೂ ಪುರುಷಸ್ಥಾನವನ್ನು ಸ್ವೀಕರಿಸುವಂತಿರಲಿಲ್ಲ. ಅವನ ಜೀವನಯೋಗ್ಯತೆಯನ್ನು ಅವಳು ಬಲ್ಲಳು.

ಒಂದುದಿನ ಮಧುಮತಿಯು ಮಾಧವನಿದ್ದೆಡೆಗೆ ಬಂದಳು. ಯೋಗ್ಯ ಸತ್ಕಾರಗಳಾದ ಮೇಲೆ ರಾತ್ರಿಯ ವೇಳೆಯಲ್ಲಿ ಮಾಧವರಾಯನು ಈ ದರ್ಶನದ ಅನುಗ್ರಹದ ಕಾರಣವನ್ನು ಕೇಳಿದನು. ಮಧುಮತಿಯು ಮೃದುವಾಗಿ ನಕ್ಕುನುಡಿದಳು.

"ಬಂದ ಕಾರಣವನ್ನು ಹೇಳಿದ ಮೇಲೆ ಅನುಗ್ರಹವೆನ್ನುವಿರೋ ಕ್ರೂರಗ್ರಹಬಾಧೆಯನ್ನುವಿರೋ ನೋಡಿರಿ. ನಿಮ್ಮನ್ನು ನನ್ನೊಂದಿಗೆ ಕರೆದುಕೊಂಡು ಹೋಗಬೇಕೆಂದು ನಾನು ಬಂದದ್ದು. ಈ ಗತಾನುಗತಿಕ ಜೀವನದ ಸಂಸಾರದ ಮೋಹವನ್ನು ಬಿಟ್ಟು ಹೊರಟು ಬನ್ನಿರಿ. ಸಾಕು."

ಅವನ ಈವರೆಗಿನ ಜೀವನದ ಆಧಾರಭೂತ ತತ್ವಗಳೆಲ್ಲವು ಈ ಸೂಚನೆಯನ್ನು ಮನ್ನಿಸುವಂತಿರಲಿಲ್ಲ.

"ಅದೇಕೆ? ನಾನೊಲ್ಲೆ. ಎಡವುತ್ತ ಮುಗ್ಗುತ್ತಾದರೂ ಈ ಜೀವನದಲ್ಲಿಯೇ ನಾನು ಸುಖವನ್ನು ಕಂಡುಕೊಳ್ಳುವೆನು."

"ಜೀವನದ ಇತರ ಶಕ್ತಿಗಳ, ಅದ್ಭುತ ಸಾಮರ್ಥ್ಯಗಳ ಅನುಭವವನ್ನು ಆಧ್ಯಾತ್ಮದಿಂದೇಕೆ ಪಡೆಯಬಾರದು? ನಿಮ್ಮ ಜೀವಿತಕಾರ್ಯದ ಸಾಧನೆಗಾಗಿ ಈ ವರೆಗೂ ಅಸಹಕಾರಿತೆ, ಪ್ರತೀಕಾರಗಳನ್ನು ಕೈಕೊಂಡಂತೆ ಇದನ್ನೊಮ್ಮೇಕೆ ನೋಡಬಾರದು? ಸಂಕುಚಿತ ಕ್ಷೇತ್ರದಲ್ಲಿ ತೊಳಲಾಡುವದನ್ನು

ಬಿಟ್ಟು ಬುದ್ಧಿಯ ಹೊರತು ಇರುವ ಶಕ್ತಿಗಳನ್ನು ಆತ್ಮವಿಕಾಸಕ್ಕೇಕೆ ಉಪಯೋಗಿಸಬಾರದು? ಮನುಷ್ಯನು ಬುದ್ಧಿಪ್ರಧಾನನಾಗಿದ್ದರೂ ಬುದ್ಧಿಯೇ ಅವನ ಸರ್ವಸ್ವವಲ್ಲ. ವಿಚಾರಮಾಡಿದರೆ ನಿಮ್ಮ ಬುದ್ಧಿಗೇ ಇದು ಹೊಳೆಯುವದು."

ಬಂಗಾರದ ಕಣಿಯಿಂದ ಹೊರಟ ಮೃಣ್ಮಿಶ್ರಿತ ಲೋಹಚೂರ್ಣವು ಪಾರಜದ ಸಂಪರ್ಕ ಬರಲು ಮಣ್ಣು ಬಿಟ್ಟು ಪಾರಜಕ್ಕೆ ಅಂಟಿಕೊಳ್ಳುವದು. ಮಧುಮತಿಯ ಆಗಿನ ಅತಿಮಾನುಷ ತೇಜದಿಂದ ಆಕೃಷ್ಟನಾಗಿ ಮಾಧವನು ಆವಳೊಡನೆ ನಡೆದನು. ತುಂಬಿದ ಮನೆಯನ್ನು, ಸುಖಮಯ ಸಂಸಾರವನ್ನು ಬಿಟ್ಟು ಯೋಗಿನಿಯಾದ ಮಧುಮತಿಯೊಡನೆ ಹೊರಟುಹೋದನೆಂದು ಜನ ಾಡುವರು. ಅವನನ್ನು ಕರೆತಂದು ಗುರುಗಳ ಪಾದಕ್ಕೊಪ್ಪಿಸಿ ಅನುಗ್ರಹವಾಗಬೇಕೆಂದು ಪ್ರಾರ್ಥಿಸಿದಳು. ಕಣ್ಣು ತೆರೆದುದೂ ಆಯಿತು. ಬಂಗಾರ ಮಾದರೇನಾಯಿತು, ಧರಿಸಲು ಯೋಗ್ಯವಾಗಬೇಕಾದರೆ ಪುಟಕೊಡುವ ಸಂಸ್ಕಾರವಂತೂ ಆಗಲೇ ಬೇಕಲ್ಲವೇ? ಕೆಲವು ವರ್ಷಗಳು ಸಾಧನದಲ್ಲಿ ಕಳೆದವು.

೫.

ದೂರದಲ್ಲಿಯ ಬೆಟ್ಟದ ಮೇಲಿನದೊಂದು ಪ್ರಶಾಂತವಾದ ವನಸ್ಥಲ. ಮಧುಮತಿ ಮಾಧವರಿಬ್ಬರೂ ಕುಳಿತಿದ್ದಾರೆ. ವಸಂತಋತು. ಪ್ರಫುಲ್ಲ ಕುಸುಮಗಳ ಸೌರಭದಿಂದ, ವನಶ್ರೀಯ ವಿಲಾಸದಿಂದ ಪ್ರಕೃತಿಯು ಪುರುಷನನ್ನಾಹ್ವಾನಿಸುವ ಮುಹೂರ್ತ. ಮಾಧವನ ಮನವು ಶತಧಾ ಚೂರ್ಣವಾಗುತ್ತಲಿತ್ತು. ವಿಹ್ವಲನಾಗಿ ಮಾಧವನಂದನು:

"ಬೇಡ, ಬೇಡ, ಮಧುಮತೀ, ನಿನ್ನ ಬಾಣಗಳನ್ನೆಸೆಯಬೇಡ. ನಾನು ಸಹಿಸಲಾರೆ."

"ಮಾಧವಾ, ಇದು ಅನುನಯದ ಪ್ರಸಂಗವಲ್ಲ. ಪ್ರಕೃತಿಯ ಆಜ್ಞೆಯಿದು. ಅದನ್ನು ಮೀರಲೆಸಗುವಿಯಾ?"

"ಇಷ್ಟು ದಿನದ ಸಾಧನಕ್ಕೆ ಚ್ಯುತಿ ಬರುವಂಥ ಈ ಕಾರ್ಯಕ್ಕೆ ನನ್ನನ್ನೆಳೆಯಬೇಡ."

"ಸಾಧನದ ಪೂರ್ಣತೆಯು ಸಮಯವು ಒದಗಿ ಬಂದಿರಲು ಚ್ಯುತಿಯೆನಿಸುವದೇ ನಿನಗಿದರಲ್ಲಿ! ಫಲಿಸುವದು ಚ್ಯುತಿಯೇ? ಪ್ರಕೃತಿಯು ತನ್ನ ಉದ್ದೇಶದ ಪೂರ್ತತೆಯನ್ನು ಹೊಂದಲು ಹೆಣಗುತ್ತಿರುವಾಗ ನಿನ್ನ ಸಾಧನದ ಚಿಂತೆಯೇ ನಿನಗೆ?"

"ಅವಳು ಬೇರೆ ಮಾರ್ಗವನ್ನು ಹುಡುಕಿಕೊಳ್ಳಲಿ."

"ಈ ವರೆಗೂ ಹುಡುಕಿಲ್ಲ. ಇನ್ನು ಪ್ರಕೃತಿಗೆ ಆಜ್ಞೆಮಾಡುವ ಯೋಗ್ಯತೆ ಯಾರಲ್ಲಿದೆ? ನಾನೀಗ ಮಾತನಾಡುತ್ತಿರುವದು ಸ್ತ್ರೀಯೆಂದಲ್ಲ, ಪ್ರಕೃತಿಯ ಮೂರ್ತಸ್ವರೂಪಳೆಂದು. ಎದುರಿಸಬೇಡ, ಮಿಡುಕಬೇಡ. ಇದರಲ್ಲಿ ಜೀವನದ ಯಾವ ತತ್ವಾಂಶಕ್ಕೂ ಭಂಗವಿಲ್ಲ. ಮನ್ನಿಸು ನನ್ನಾಜ್ಞೆಯನ್ನು."

ವಸುಮತಿಯು ಗಗನಮಧ್ಯದಲ್ಲಿದ್ದ ರವಿಯ ಮುಖಾಂತರ ಸಮುದ್ರನಾಥನನ್ನು ಪ್ರಾರ್ಥಿಸಲು ಜೀವನಾಂಶವನ್ನು ನೀಡದೆ ಇರುವನೇ? ಹಾಗಿರುವದು ಅವನಿಂದಾದೀತೆ?

ಕೆ ಸ ರು

ಪೀಠಿಕೆ:—ಹೇಳಿ ಕೇಳಿ ನಾನು ಡಾಕ್ಟರನು; ಸಾಹಿತಿಯಂತೂ ಅಲ್ಲ. ಮೊನ್ನೆ ಮೊನ್ನೆ ಸಂಭವಿಸಿದ ಒಂದು ಸಂಗತಿಯಿಂದ ನನ್ನ ರೂಢಿಸ್ರವಣ ಆಯುಷ್ಯಕ್ಕೊಂದು ಧಕ್ಕೆ ತಗಲಿದ್ದರಿಂದ "ಚಾಪಲಾಯ ಪ್ರಚೋದಿತ" ನಾಗಿ ಪ್ರಿಸ್ಕ್ರಿಪ್ಷನ್‌ಗಳ ಬದಲು ನನ್ನ ಕಥೆಯನ್ನೇ ಬರೆದಿದ್ದೇನೆ. ನುರಿತ ಕಥೆಗಾರರು ಕಲ್ಪಿಸಿ ಬರೆದ ಕತೆಗಳಲ್ಲಿ ಕಂಡುಬರುವ ಕೌಶಲ್ಯವು ಈ 'ಕ್ಷ' ಕಿರಣ ಚಿತ್ರದಲ್ಲಿಲ್ಲ. ಏನಾದರೊಂದು ಏಕಸೂತ್ರತೆ ಕಂಡುಬಂದುದೇ ಆದರೆ ನನ್ನ ಹೃದಯದ ಆವಿಷ್ಕರಣದಿಂದಲೇ ಹೊರತು ನನ್ನ ಲೇಖನಚಾತುರ್ಯದಿಂದಲ್ಲ. ಕಲೆ-ತಂತ್ರಗಳನ್ನಪೇಕ್ಷಿಸುವವರಿಗೆ ಭವಭೂತಿಯಂತೆ 'ತಾನ್‌ಪ್ರತಿ ನೈಷ ಯತ್ನಃ' ಎಂದೇ ನಾನಾದರೂ ಹೇಳಬೇಕಾಗುವದು. ಆದರೆ ಆ ಮಹಾ ಕವಿಯ ಆತ್ಮವಿಶ್ವಾಸಯುಕ್ತ ದರ್ಪೋಕ್ತಿಯಿಂದಲ್ಲ; ಹೊಸಬನ ಅಧೈರ್ಯದಿಂದ. 'ಗಾಯಕನ ಮಗನು ಅತ್ತರೂ ಸ್ವರದಲ್ಲಿ' ಯೆಂಬಂತೆ ಸಮಾಜ–ಜೀವನದ ಒಂದು ರೋಗದ ನಿದಾನವೇ ಕೃತಪ್ಪಿ ಆಗಬಹುದೆಂಬ ಅಂಜಿಕೆ ನನಗೆ. ಇರಲಿ. ಕಥೆಯ ಕಥೆಯೇ ಬೆಳೆಯಿತು. ಕಥೆಯ ಕಡೆಗೆ ಹೊರಳುವೆನು.

ವಿನೋದ:—ಮಧ್ಯಮವರ್ಗದ ಮೇಲ್ತರಗತಿಯ ಕುಟುಂಬದಲ್ಲಿ ಹುಟ್ಟಿದವನು ನಾನು. ಉಚ್ಚ ಶಿಕ್ಷಣಕ್ಕಾಗಿ ಪುಣೆಯ ಮೆಡಿಕಲ್ ಸ್ಕೂಲಿನಲ್ಲಿ ಇದ್ದೆನು. ಆಗ–ಆಗ–ಆಗುವದೇನು! ಎಲ್ಲ ಕಥೆಗಳಲ್ಲಿಯ ಎಲ್ಲ ತರುಣರಂತೆಯೇ ನಾನೂ ಒಬ್ಬ ಸಹಾಧ್ಯಾಯಿನಿಯ ಪ್ರೇಮಪಾಶದಲ್ಲಿ ಸಿಲುಕಿದೆನು. ಒಂದು ದಿನ ಹೀಗೆಯೇ ಸಹಜವಾಗಿ ನಾನು ನಿಂತಾಗ ಅವಳು ಪಾವಟಿಗೆಗಳನ್ನೇರಿ ಬರುತ್ತಿದ್ದಳು. ಬಿಸಿಲಿನಿಂದ ನೆರಳಿಗೆ ಅದೇ ಬಂದದ್ದರಿಂದ ಕೈಯಲ್ಲಿದ್ದ ಪುಸ್ತಕಗಳನ್ನು ಈ ಕೈಯಿಂದ ಆ ಕೈಗೆ ಬದಲಿಸಿ, ಕರವಸ್ತ್ರವನ್ನು ತೆಗೆದು ಮೋರೆಯ ಮೇಲಿನ ಬೆವರುಹನಿಗಳನ್ನು ಒರೆಸುತ್ತಿರುವಷ್ಟರಲ್ಲಿ ಕರವಸ್ತ್ರವು ಕೆಳಗೆ ಬಿತ್ತು. ಅದನ್ನೆತ್ತಿಕೊಳ್ಳಲು ಅವಳು ಬಾಗಿದಳು. ಆ

ಭಂಗಿಯಿನ್ನೂ ನನ್ನ ಸ್ಮೃತಿಪಟಲದ ಮೇಲೆ ಅಚ್ಚಳಿಯದೇ ಇದೆ. ಮನೋಭವನ ಸ್ವಾಗತಕ್ಕಾಗಿ ರಚಿಸಿದ ಮಂಗಲಕಲಶಯುಕ್ತ ತೋರಣವೋ ಎಂಬಂತೇ ಇತ್ತು. ಶತಧಾಭಿನ್ನವಾದ ನನ್ನ ಹೃದಯವನ್ನು ಕರವಸ್ತ್ರದೊಡನೆ ಎತ್ತಿಕೊಂಡಳು. ಪೂರ್ವಪರಿಚಿತಳಾದರೂ ಆ ಕ್ಷಣಕ್ಕೆ ಅವಳಲ್ಲಿ ಅಪೂರ್ವವಾದ ರಮಣೀಯತೆಯನ್ನು ಕಂಡು ನಾನು ಮನಸೋತೆನು. ಪ್ರಯತ್ನದಿಂದ ಪರಿಚಯವು ಬೇಗನೆ ಪರಸ್ಪರ ಪ್ರೇಮದಲ್ಲಿ ಪರಿಣಮಿಸಿತು. ನಾನು ಪೂರ್ಣ ಸುಖಿಯಾಗಲು ಯಾವ ಪ್ರತ್ಯವಾಯವೂ ಇಲ್ಲವೆಂದೆನಿಸಿತು.

ಒಂದು ದಿನ ವಸತಿಗೃಹದ ನನ್ನ ಕೋಣೆಯಲ್ಲಿ ಕೆಲವು ಮಿತ್ರರೊಡನೆ ಮಿಷ್ಟಾನ್ನಾನಂತರದ ತಾಂಬೂಲ-ಸೇವನ-ಧೂಮ್ರಪಾನಾದಿ ವಿಧಿಯುಕ್ತ ಹರಟೆ ಸಾಗಿತ್ತು. ಆ ವಯಸ್ಸಿಗೆ, ಆ ಪರಿಸ್ಥಿತಿಗೆ ಸಹಜವಾಗಿ ವಿದ್ಯಾರ್ಥಿನಿಯರ ವಿಷಯವು ಹೊರಟಿತು. ಯಾರ ಯಾರ ಸ್ವಭಾವ ಹೇಗೆ, ಯಾರ ಸಲಿಗೆ ಯಾರಕೂಡ ಎಷ್ಟು, ಮೊದಲಾದ ಮಾತು ನಡೆದಿದ್ದವು. ನನ್ನ ಹಾಗೂ ನನ್ನ ಪ್ರೇಯಸಿಯ ಬೆಳೆದ ಸಲಿಗೆಯು ನನ್ನ ಗೆಳೆಯರ ಕಣ್ಣಿಗೆ ಬಿದ್ದಿತು. 'ಈ ಸ್ಪರ್ಧೆಯಲ್ಲಿ ಮೊದಲನೆಯ ಪಾರಿತೋಷಕವನ್ನು ವಸಂತರಾಯರೇ ಹೊಡಕೊಂಡು ಹೋಗುವಂತೆ ಕಾಣುತ್ತದೆ' ಎಂದು ಯಾರೋ ನನ್ನ ವಿಷಯವನ್ನೆತ್ತಿದರು. 'ಮಾಲತಿಯೇನು ತುಸು ನೀರಿನಲ್ಲಿ ಮುಣುಗುವವಳಲ್ಲ. ಇವರಿಗೇನು ಅಂತು ಹತ್ತಗೊಡುವಳು? ಅಷ್ಟಕಷ್ಟೇ ತೋರಿಕೆಗೇ! ಕಂಪೌಂಡಿನ ಹೊರಗೆ ಇವರೊಡನೆ ಕೂಡಿಕೊಂಡು ಹೋಗುವಷ್ಟು ಸಹ ಧೈರ್ಯವಿಲ್ಲ' ಎಂದು ಮತ್ತೊಬ್ಬರು ನನ್ನನ್ನು ಪೀಡಿಸಿದರು. ಮೂರ್ಖನ ಹಾಗೆ ನಾನು ವಾದಿಸಿ ವಾದದ ಭರದಲ್ಲಿ ಕೊರಳಿಗೊಂದು ಜಿದ್ದು ಕಟ್ಟಿಕೊಂಡೆ. ಗಂಧರ್ವ ನಾಟಕಮಂಡಳಿಯು ಅದೇ ಊರಿಗೆ ಬಂದಿತ್ತು. ಅದೇ ರವಿವಾರದ ನಾಟಕಕ್ಕೆ ಅವಳೊಡನೆ ನಾನು ಹೋದರೆ ೧೦ರೂ. ಕೊಡಲೊಪ್ಪಿದನೊಬ್ಬ ಮಿತ್ರಮಹಾಶಯ, ನನ್ನಿಂದಾಗದಿದ್ದರೆ ನಾನು ಹತ್ತು ರೂಪಾಯಿ ಕೊಡಬೇಕೆಂದು ಗೊತ್ತಾಯಿತು. ಮುನ್ನಾದಿನ ಪ್ರಸ್ತಾಪ ತೆಗೆದು ರವಿವಾರ ನಾಟಕಕ್ಕೆ ಕರೆಯಲೆಂದು ಹೋದೆನು. ಮೊದಮೊದಲು ಅದು ಇದು ಎಂದು ನೆವಹೇಳುತ್ತ ಕೊನೆಗೆ ಒಲ್ಲೆನೆಂದಳು. ಕಟ್ಟುನಿಟ್ಟಿಗೆ ಹಚ್ಚಿ ಕಾರಣವನ್ನು ಕೇಳಲು ಏನೂ ಇಲ್ಲವೆಂದಳು. ಆಗ ನನ್ನ ಆಗ್ರಹದ

ಮೂಲಕಾರಣವನ್ನು ಹೇಳಿದೆನು. ಗೆಳೆಯರಲ್ಲಿ ನನ್ನ ಮರ್ಯಾದೆಯುಳಿಸಲು ಬರಬೇಕೆಂದೆನು. ಜಿದ್ದು ಕಟ್ಟಿದವರ ಹೆಸರನ್ನು ಕೇಳಿದೊಡನೆ ಏನೋ ಒಂದು ಯೋಚಿಸಿದಂತೆ ಮಾಡಿ ಅಂದಳು:

'ವಸಂತರಾಯರೇ, ಕೆಟ್ಟೆನಿಸಿಕೊಳ್ಳಬೇಡಿರಿ. ಜೀವನದಲ್ಲಿ ನಾನೇತರ ಅಪೇಕ್ಷೆಮಾಡಬೇಕೆಂಬುದರ ತುಣುಕನ್ನು ಜಗತ್ತು ನನಗಾಗಲೇ ತೋರಿಸಿದೆ. ಇಷ್ಟೇಕೆ, ಸುಶಿಕ್ಷಿತರೆಂದೆನಿಸಿಕೊಳ್ಳುವವರ ಮನೋವೃತ್ತಿಯ ಮಾದರಿಯು ಕೂಡ ನನಗೆ ದೊರೆತಿದೆ. ನಿಮಗೆ ಈ ಮಾತನ್ನು ನಾನಾಗಿ ತಿಳಿಸಬೇಕೆಂದಿರಲಿಲ್ಲ. ಆದರೆ ಪ್ರಸಂಗ ಬಂದಿದೆಯೆಂದು ಹೇಳುತ್ತೇನೆ. ನಿಮ್ಮ ಮಿತ್ರ ಶ್ರೀಯುಃ × × × ರು ನನ್ನನ್ನೊಮ್ಮೆ ಆಗ್ರಹದಿಂದ ನಾಟಕ ನೋಡಲಿಕ್ಕೆಂದು ಕರೆದುಕೊಂಡು ಹೋದರು. ಎರಡು ತಿಕೀಟು ತೆಗೆದು ಒಂದನ್ನು ನನ್ನ ಕೈಯಲ್ಲಿ ಕೊಟ್ಟರು. ಅದರ ಮೇಲಿನ ಅಕ್ಷರಗಳನ್ನೋದಿದೊಡನೆಯೇ ನನ್ನ ಸಿಟ್ಟು ನೆತ್ತಿಗೇರಿತು. ತಿಕೀಟನ್ನು ಚೂರುಚೂರು ಮಾಡಿ ಹರಿದೊಗೆದು ಟಾಂಗಾ ಮಾಡಿಕೊಂಡು ನೆಟ್ಟಗೆ ಮನೆಗೆ ಹೊರಟೆನು. ಆಗ ತಮ್ಮಂಥ ಮತ್ತೊಬ್ಬ ಸಭ್ಯರ ಕೈಮೇಲೆ ಚಪ್ಪಾಳೆ ಹೊಡೆದು ನಗಹತ್ತಿದ್ದದ್ದನ್ನು ಕಂಡೆ. ನನ್ನಾಕುಲದ ನೆನವು ಕೊಡಲು ಅಗತ್ಯವಾಗಿ ಅವರು ಆ ಪ್ರಸಂಗವನ್ನೂ ಆ ಮಾರ್ಗವನ್ನೂ ಹುಡುಕಿದ್ದರು. ಮೂಕರೆದುರಿಗೆ ಮೂಗು ತುರಿಸುವ ಜನವೇ ಹೆಚ್ಚು. ನೀವು ಅದರಲ್ಲೊಬ್ಬರೆನ್ನುವದಿಲ್ಲ. ಅಂತೂ ಹೀಗಿದೆ. ಅದನ್ನು ಕೇಳಿದಾಗ ಆ ಮಿತ್ರನು ಇಷ್ಟು ಆತ್ಮವಿಶ್ವಾಸದಿಂದ ಏಕೆ ಪಂಥ ಹೂಡಿದನೆಂಬುದು ಹೊಳೆಯಿತು. ಅವನ ವೃತ್ತಿಗಾಗಿ ತಿರಸ್ಕಾರವುಂಟಾಯಿತು. ನಾನೆಂದೆನು 'ಮಾಲೂ, ಜಗತ್ತೆಲ್ಲ ಅನ್ಯಾಯದ್ದು; ಇರಲಿ. ನಾವು ಅದನ್ನು ಲೆಕ್ಕಿಸದೆ ಕೈಯಲ್ಲಿ ಕೈಯಿಕ್ಕಿ ಮಾರ್ಗಕ್ರಮಣವನ್ನು ಧೈರ್ಯದಿಂದ ಮಾಡೋಣ.'

ಕಾವ್ಯ:—ಮರುದಿನ ಮುಂಜಾನೆ ಗಣೇಶಖಿಂಡಿರಸ್ತೆಗೆ ತಿರುಗಾಡಲಿಕ್ಕೆಂದು ನಾವಿಬ್ಬರೂ ಹೋಗಿದ್ದೆವು. ಸುಮಾರು ಒಂದು ಮೈಲು ಹೋದ ಮೇಲೆ ಎಡಬದಿಗೊಂದು ಸಣ್ಣ ದಿನ್ನೆ ಹತ್ತುವದು. ಅದರ ಮೇಲೆ ಹತ್ತತೊಡಗಿದೆವು. ಏರುವ ಶ್ರಮದಿಂದ ದಿನ್ನೆಯ ನೆತ್ತಿಗೆ ಬರುವಷ್ಟರಲ್ಲಿ ಕಿಂಚಿತ್ ಬೆವರು ಬಂದಿತು. ಮಂದವಾಗಿ ಚಲಿಸುವ ಮಾರುತನ ಶೀತಲ ಹಾಗೂ

ಸುಖಪ್ರದವಾದ ಸ್ಪರ್ಶದಿಂದ ನಮ್ಮ ಶ್ರಮ ಪರಿಹಾರವಾಯಿತು. ಕ್ಷಣ ಹೊತ್ತು ಆ ಸುಖದ ಆಸ್ವಾದದನ್ನು ತೆಗೆದುಕೊಳ್ಳುತ್ತ ಅಲ್ಲಿಯೇ ನಿಂತೆವು. ಮುಂದೆ ಮತ್ತೆ ಹಾಗೆಯೇ ಸಾಗಿದೆವು. ನಗರವನ್ನು ಬಿಟ್ಟು ದೂರ ಏಕಾಂತಸ್ಥಳಕ್ಕೆ ಬಂದದ್ದರಿಂದ ನಿಸರ್ಗಸಾಮೀಪ್ಯದ ಅತುಲ ಆನಂದವನ್ನು ಅನುಭವಿಸುವ ದರಲ್ಲಿ ಮಗ್ನರಾಗಿದ್ದೆವು. ಒಮ್ಮಿಂದೊಮ್ಮೆ ದಿನ್ನೆಯು ಕಡಿದಾಗಿ ಮುಗಿದು ಕೆಳಗೆ ಗಿಡಗಳ ಗುಂಪಿನಲ್ಲಿ ಅಡಗಿಕೊಂಡಿರುವ ಗುಡಿಸಲುಗಳ ಸಾಲು ನಮ್ಮ ದೃಷ್ಟಿಗೆ ಬಿತ್ತು. ಕ್ಷಣಹೊತ್ತು ಚಕಿತರಾದೆವು. ಅಲ್ಲಿ ಜನವಸತಿಯಿದ್ದೀತೆಂಬ ಅಪೇಕ್ಷೆಯಿರಲಿಲ್ಲ. ಕುಳಿತುಕೊಂಡು ಎದುರಿನ ರಮಣೀಯ ದೃಶ್ಯವನ್ನು ಅತೃಪ್ತಿ ನೋಡಹತ್ತಿದೆವು. ಇಂಥದೇ ಒಂದು ರಮ್ಯಸ್ಥಳದಲ್ಲಿ ವಾಸಮಾಡ ಬೇಕು. ಅನೇಕ ತಲೆಮಾರುಗಳಿಂದಲೂ ದೊರಕದೆ ಇದ್ದ ಸುಖಸೌಕರ್ಯ ಗಳನ್ನು ಹಳ್ಳಿಗರಿಗೆ ದೊರಕಿಸಿಕೊಡಬೇಕು. ಅವರ ಜೀವನದಲ್ಲಿ ತನ್ಮಯ ರಾಗಿ ಜೀವಿತ ಸಾಫಲ್ಯ ದೊರಕಿಸಬೇಕು; ಇವೇ ಮೊದಲಾದ ರಮ್ಯಚಿತ್ರ ಗಳನ್ನು ನಾವು ನಮ್ಮ ಕಲ್ಪನಾಭಿತ್ತಿಯ ಮೇಲೆ ಚಿತ್ರಿಸತೊಡಗಿದೆವು. ತಾರು ಣ್ಯದ ದುರ್ದಮ್ಯ ಉತ್ಸಾಹದ ಭರದಲ್ಲಿ ಒಬ್ಬ ಪ್ರಸಿದ್ಧ ಆಂಗ್ಲಕವಿಯ ಉಕ್ತಿಯಂತೆ ಈ ಜಗತ್ತನ್ನು ಚೂರುಚೂರಾಗಿ ಮಾಡಿ ಹೊಸ ಎರಕದಲ್ಲಿ ಹೊಯ್ದು ನಮ್ಮ ಮನಸಿನಂತೆ ಪುನರ್ನಿರ್ಮಾಣ ಮಾಡಲು ಬಯಸಿದೆವು. ವ್ಯವಹಾರಮಯ ಜಗತ್ತು ನಮ್ಮ ಈ ಚಿತ್ರಗಳನ್ನು ಚೂರುಚೂರಾಗಿ ಒಡೆದು ಸೇಡು ತೀರಿಸಿಕೊಳ್ಳುವದು. ಸಂಸಾರ ಕಂಸನ ಕೈಯಲ್ಲಿ ಸಿಕ್ಕ ದೇವಕಿಯ ಕಲ್ಪನಾಪತ್ಯಗಳು ನುಚ್ಚುನುರಿಯಾಗಿ ಹೋಗುವವೆಂಬ ಕಲ್ಪನೆ ನನಗಿರಲಿಲ್ಲ.

೩.

ವ್ಯವಹಾರ:—ಪರೀಕ್ಷೆ ತೀರಿಸಿಕೊಂಡು ಮನೆಗೆ ಬಂದೆನು. ಮದುವೆಯ ಹಂಗಾಮು. ಉಪವರ ಕನ್ಯೆಯರ ಪಾಲಕರು ಮನೆಗೆ ಎಡತಾಕಹತ್ತಿದರು. ಮೊದಮೊದಲು ತಂದೆಯವರ ಮನಸ್ಸೇಕೆ ನೋಯಿಸಬೇಕೆಂದು ನಾಲ್ಕೆಂಟು ಹೆಣ್ಣು ನೋಡುವದಾಯಿತು. ಇತ್ತ ವಚನಬದ್ಧನಾಗಿ ಹೋದ ನಾನು ವಲ್ಲೆನ್ನುವದು ಕಟ್ಟಿಟ್ಟಮಾತಾಯಿತು. ನಮ್ಮ ತಂದೆಯವರೂ ಕೆಲ ಕಾಲ ದಾರಿಕಾಯ್ದು ಕೊನೆಗೊಮ್ಮೆ ಕೇಳಿದರು. ‘ ಅಲ್ಲೋ ವಸಂತಾ, ಎಂಥ

ರೂಪವುಳ್ಳ ಹೆಣ್ಣು, ಮನೆತನಸ್ಥರ ಸಂಬಂಧ ಮನೆಮುಟ್ಟಿ ಕೇಳಬಂದರೂ ಇಲ್ಲೆನ್ನುವಿ, ನಿನ್ನ ಮನಸ್ಸಿನಲ್ಲಿರುವದಾದರೂ ಏನು? ನೀನೆ ಒಂದು ಮನಸಿನಲ್ಲಿ ಗೊತ್ತುಮಾಡಿಕೊಂಡಿರುವಿಯೋ ಹೇಗೆ? ಹಾಗಿದ್ದರೆ ಹೇಳು. ಸಾಧ್ಯವಿದ್ದರೆ ಅದನ್ನೇ ಮನೆಗೆ ತರೋಣ.'

ಇದೇ ಸಂಧಿಯೆಂದು ತಿಳಿದು ನನ್ನ ವಿಚಾರವನ್ನು ಅವರಿಗೆ ತಿಳಿಸಿದೆನು. ಅದನ್ನು ಕೇಳಿ ಅವರು ಕಿಡಿಕಿಡಿಯಾದರು. ಅವಾಚ್ಯಶಬ್ದಗಳನ್ನೂ ಉಚ್ಚರಿಸಿದರು. ನನಗೆ ವೇದನೆಯಾಯಿತು. ಹಾಗೆನ್ನಬೇಡಿರೆಂದು ನನ್ನ ನಿಷೇಧವನ್ನು ವ್ಯಕ್ತಪಡಿಸಿದೆನು. 'ಕುಲಟೆಗೆ ಕುಲಟೆಯೆನ್ನದೆ ಕುಲವಧುವೆನ್ನುವರೇ? ಹಾಗಾದರೆ? Call a spade a spade. ಮುಂಡೆಗೆ ಮುಂಡೆಯೆಂದರೆ ಕೆಂಡದಂಥ ಸಿಟ್ಟಂತೆ. ಅದೇಕೆ?' ಎಂದರು.

'ಅಪ್ಪಾ, ಈ ಕುಲೀನತೆಯ ಕಲ್ಪನೆಗೆ ಆಧಾರವಾದರೂ ಏನು? ಅದನ್ನು ನಿರ್ಧರಿಸುವದಾದರೂ ಏತರಿಂದ?'

'ಹಾಂ, ಸಾಕು ಮಾಡು ನಿನ್ನ ಪಾಂಡಿತ್ಯ. ನಿಮ್ಮಂಥವರ ವಿವೇಚನವೂ ಋಷಿಗಳ ಕುಲದ ಉದಾಹರಣೆಗಳೂ ಎಲ್ಲಾ ನನಗೆ ಗೊತ್ತದೆ. ಸ್ತ್ರೀರತ್ನಂ ದುಷ್ಕುಲಾದಪಿ' ಎಂಬುದು ಕಾಮುಕರ ಸುಭಾಷಿತ, ಕುಲೀನರದಲ್ಲ! 'ಸರಿ, ಹಾಗಾದರೆ ವ್ಯಕ್ತಿಸ್ವಾತಂತ್ರ್ಯ. ಮತ ಸ್ವಾತಂತ್ರ್ಯವೆಂದೇನಾದರೂ ಇದೆಯೆಲ್ಲವೇ?' ಎಂದು ನಾನು ರೇಗಿ ಕೇಳಿದೆನು.

"ಹೌದಪ್ಪಾ, ಹೌದು. ನಿನಗಿದ್ದಂತೆ ನನಗಾದರೂ ಅದು ಬೇಕಲ್ಲವೆ? ಈ ನಿನ್ನ ವಿಚಾರವೆಂದರೆ ನಿನ್ನ ಪಿತೃಗಳಿಗೆ ದ್ರೋಹ, ಸಮಾಜದಲ್ಲಿ ಅಕ್ಷಮ್ಯ ಅಪರಾಧ. ನಿನ್ನನ್ನು ಒತ್ತಿ ಹಣ್ಣು ಮಾಡಲು ನಾನು ಬಯಸುವದಿಲ್ಲ ವಿಚಾರಮಾಡು. ಕೊನೆಗೆ ನನ್ನ ನಿನ್ನ ಮತಭಿನ್ನತೆಯೇ ಆದರೆ ನನ್ನ ಕುಲದ ಮಾನ ಕಾಯಲು ನಾನು ಮಾಡಬೇಕಾದ್ದನ್ನು ಮಾಡುವೆನು. 'ಅಪ್ಪಾ, ಇದರಲ್ಲಿ ಪಾಪವೆಲ್ಲಿಂದ ಬಂತು? ನನಗೆ ಹೇಳಿರಿ. ಪಾಪವೆಂದು ನೀವು ತಿಳಿಯುವದರ ಫಲವಾದರೂ ಅವಳು ಸ್ವತಃ ನಿಷ್ಪಾಪ, ನಿಷ್ಕಲಂಕಳಿದ್ದಾಳೆ.'

"ಇದು ನೋಡು. ಕೆಸರು ನೆಲಕ್ಕೆ ಬಿತ್ತೆಂದರೆ ಒಣಮಣ್ಣನ್ನೂ ತುಸುವಾದರೂ ಗೆಬ್ಬಿಕೊಂಡೇ ಮೇಲೆ ಬರುತ್ತದೆ. ಹಾಗೆ ಅದೆ ಇದು ನಿರ್ಮಲರು ಕೆಸರಾಟವನ್ನಾಡುವದಿಲ್ಲ ತಿಳಿಯಿತೇ? ವಿಚಾರ ಮಾಡು. ಈಗ ಬಂದ

ಹೆಣ್ಣು ನನ್ನ ಕೇವಲ ಋಣಾನುಬಂಧದ್ದು, ರೂಪಸಿ, ಕಲಿತವಳು, ನಾಳೆ ಸಂಜೆಯ ಈ ಹೊತ್ತಿಗೆ ಏನೆಂಬುದನ್ನು ತಿಳಿಸು. ಅವರಿಗೆ ನಾನು ನಿಶ್ಚಿತ ಉತ್ತರ ಬರೆಯಬೇಕಾಗಿದೆ ಅಪ್ಪಾ. ನಿನ್ನ ಸುಖದ ಕಡೆಗೇ ನಮ್ಮದೂ ದೃಷ್ಟಿಯಿದೆ! ಇಷ್ಟೆಂದು ಹೊರಟು ಹೋದರು.

ಅವರ ಕುಲೀನತ್ವದ ಅಥವಾ ಪಾಪದ ಕಲ್ಪನೆಯು ಎಷ್ಟು ಅಶಾಸ್ತ್ರೀಯವಾದದ್ದೆಂಬುದನ್ನು ನನ್ನ ವೈದ್ಯಕೀಯ ಶಾಸ್ತ್ರದ ಆಧಾರದಿಂದ ಅವರಿಗೆ ಮನದಟ್ಟಾಗಿ ಮಾಡಬೇಕೆಂದಿದ್ದೆ; ಆದರೆ ಎದುರಿಗೆ ಕುಳಿತು ಕೇಳಿಕೊಂಡರಲ್ಲವೇ ಆ ಮಾತು ಎರಡು ದಿನ ದೋಲಾಯಮಾನವುತಿಯಾಗಿ ಕೊನೆಗೊಮ್ಮೆ ತಂದೆಯವರ ಮಾತಿಗೆ ನಾನೊಪ್ಪಿಗೆಯಿತ್ತೆನು. ಅವರೇ ಗೆದ್ದರು.

ಬಲೀಯಸೀ ರೂಢಿ—ಆ ಮಾತಿಗೆ ಈಗ ಇಪ್ಪತ್ತು ವರ್ಷಗಳ ಮೇಲಾಗಿದೆ. ಆ ಹೆಂಡತಿ ಬೇಗನೇ ತೀರಿಕೊಂಡುದರಿಂದ ವ್ಯವಹಾರಕ್ಕನುಸರಿಸಿ ಮತ್ತೊಂದು ಮದುವೆಯನ್ನೂ ಮಾಡಿಕೊಂಡೆ. ಮೂರು ಮಕ್ಕಳು, ತಕ್ಕಷ್ಟು ದುಡ್ಡು, ಸಮಾಜದಲ್ಲಿ ಮಾನ ಎಲ್ಲವೂ ಇವೆ. ಇವೆಲ್ಲವನ್ನೂ ದೊರಕಿಸಲಿಕ್ಕೆ ಸಮಾಜದ ಸಹಾಯವೂ ಸಾಕಷ್ಟಾಗಿದೆ. ಆದರೆ ಈ ಹೆದ್ದಾರಿಯ ಗಾಲಿಗೊರಕಲದಲ್ಲಿ ಸಿಕ್ಕುಬಿದ್ದ ನನ್ನ ಮನದ ಸಂವೇದನಾಶಕ್ತಿಯು ಕ್ಷೀಣವಾಯಿತು. ಧ್ಯೇಯ, ವಚನಗಳ ಸ್ಮೃತಿ ಹಾರಿ ಹೋಯಿತು. ನಾಲ್ಕು ಮಂದಿಯಂತೆ ನಾನೂ ಒಬ್ಬನಾದೆ. ಮೊದಮೊದಲು ಪತ್ನಿಯ ಸಾನ್ನಿಧ್ಯದಲ್ಲಿಯೂ ಮಾಲತಿಯ ಮೂರ್ತಿಯು ಮನಶ್ಚಕ್ಷುವಿನ ಮುಂದೆ ನಿಲ್ಲುತ್ತಿತ್ತು. ಬರಬರುತ್ತ ಅದೂ ಮಸಕಾಗಿ ಅಳಿಸಿ ಹೋಯಿತು. ಮೊನ್ನೆ ಮೊನ್ನೆ ನನ್ನ ಹಿರಿಯ ಮಗಳಿಗಾಗಿ ವರಸಂಶೋಧನಕ್ಕಾಗಿ, ಮನೆಯವರ ಕಾಟದಿಂದಲೇ ಎನ್ನಿರಿ, ಹೊರಡಬೇಕಾಯಿತು. ಆ ನಿಮಿತ್ತ × × × ಪುರಕ್ಕೆ ಹೋದಾಗ ಅಲ್ಲಿಯ ಪ್ರಸೂತಿಗೃಹಕ್ಕೆ ಬೆಟ್ಟಿಕೊಡುವ ಇಚ್ಛೆಯಾಯಿತು. ಅಲ್ಲಿಯ ಉತ್ಕೃಷ್ಟ ವ್ಯವಸ್ಥೆಯ ಬಗ್ಗೆ ಬಹು ಜನರ ಬಾಯಿಂದ ಕೇಳಿದ್ದೆನು. ಅಲ್ಲಿಯ ವಾರ್ಡ ಒಮ್ಮೆ ನೋಡಿ ಬಂದನಂತರ ಅದರಲ್ಲಿ ಅತಿಶಯೋಕ್ತಿಯ ಅಂಶವೂ ಎಳ್ಳಷ್ಟೂ ಇರಲಿಲ್ಲವೆಂದು ಮನಗಂಡೆನು. ನಿಜವಾಗಿಯೂ ಅದು ಚಾಲಕರ ಜನಸೇವೆಯ ಧ್ಯೇಯ ಹಾಗೂ ಅದರ ಸಾಧನಕ್ಕಾಗಿ ಅವರು ಪಡುತ್ತಿದ್ದ ಅವಿಶ್ರಾಂತ ಶ್ರಮ ಇವುಗಳ ಉತ್ತಮ ಸಾಕ್ಷ್ಯವಾಗಿದ್ದಿತು.

ನನ್ನ ಸಂಗಡ ಬಂದ ಮಿತ್ರನು ಅಲ್ಲಿಯ ಮುಖ್ಯ ಡಾಕ್ಟರಿಣಿಯು, ಆ ಸಂಸ್ಥೆಯ ಉತ್ಕರ್ಷಕ್ಕಾಗಿ ಹಗಲಿರುಳು ದುಡಿಯುತ್ತಿರುವ ವ್ಯಕ್ತಿ, ಜಾಗ್ರತೀ ಜನನಿಯೆಂದು ಗುರುತುಮಾಡಿಕೊಟ್ಟನು. ಆದರೆ ಅದು ಒಂದು ದೃಷ್ಟಿಯಿಂದ ಅನಾವಶ್ಯಕವಾಗಿತ್ತು. ನಾವೆಲ್ಲರೂ ಕೂಡಿ ಅಲ್ಲಿಯೇ ಚಹ ತಕ್ಕೊಂಡೆವು. ನಂತರ ನನ್ನ ಮಿತ್ರನು ತನ್ನದಾವುದೊ ಕೆಲಸಕ್ಕೆಂದು ಹೊರಟುನಿಂತನು. ಆಗ ಮಾಲತಿಯು (ಅವಳೇ ಆ ಡಾಕ್ಟರಿಣಿಯೆಂದು ಬೇರೆ ಹೇಳಬೇಕಾಗಿಲ್ಲ.) " ವಸಂತರಾಯರು ಇಂದು ಇಲ್ಲಿಯೇ ಊಟ ಮಾಡುವರು. ಅವರಿಗಾಗಿ ದಾರಿಕಾಯಬೇಡಿರಿ " ಎಂದು ಹೇಳಿಕಳಿಸಿದಳು.

ಊಟದ ಹೊತ್ತಿನವರೆಗೆ ಅದು ಇದು ಎಂದು ಉದ್ಯೋಗ, ರಾಜಕಾರಣ ಮೊದಲಾದವುಗಳ ಹೊರಗಿನ ಹರಟೆಯೇ ಸಾಗಿತ್ತು. ಊಟವಾದ ಮೇಲೆ ಹಾಲಿನಲ್ಲಿ ಆರಾಮಕುರ್ಚಿಯ ಮೇಲೆ ಸಿಗರೇಟು ಸೇದುತ್ತ ಬಿದ್ದುಕೊಂಡಿದ್ದೆನು. ಹೊಗೆಯ ಸುತ್ತುಗಳೊಡನೆಯೇ ಹೊರಟಿದ್ದ ವಿಚಾರಗಳ ಮಾಲಿಕೆಯು ನನ್ನ ಅಪಯಶವನ್ನು ಮನದಟ್ಟಾಗಿ ಮಾಡಿಕೊಟ್ಟಿತು. ಜಗತ್ತಿನಲ್ಲಿಯ ಧ್ಯೇಯನಿಷ್ಠೆಯ ಪರೀಕ್ಷೆಯಲ್ಲಿ ಮಾಲತಿಯು ಎಷ್ಟು ಉತ್ತಮ ರೀತಿಯಿಂದ ಉತ್ತೀರ್ಣಳಾಗಿದ್ದಳು! ಹಾಗೂ ನನ್ನ ಧ್ಯೇಯಚ್ಯುತಿಯ ಬಗ್ಗೆ ನನಗೇ ತಿರಸ್ಕಾರವುಂಟಾಯಿತು. ಗತಾಯುಷ್ಯದ ಪರೀಕ್ಷಣದಿಂದ ಆದರ ಕಾರಣ ಪರಂಪರೆಯನ್ನು ಹುಡುಕತೊಡಗಿದೆನು. ಆಯುಷ್ಯದ ಒಂದು ವಿವಕ್ಷಿತ ಮೆಟ್ಟಲಿನ ಮೇಲಿದ್ದಾಗ ಉಚ್ಚತಮ ಆಕಾಂಕ್ಷೆಗಳು ತೋರಿಸಿದ ದಿಕ್ಕಿನಲ್ಲಿ ಉಡ್ಡಾಣಮಾಡುವ ಮನೋಧೈರ್ಯವನ್ನು ತೋರಿಸದೆ ಇದ್ದುದೆ ನನ್ನ ಅವನತಿಯ ಕಾರಣವೆಂದು ತಿಳಿಯಿತು.

ವಿಚಾರತಂದ್ರೆಯಲ್ಲಿದ್ದವನು ಮಾಲತಿಯ ಪ್ರಶ್ನೆಯಿಂದ ಎಚ್ಚತ್ತೆನು.

' ಯಾಕೆ, ಬಹಳೇ ವಿಚಾರದಲ್ಲಿ ಮಗ್ನರಾಗಿದ್ದೀರಿ ' ಎಂದು ಕೇಳಿದಳು. ಒಂದೆರಡು ಕ್ಷಣ ಅರ್ಥಶೂನ್ಯ ದೃಷ್ಟಿಯಿಂದ ನೋಡತೊಡಗಿದೆನು.

' ಯಾಕೆ, ಮತ್ತೆನಾದರೂ ವಿಶೇಷ ಸುದ್ದಿ ಬಂದಿದೆಯೋ ಏನು ? ' ಎಂದು ಚಿಂತೆಯ ಸ್ವರದಲ್ಲಿ ಕೇಳಿದಳು. ಇಲ್ಲವೆಂದು ನಾನು ತಲೆಯಲ್ಲಾಡಿಸಿದೆನು.

' ಮನೆಯವರೆಲ್ಲರೂ ಕ್ಷೇಮವಷ್ಟೇ ? '

‘ ಆಹುದು ’ ಎಂದಿಷ್ಟೇ ನನ್ನ ಉತ್ತರ.

‘ ಮತ್ತೇನು, ಇದೇ ವರದೊಡನೆ ಕೂಡಿಬರುವ ಲಕ್ಷಣವಿದೆಯೋ ? ’

‘ ಬಹುಶಃ ಆದೀತು ’

‘ ಇನ್ನೂ ಎಷ್ಟು ದಿವಸವಿದೆ ನಿಮ್ಮ ವಸತಿ ? ’

‘ ನಾಳೆಯೇ ಹೊರಡುವವನಿದ್ದೆ. ಆದರೆ…… ’

‘ ಅಂಥದೇನು ಅವಸರ ! ’

‘ ಇನ್ನೊಂದು ಚಿಂತೆ ನಮ್ಮ ಬೆನ್ನಿಗೆ ಇದೆಯಲ್ಲ—ನಾಳಿಲ್ಲ ನಾಡದು ಮಾಧವನ ರಿಜಲ್ಟು. ಹುಡುಗನ careerದ ಬಗ್ಗೆ ವಿಚಾರವಾಡಬೇಕಲ್ಲವೇ? ಮದುವೆಯದೇನು! ಒಂದು ವರ್ಷ ಮುಂದೆ ಬಿದ್ದರೂ ನಡೆಯುತ್ತದೆ!’

‘ ಮುಂದೇನು ಮೆಡಿಕಲ್ ಲೈನಿಗೇ ಹಾಕವವರಲ್ಲವೇ? ಒಬ್ಬನಾದರೂ ಇರಲಿ ಪರಂಪರೆ ನಡೆಸಲಿಕ್ಕ. ’

‘ ಹಂ ’

‘ ಉಳಿದ ಮಕ್ಕಳು ಏನು ಕಲಿಯುತ್ತವೆ ? ’

‘ ಒಂದು ಹುಡಿಗೆಯು ಆರನೆಯತ್ತೆಯಲ್ಲಿ, ಮತ್ತೊಬ್ಬ ಮಗನು ಮೂರನೆಯ ಇಯತ್ತೆಯಲ್ಲಿದ್ದಾರೆ. ’

‘ ಹಾಗಾದರೇನು ! ಅವಳ ದೆಶೆಯಿಂದ ಮುಂದಿನ ವರ್ಷ ಹೀಗೆಯೋ ವರಸಂಶೋಧನಕ್ಕೆ ಹೊರಡುವವರೋ ? ಏನು ಮುಂದೆ ಕಲಿಸುವ ವಿಚಾರ ಮಾಡಿರುವಿರೋ ? ’

‘ ಕೊಯ್ದ ಮೂಗಿನ ಮುಂದೆ ಕನ್ನಡಿ ಹಿಡಿದು ತೋರಿಸುವ ಇಷ್ಟು ಹಟವೇಕೆ ? ಒಮ್ಮೆಯೇಕೆ ಸಾವಿರ ಸಾರೆ ‘ ತಪ್ಪಿತೆಂ’ದು ಒಪ್ಪಿಕೊಳ್ಳುತ್ತೇನೆ. ಆಗ ನನ್ನ ಮನಸಿಗೆ ಎಷ್ಟು ತ್ರಾಸವಾಯಿತೆಂಬದನ್ನು ಅದೇ ಕಾಲಕ್ಕೆ ಪತ್ರದ್ವಾರದಿಂದ ತಿಳಿಸಿದ್ದೇನೆ. ಇದರ ಮೇಲೆ ನೀನು ತೋರಿಸಿದ ಕ್ರೌರ್ಯವೇನು ಕ್ಷಮ್ಯವಾದದ್ದೋ ? ಈ ಇಪ್ಪತ್ತು-ಇಪ್ಪತ್ತೆರಡು ವರ್ಷಗಳಲ್ಲಿ ನಾನು ಜಗತ್ತಿನಲ್ಲಿ ಇದ್ದೇನೆಯೋ ಇಲ್ಲವೋ ಎಂಬಂತೆ ನೀನು ನಡೆದುಕೊಂಡಿ ! ’

ಈ ನನ್ನ ಜ್ವಾಲಾಮುಖಿಯ ಸ್ಫೋಟದಿಂದ ಅವಳು ಗಾಬರಿಗೊಂಡಳು. ಅವಳ ಕಣ್ಣಲ್ಲಿ ಎರಡು ಹನಿಗಳು ತೋರಿದವು. ನಡುಗುವ ದನಿ

ಯಿಂದ ಆವಳಂದಳು. ' ವಸಂತರಾವ, ಹೀಗೇಕೆ ರೇಗಿಕೊಳ್ಳುವಿರಿ. ವ್ಯರ್ಥ ವಾಗಿ ತಪ್ಪು ತಿಳುವಳಿಕೆ ಮಾಡಿಕೊಂಡಿರುವಿರಿ. ನಿಜವಾಗಿಯೂ ನಿಮ್ಮ ಪತ್ರವನ್ನು ಒಡೆದು ಓದಿನೋಡುವ ಧೈರ್ಯವೇ ನನಗಾಗಲಿಲ್ಲ. ನನ್ನ ಅಂತಃಕರಣದಲ್ಲಿ ಮನೆಮಾಡಿಕೊಂಡಿದ್ದ ಆ ಉದಾತ್ತ ಮೂರ್ತಿಯನ್ನು ನಾನು ಹೇಗೆ ಕಣ್ಣಮುಂದೆಯೇ ಬಿಸಿಲಿನಲ್ಲಿಯ ಬೆಣ್ಣೆಯಂತೆ ಕರಗಗೊಡಲಿ? ನನ್ನ ಮನೆಯ ಒಲೆಗೂ ಮಣ್ಣಿನಗುಂಡೇ ಎಂದು ಕಂಡುಕೊಳ್ಳಲು ನನ್ನ ಮನಸ್ಸೊಪ್ಪದಾಯಿತು. ಆದ್ದರಿಂದಲೇ ಇಷ್ಟು ವರ್ಷ ಪತ್ರವ್ಯವಹಾರ ಮಾಡ ಲಿಲ್ಲ. ನನ್ನ ಜೀವನಾಕಾಶದಲ್ಲಿ ಏನಾದರೂ ಹೊನ್ನದಂಚಿನ ಮೋಡಗಳು ಮಿರುಗುತ್ತಿದ್ದರೆ ಆವು ನಿಮ್ಮ ಸ್ಮೃತಿಚಿತ್ರಗಳು.'

ಆವಳ ಸಹಜ ಪ್ರಶ್ನೆಗಳಿಗೆ ನಾನು ಮಾಡಿಕೊಂಡ ಅಪಾರ್ಥದಿಂದ ಉಂಟಾದ ಪ್ರಕ್ಷುಬ್ಧವಾತಾವರಣ ಅವಳ ಈ ಆವಿಷ್ಕರಣದಿಂದ ಶಾಂತ ವಾಯಿತು. ಪುನಃ ನಾವು ಮನಬಿಚ್ಚಿ ಮಾತಾಡತೊಡಗಿದೆವು. ನಾನು ನನ್ನ ' ಹತ್ತರಗೂಡ ಹನ್ನೊಂದು, ಪರಶಿಯ ಕೂಡ ಗೋವಿಂದ' ತರಗತಿಯ ಆಯುಷ್ಯದಲ್ಲಿಯ ಪ್ರಸಂಗಗಳ ವಿಷಯ ಮಾತಾಡಿದೆನು. ಅವಳು ತನ್ನ ಧ್ಯೇಯವನ್ನು ಮೂರ್ತಸ್ವರೂಪಕ್ಕೆ ತರುವದರಲ್ಲಿ ಬಂದ ಅಡಚಣಿಗಳನ್ನು ಹೇಳಿದಳು.

' ನೋಡಿರಿ ವಸಂತರಾಯರೇ, ವಿಚಾರ ಮಾಡಿದರೆ ಯಾವದಾದ ರೊಂದು ಕಾರ್ಯದಲ್ಲಿ Start ಸಿಗುವದೇ ಕಠಿಣವೆನಿಸುತ್ತದೆ. ನನ್ನ ವಿಷಯ ದಲ್ಲಿಯಂತೂ ದೈವವೇ ನನ್ನ ಸಹಾಯಕ್ಕೆ ಬಂತು. ಐದು ಸಾವಿರದ ದಾನವು ಪ್ರಾರಂಭಕ್ಕೇ ದೊರೆಯಿತು. ಮತ್ತು ಅದೂ ಅಜ್ಞಾತವಿರಬೇಕೆಂದು ಇಚ್ಛಿ ಸುವ ವ್ಯಕ್ತಿಯಿಂದ. ಮುಂದೇನು ತಾಯಿಯ ಪಶ್ಚಾತ್ ಇಸ್ಟೇಟು ದೊರೆ ಯಿತು, ಎಲ್ಲಾ ಆಯಿತು.' ದಾತೃತ್ವದ ಅಂಗಡಿ ಹಚ್ಚಿದ ಈ ಪ್ರಸಿದ್ಧಿ ಯುಗದಲ್ಲಿ, ಇನ್ನೂ ಕೇವಲ ಗರ್ಭಾವಸ್ಥೆಯಲ್ಲಿರುವ ಸಂಸ್ಥೆಗೆ ಐದು ಸಾವಿರ ದಾನಮಾಡಿ ಅಜ್ಞಾತವಿರಲಿಚ್ಛಿಸುವ ವ್ಯಕ್ತಿ ವಿಷಯವಾಗಿ ಆಶ್ಚರ್ಯವೂ ಕುತೂಹಲವೂ ಉಂಟಾದವು.

' ಜಗತ್ತಿಗೆ ಅಜ್ಞಾತವಿರದಿದ್ದರೂ ನಿನಗೆ ಅಜ್ಞಾತವಿಲ್ಲವಷ್ಟೆ? ಮತ್ತು ನನಗೆ ಆವರ ಹೆಸರು ತಿಳಿಯುವದರಿಂದ ಆವರ ' ಅಜ್ಞಾತತೆಗೆ ವಿಶೇಷ

ಬಾಧೆಯುಂಟಾದೀತೆಂಬ ಅಂಜಿಕೆಯೂ ಬೇಡ. ಯಾರು ಅದು ಹೀಗೆ ನಿನಗೆ ಸಹಾಯ ಮಾಡಿದವರು? ಈ ಪ್ರಶ್ನೆಯ ಉತ್ತರವೆಂದು ನಮ್ಮ ಶ್ವಶುರರ ಹೆಸರು ಬಂದದ್ದು ಕೇಳಿ ನನಗೆ ಅವರ ವಿಷಯವಾಗಿ ವಿಶೇಷ ಆದರವುಂಟಾಯಿತು. ಅವಳು ಹಾಗೆಯೇ ಹೇಳತೊಡಗಿದಳು.

'ಆ ದಾನದ ವಿಷಯವಾಗಿ ಇನ್ನೊಂದು ವಿಶೇಷ ಸಂಗತಿಯೆಂದರೆ ಅದು ನನಗೆ ಪ್ರತ್ಯಕ್ಷ ಯಾಚನೆ ಮಾಡದೆ ದೊರೆತದ್ದು. ನನ್ನ ಕಾರ್ಯದ ರೂಪರೇಷೆ ಹಾಗೂ ಅದಕ್ಕೆ ಅವಶ್ಯವಿದ್ದ ಸಾಮುಗ್ರಿ ಇದರ ವಿಷಯವಾಗಿ ಮಾತಾಡುವ ಒಂದು ಸಂಧಿಯನ್ನು ನಾನು ವ್ಯರ್ಥ ಹೋಗಗೊಡುತ್ತಿದ್ದಿಲ್ಲ. ಸಹಜವಾಗಿಯೇ ಅವರ ಪರಿಣಾಮವು ಅದರ ಮೇಲಾಯಿತು. ಇನ್ನು ಜನರ ಗುರುತಾಗಲಿಕ್ಕೂ ಯೋಗಾಯೋಗಬೇಕು. ಹಾಗೆಯೇ ಇಂಥ ಉದಾರ ಕೃತಿಗಳಿಗೂ ಒಂದು ನಿಮಿತ್ತಬೇಕು. ಈ ಬಾಬತಿನಲ್ಲಿಯೂ ಹಾಗೆಯೇ ಆಯಿತು. ನಾನು ಆದೇ ದವಾಖಾನೆ ಸುರುವು ಮಾಡಿದ್ದೆನು. × × × × ಸಂಸ್ಥಾನದ ದಿವಾಣರಿಗೆ ನನ್ನ ಸಹಾಯದ ಅವಶ್ಯಕತೆಯೆನಿಸಿತು. ನಿಮ್ಮ ಮುಂದೆ ಹೇಳಲು ಏನೂ ಅಡ್ಡಿಯಿಲ್ಲವೆನ್ನಿರಿ. ನಮ್ಮ ಉದ್ಯೋಗದಲ್ಲಿ ಇಂಥ ಪ್ರಸಂಗಗಳು ಬರುವವೇ! ಅವರ ಮದುವೆಯಾಗದ ಮಗಳು ಗರ್ಭಿಣಿ. ತಿಳಿಯಿತಲ್ಲ. ಎಲ್ಲಿಯೋ ಅಬಚಿಯ ಮನೆಗೆ ಹೋದ ಸುದ್ದಿ ಹಬ್ಬಿಸಿ ಇಲ್ಲಿ ಕಳಿಸಿದ್ದಾಯಿತು. ಎರಡು ತಿಂಗಳನಂತರ ಮತ್ತೆ ಮೊದಲಿನಂತೆ ಮಾಡಿ ತಿರುಗಿ ಕಳಿಸಿದೆ.

ಅವಳ ಈ ನಿರೂಪಣೆ ನಡೆದಾಗ ಒಂದೆರಡು ವಾಕ್ಯಗಳು ಮುಗಿಯುವಷ್ಟರಲ್ಲಿ ನನ್ನ ಮನಸ್ಸಿಗೆ ಕಟುಸತ್ಯವು ಹೊಳೆಯಿತು. ಮುಂದಿನ ವಾಕ್ಯಗಳು ಕಿವಿಯ ಮೇಲೆ ಬೀಳುತ್ತಿದ್ದರೂ ಅರ್ಥವಾಗುತ್ತಿರಲಿಲ್ಲ. ಮನವು ಬಧಿರನಾಗಿದ್ದಿತು. 'ಕಥೆ ಕೇಳಿ ಕೇಳಿ ಬೇಸರ ಬಂತೇನು?' ಎಂದು ಮಾಲತಿ ಕೇಳಿದಳು.

'ಪೇಸಿಗೆ ಬಂತು' ಎಂದು ನಾನು ಅಂದುಬಿಟ್ಟೆ.

'ನಿಮಗೆ ಹೀಗೆ ಅನಿಸಬಾರದು. ನಿಮ್ಮ ಮೇಲೆ ಇಂಥ ಪ್ರಸಂಗಗಳು ಬಂದಿಲ್ಲವೇ? ನೋಡಿರಿ ನಮ್ಮ ಉದ್ಯೋಗಕ್ಕೆ ಈ ವೃತ್ತಿಯು ಎಂದೂ ಉಪಯೋಗದ್ದಲ್ಲ. ತಪ್ಪುವವನು ಮಾನವ. ಸುಧಾರಿಸುವವನು ವೈದ್ಯ!

ಅಜೀರ್ಣಮಾಡಿಕೊಂಡು ಬಂದವನಿಗೆ ನಾವು ಅವನ ತಿನಸುಬಕ್ಕತನಕ್ಕೆಂದು ಶಿಕ್ಷೆ ಕೊಡಬೇಕೋ ಔಷಧ ಕೊಡಬೇಕೋ ಹೇಳಿರಿ. ನನ್ನ ದೃಷ್ಟಿಯಿಂದಂತೂ ಎರಡರಲ್ಲಿ ಯಾವದೂ ಅಂತರವಿಲ್ಲ!

ಇಷ್ಟಾಗುವಷ್ಟರಲ್ಲಿ ನಾನು ಸಾವರಿಸಿಕೊಂಡೆನು. ಮನಸ್ಸಿನಲ್ಲಿ ನಡೆದ ಕೋಲಾಹಲದ ಮೇಲೆ ಮುಚ್ಚಳವನ್ನಿಕ್ಕಲು ಯತ್ನಿಸಿದೆನು. ಬಹಳೇ ಹೊತ್ತಾಯಿತೆಂದು ಸೋಗುಮಾಡಿ ಹೊರಟೇ ನಿಂತೆನು. ಅವಳಿಗೆ ಆಶ್ಚರ್ಯವಾದಂತೆ ಕಂಡಿತು. ಆದರೆ ನನ್ನ ಮುಖದ ಮೇಲಿನ ನಿಶ್ಚಯದ ಭಾವವನ್ನು ನೋಡಿ ಸುಮ್ಮನಾದಳು. ಡ್ರಾಯವ್ಹರನನ್ನು ಒದರಿ ಕಾರಿನಲ್ಲಿ ನನ್ನನ್ನು ಇಳಕೊಂಡ ಮನೆಗೆ ಕಳಿಸಿ ಬರ ಹೇಳಿದಳು.

ಉಪಸಂಹಾರಃ—ಸಂಭವಿಸಿದ ಸಂಗತಿಗಳಿಂದ ಒಂದು ವಾರದ ವರಿಗೆ ಚಿತ್ರವು ಬಹಳೇ ಪ್ರಕ್ಷುಬ್ಧವಾಗಿತ್ತು. ಆನಂತರ ಕಿರುಕಳ ಪ್ರಶ್ನೆಗಳ ಸಮಾಧಾನವಾಗಿ ಎರಡು ಮುಖ್ಯ ಪ್ರಶ್ನೆಗಳು ಮಾತ್ರ ನಿಶ್ಚಿತ ಉತ್ತರವನ್ನಪೇಕ್ಷಿಸುತ್ತ ನಿಂತಿವೆ. ಅನಕ್ಕೆ ಉತ್ತರ ದೊರೆಯುದೆ ಜೀವನಕ್ಕೆ ಸಮಾಧಾನವಿಲ್ಲ.

(೧) ನಮ್ಮ ಮನೆತನದಲ್ಲಿ 'ಕೆಸರಿ'ನ ಪ್ರವೇಶವಾಯಿತೇ?

(೨) ತಂದೆಯುವರ ಮುಖದಿಂದ ವ್ಯಕ್ತವಾದ ಸಮಾಜದ ಅಪೇಕ್ಷೆಯಂತೆ ನಡೆಯುವ ನಾನು ಜೀವಿತದಲ್ಲಿಯ ಅತ್ಯುಚ್ಚ ಆನಂದಕ್ಕೆ ಎರವಾದೆನೇ?

ಇಷ್ಟು ಮಾತ್ರ ನಾನು ಹೇಳಲೇಬೇಕು. ನನ್ನ ಪತ್ನಿಯಲ್ಲಿ ನನ್ನ ವಿಷಯವಾಗಿರುವ ಪ್ರೇಮಾಚರಣೆಯಲ್ಲಿ ಯಾವ ಬಗೆಯ ಕುಂದನ್ನು ನಾನು ಕಾಣೆ. ಆ ಸುಖಕ್ಕೆ ಇನ್ನು ಮುಂದೆ ಬಾಧೆ ಬಂದರೆ ನನ್ನ ಮನಸ್ಥಿತಿಯ ಮೂಲಕವೇ.

ಸುಧಾರಿಸಿದ ೩ನೆಯ ಆವೃತ್ತಿ ಸಿದ್ಧವಾಗಿದೆ

ಮುಂಬಯಿ ವಿದ್ಯಾಖಾತೆಯವರಿಂದ ಹಳ್ಳಿಯ ಓದು ಮನೆಗಳಿಗೂ ಶಾಲೆ-ಕಾಲೇಜು-ಗಳ ವಾಚನಾಲಯದ ಪುಸ್ತಕವೆಂದು ಮಂಜೂರು ಪಡೆದಿದೆ. ಅಲ್ಲದೆ ಮುಲ್ಕೀಪರೀಕ್ಷೆಗೆ ' ಜನರಲ್ ವಾಚನ ' ವೆಂದು ಮಂಜೂರಾಗಿದೆ.

ಬಿಳೀಕಾಗದ!] ಆರು ಕಥೆಗಳು [ಬೆಲೆ ೧-೪

ದಿ. ಬಿ. ಎಂ. ಶ್ರೀ. ಅವರ ಸುಂದರ ಮುನ್ನುಡಿ.

ಮೊದಲಿನ ಆವೃತ್ತಿಯಲ್ಲಿದ್ದ ಪಂ. ತಾರಾನಾಥರ ' ಸಮಾಧಾನವೊ ? ' ಮತ್ತು ' ಬಯಸಿದ್ದೇನು ' ಎಂಬೆರಡು ಕತೆಗಳ ಬದಲು ಶ್ರೀ. ಮದವೀಡು ಕೃಷ್ಣರಾಯರ ' ರಾಯರ ಮೃತ್ಯುಪತ್ರ ' ಹಾಗೂ ಶ್ರೀ. ಎನ್. ರಾಜಗೋಲ ಕೃಷ್ಣರಾಯರ ' ಕೆಲಸಕ್ಕೆ ಬಾರದ ಕೊರಡು ' ಎಂಬೆರಡು ಸರಸವಾದ ಕತೆಗಳನ್ನು ಸೇರಿಸಲಾಗಿದ್ದು, ಕನ್ನಡ-ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ. ಬಿ. ಎಸ್. ಹಂಚಿನಾಳ, ಅರವಿಂದ ಜೋಶಿ, ಬೀಡೀ ಶಾಮರಾವ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಮಂಡಲಿಯ ಸದಸ್ಯರಾದ ಶ್ರೀ. ಎಂ. ಪಿ. ವಾಲಿಯವರ ಸುಂದರ ಅಭಿಪ್ರಾಯಗಳಿಂದ ಅಚ್ಚಾಗಿದೆ. ಬೇಗನೆ ತರಿಸಿಕೊಳ್ಳಿ !

ಕನ್ನಡ ಪುಸ್ತಕಗಳು ಬೇಕೇ ?

ಬೇಕಾಗಿದ್ದರೆ ಮೊದಲು ನಮ್ಮ ಭಾಂಡಾರಕ್ಕೇ ಭೆಟ್ಟಿಕೊಡಿ !

ಕನ್ನಡ ನಾಡಿನ ಒಳ್ಳೇ ಬರೆಹಗಾರರ ಕೃತಿಗಳು! ಹೈಸ್ಕೂಲು,
ಕಾಲೇಜಗಳ ಪಠ್ಯಪುಸ್ತಕಗಳು ! ಹಿಂದೀ-ಇಂಗ್ರೇಜೀ
ಕನ್ನಡಶಾಲೆಯ ಪುಸ್ತಕಗಳು! ಟ್ರೇನಿಂಗ ಕಾಲೇಜ,
ಹಾಗೂ ಹಳ್ಳೀ ಲೈಬ್ರರಿಯ ಪುಸ್ತಕಗಳು !
ಕಾವ, ಜಾಣ ತರಗತಿಯ ಪುಸ್ತಕಗಳು !
ವ್ಯಾಪಾರಿಗಳಿಗೆ ಯೋಗ್ಯ ಸವಲತ್ತು !

ಕಥಾಕುಂಜ ಗ್ರಂಥ ಭಾಂಡಾರ

ಗಣಪತಿ ಬೀದಿ ೦ ೦ ೦ ಬೆಳಗಾವಿ.

ರಿಗೂ ಕಂಡುಬರದಿರದು. " ಗಂಗೆಯ ಗುತ್ತಿಗೆ " ಯನ್ನು ಇಡೀ ಕರ್ನಾಟ
ಕವೇ ಅರಿತಿದೆ. ದಾಸರ ಹುಡಿಗೆಯ ಚಿತ್ರವು ಸ್ಫುಟವಾಗಿದೆ. ದಾಸರ ಹುಡಿ
ಗೆಯು ವಿಧಿವಶದಿಂದ ನಟಿಯಾಗಿ ಮನಸ್ಸಿನ ಪರಿಪಾಕಕ್ಕೆ ಅವಕಾಶವಿಲ್ಲದೆ
ಹಳ್ಳಕ್ಕೆ ಬೀಳ ... ' ಅಸತ್ಯ
ನಾರಾಯಣ ... ವತಿ "
ಯಲ್ಲಿಯ ...

ಭ ... ರಿಂದ
ಇನ್ನೂ ... ಂಗ್ಲೆ
ಯವರು ... ಕಥೆ
ಗಳನ್ನು ... ಗ್ರಂಥ
ಮಾಲೆಯ ... ನಂದ
ನೀಯ. ...

ಅವರು ... ತರು.
' ಕಥಾ ... ಂತರ
ಮೂಲ ... ತಿಯು
ವರು. ... ತ್ತಿರು
ಮೇಲ್ಕ ... ವವು.
ಕಥೆಗಳ ... ಲ್ಲಿ ೧೦
ಕೂಡಲ ... ಬರೆದ
ಬೇಂದ್ರೆ ... ಶ್ರೀ.
ಮನೋ ... ದಲಿಕ್ಕೆ
ಶ್ರೀ. ... ತ್ಯಕ್ಕೆ
ಮೋಹ ... ರಾಷ್ಟ್ರ
ಶ್ರೀ. ... ತ್ತಿರುವ
... ವಾಗು
ವದು ಆವಶ್ಯಕ. ವಿಜಯ ಗ್ರಂಥಮಾಲೆಯು ...

— ಸಂಪಾದಕರು, ನವಸಂದೇಶ, ಬಳ್ಳಾರಿ.